ಶ್ರೀ ರಾಮಾನುಜ ಭಾರತಿ

ಶ್ರೀ ರಾಮಾನುಜ ಜನಪ್ರಿಯ ಕೃತಿಮಾಲೆ -10

# ಆಳ್ವಾರ್‌ಗಳ ಜೀವನ ಮತ್ತು ಕೃತಿ ಪರಿಚಯ



ಪ್ರಕಾಶಕರು :

ಶ್ರೀ ರಾಮಾನುಜ ಸೇವಾ ಟ್ರಸ್ಟ್, ಬೆಂಗಳೂರು

Alwargala Jeevana mattu Kruti Parichaya Life and Works of Alwars - A brief account by Smt. M.A. Singamma and Smt. M.D. Vedavalli, Bangalore - 560 011.

*First Edition* - 2001

*Price* Rs. 20/-

*No. of Copies* 500

*Publishers:*
**© Sri Ramanuja Seva Trust**
151, 'Adarsha Bhavan'
15th Cross, Malleswaram
Bangalore - 560 055
Phone : 3340153 / 3342224

*Printed by*
**Sri Rama Printers**
25, 15th Cross,
5th Main, Srinidhi Layout
Bangalore - 560 062

# ಮೊದಲ ಮಾತು

ವೇದಾಂತ ದರ್ಶನವನ್ನು ಜನಸಾಮಾನ್ಯರು ಅರಿಯುವಂತೆ ಸಮಾಜ ಸುಧಾರಣೆಯನ್ನು ದೇಶಾದ್ಯಂತ ರೂಪಿಸಿದ ದಾರ್ಶನಿಕರು ಆಚಾರ್ಯ ರಾಮಾನುಜರು. ಕಾಲ್ನಡಿಗೆಯಲ್ಲೇ ಇಡೀ ಭಾರತ ದೇಶದಲ್ಲಿ ಸುತ್ತಾಡಿ ದೇಶದ ಪಾಮರ ಜನತೆಗೆ ಸುಲಭವಾದ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿ ಜನ್ಮಸಾರ್ಥಕತೆ ಉಂಟಾಗುವಂತೆ ದಾರಿತೋರಿಸಿದ ಮಹಾನುಭಾವರು ಇವರು. ಪ್ರಪತ್ತಿ ಸಿದ್ಧಾಂತವನ್ನು ನಿರೂಪಿಸಿ ಯಾವ ಭೇದವೂ ಇಲ್ಲದೆ ಎಲ್ಲರೂ ಮೋಕ್ಷ ಸಾಮ್ರಾಜ್ಯವನ್ನು ಪಡೆಯಬಹುದೆಂದು ಘೋಷಿಸಿದ ಮಹನೀಯರಿವರು.

ಶ್ರೀ ರಾಮನುಜರಿಗೂ ಹಿಂದೆ ವೈಷ್ಣವ ದರ್ಶನವನ್ನು ಪ್ರತಿಪಾದಿಸಿ ಬೆಳೆಸಿದುದು ಶ್ರೀಮನ್ನಾಥಮುನಿಗಳ ಪರಂಪರೆ. ಹನ್ನೆರಡು ಆಳ್ವಾರುಗಳ ತಮಿಳು ಪ್ರಬಂಧಗಳನ್ನು ಕ್ರೋಢೀಕರಿಸಿ ದೇವಾಲಯಗಳಲ್ಲಿ ಭಕ್ತಿಯಿಂದ ಗಾನ ಮಾಡುವ ಸಂಪ್ರದಾಯವನ್ನು ಪ್ರವರ್ತಿಸಿದವರು ನಾಥಮುನಿಗಳು. ಈ ಹನ್ನೆರಡು ಆಳ್ವಾರ್‌ಗಳಲ್ಲಿ ಉಚ್ಚನೀಚ ಭಾವನೆಗೆ ಎಡೆ ಇಲ್ಲ. ಎಲ್ಲರೂ ಭಗವಂತನನ್ನು ನಿರಂತರವಾಗಿ ಅನುಭವಿಸುತ್ತಾ ಲೋಕಹಿತಕ್ಕಾಗಿ ಪ್ರಬಂಧಗಳನ್ನು ಉದ್ಗರಿಸಿ ನಮ್ಮಂತಹ ಪಾಮರರು ಅನುಸಂಧಾನ ಮಾಡಿ ಉಜ್ಜೀವಿಸುವಂತೆ ಅನುಗ್ರಹಿಸಿಕೊಟ್ಟಿದ್ದಾರೆ. ಇಂತಹ ಆಳ್ವಾರುಗಳ ದಿವ್ಯ ಚರಿತೆಯನ್ನೂ ಅವರ ಕೃತಿಗಳ ಪರಿಚಯವನ್ನೂ ಕನ್ನಡಿಗರಾದ ನಾವು ಅರಿತು ತಮಿಳು ಪ್ರಬಂಧಗಳ ಅರ್ಥಾನುಸಂಧಾನ ಮಾಡುತ್ತಾ ಪಾರಾಯಣ, ಗಾನಾನುಭವಗಳನ್ನು ಪಡೆಯಬಹುದು. ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಪಳಗಿರುವ ಕನ್ನಡತಿಯರಾದ ಶ್ರೀಮತಿ ಎಂ.ಎ. ಸಿಂಗಮ್ಮ ಮತ್ತು ಶ್ರೀಮತಿ ಎಂ.ಡಿ. ವೇದವಲ್ಲಿ ಅವರುಗಳು ಈ ಹೊತ್ತಿಗೆಯಲ್ಲಿ ಆಳ್ವಾರುಗಳ ಜೀವನ

ಮತ್ತು ಕೃತಿಗಳ ಪರಿಚಯವನ್ನು ಚೆನ್ನಾಗಿಯೇ ನೀಡಿದ್ದಾರೆ. ಇವರುಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

*ಶ್ರೀ ರಾಮಾನುಜ ಜನಪ್ರಿಯ ಗ್ರಂಥಮಾಲೆ* ಶ್ರೀ ರಾಮಾನುಜರ ಸಿದ್ಧಾಂತವನ್ನು ಕನ್ನಡಿಗರಿಗೆ ಸುಲಭವಾಗಿ ಎಟುಕುವಂತೆ ಸಣ್ಣ ಪುಸ್ತಕಗಳನ್ನು ಪ್ರಕಾಶಿಸುವ ಉದ್ದೇಶದಿಂದ ರೂಪಿತವಾಗಿದೆ. ಈ ಮಾಲೆಯಲ್ಲಿ ಹತ್ತನೆಯ ಪುಷ್ಪವನ್ನು ಓದುಗರು ಎಂದಿನಂತೆ ಸ್ವಾಗತಿಸುತ್ತಾರೆಂದು ಆಶಿಸುತ್ತೇವೆ. ಇದೇ ರೀತಿ ಸುಲಭ ಗ್ರಂಥಗಳನ್ನು ಹೊರತರುವ ಹಂಬಲ ನಮ್ಮದು. ಓದುಗರ ಪ್ರೋತ್ಸಾಹವನ್ನು ಸ್ವಾಗತಿಸುತ್ತೇವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಮೆ|| ಶ್ರೀರಾಮ ಪ್ರಿಂಟರ್ಸ್ ಅವರಿಗೆ ನಮ್ಮ ಹಾರ್ದಿಕ ಧನ್ಯವಾದಗಳು.

ವಿಕ್ರಮ ಸಂ. ಫಾಲ್ಗುಣ ಕೃಷ್ಣಸಪ್ತಮಿ<br>
ಶುಕ್ರವಾರ, ದಿನಾಂಕ 16-3-2001

**- ಪ್ರಕಾಶಕರು**

# ಮುನ್ನುಡಿ

ಶ್ರೀವೈಷ್ಣವ ಮತದಲ್ಲಿ ಆಳ್ವಾರ್ರುಗಳಿಗೂ, ಅವರ ದಿವ್ಯಪ್ರಬಂಧಗಳಿಗೂ ಮತ್ತು ಆಚಾರ್ಯರುಗಳಿಗೂ, ಅವರು ರಚಿಸಿರುವ ವ್ಯಾಖ್ಯಾನ ಗ್ರಂಥಗಳಿಗೂ ಬಹಳ ಪ್ರಾಮುಖ್ಯತೆ ಕೊಡಲ್ಪಟ್ಟಿದೆ. ಆಳ್ವಾರ್ರುಗಳು ಸಹಸ್ರಾರು ವರ್ಷಗಳ ಹಿಂದೆ ಇದ್ದರೆಂದು ತಿಳಿಸಲ್ಪಟ್ಟಿದೆ. ಇವರು ಭಾರತ ದೇಶದ ದಕ್ಷಿಣ ಭಾಗದಲ್ಲಿ ಅವತರಿಸಿ ಭಗವದ್ಭಕ್ತಿಯ ಮಹಿಮೆಯನ್ನು ಪ್ರಚಾರಪಡಿಸಿದ್ದಾರೆ.

ಆಳ್ವಾರ್ ಎಂಬುದಕ್ಕೆ 'ಆಳವಾಗಿ ಮುಳುಗಿದವರು' ಎಂದು ಅರ್ಥ. ಇವರು ಭಗವಂತನ ಕಲ್ಯಾಣಗುಣ ಸಾಗರದಲ್ಲಿ ಆಳವಾಗಿ ಮುಳುಗಿ ಆನಂದಭರಿತರಾಗಿ ತಾವು ಪಡೆದ ಆನಂದವನ್ನು ತಮಿಳು ಪಾಶುರಗಳ ಮೂಲಕ ತಿಳಿಸಿದ್ದಾರೆ. ಇವರ ಪಾಶುರಗಳಲ್ಲಿ ಮಾನವರು ಅರಿಯಬೇಕಾದ ತತ್ತ್ವ ಹಿತ ಪುರುಷಾರ್ಥಗಳು ಚೆನ್ನಾಗಿ ತಿಳಿಸಲ್ಪಟ್ಟಿವೆ. ಇವರು ತಮಿಳು ನಾಡಿನಲ್ಲಿ ಜನಿಸಿದವರಾಗಿದ್ದರೂ, ತಮ್ಮ ದಿವ್ಯ ಪ್ರಬಂಧಗಳಲ್ಲಿ ಭಾರತ ದೇಶದ ಶ್ರೀವೈಷ್ಣವ ದಿವ್ಯಕ್ಷೇತ್ರಗಳಲ್ಲಿರುವ ಅನೇಕ ದಿವ್ಯ ಅರ್ಚಾಮೂರ್ತಿಗಳಿಗೆ ಮಂಗಳ ಹಾಡಿದ್ದಾರೆ. ಮತ್ತು ಮಾನವರೆಲ್ಲರಿಗೂ, ತಮ್ಮ ಪಾಶುರಗಳಲ್ಲಿ ಉಪದೇಶ ನೀಡಿದ್ದಾರೆ.

ಆಳ್ವಾರ್ರುಗಳಲ್ಲಿ ಎಲ್ಲಾ ಜಾತಿಯವರೂ, ಗಂಡಸರೂ, ಹೆಂಗಸರೂ ಇರುವುದರಿಂದ ಅವರಲ್ಲಿ ವರ್ಣಭೇದವಾಗಲಿ, ಜಾತಿ ಭೇದವಾಗಲಿ, ಪಂಡಿತಪಾಮರ ಭೇದವಾಗಲಿ ಇಲ್ಲ. ಇದರಿಂದ ಭಗವದ್ಭಕ್ತಿಗೆ ಸರ್ವರೂ ಅಧಿಕಾರಿಗಳೆಂಬುದು ವ್ಯಕ್ತವಾಗುತ್ತದೆ. ಆಳ್ವಾರ್ರುಗಳು ಹಾಡಿರುವ ಭಕ್ತಿಭರಿತವಾದ ಪದ್ಯಗಳಿಗೆ ದಿವ್ಯ ಪ್ರಬಂಧಗಳೆಂದು ಹೆಸರು. ಅವುಗಳು ದ್ರಾವಿಡ ವೇದವೆಂದೂ ಪ್ರಸಿದ್ಧಿ ಪಡೆದಿವೆ. ಆಳ್ವಾರ್ರುಗಳು ತಮ್ಮ ದಿವ್ಯ

ಪ್ರಬಂಧಗಳಲ್ಲಿ ಪರಮಾತ್ಮನಿಗೆ ಮಂಗಳ ಹಾಡಿ, ಅವನ ಕಲ್ಯಾಣಗುಣಗಳನ್ನು ವರ್ಣಿಸಿ, ಅವನಲ್ಲಿ ಭಕ್ತಿಭರಿತವಾದ ಪ್ರಾರ್ಥನೆಗಳನ್ನು ಸಲ್ಲಿಸಿದ್ದಾರೆ. ಅಷ್ಟು ಮಾತ್ರವಲ್ಲದೆ ಮಾನವರಿಗೆ ಉತ್ತಮವಾದ ಉಪದೇಶಗಳನ್ನೂ ನೀಡಿದ್ದಾರೆ.

ಆದರೆ ಈ ದಿವ್ಯ ಪ್ರಬಂಧಗಳು ಆಳ್ವಾರ್ರುಗಳ ಕಾಲವಾದ ಮೇಲೆ ಜನಗಳಿಗೆ ಲಭಿಸದೆ ಮರೆತು ಹೋಗಿದ್ದವು. ಅನಂತರ ಶ್ರೀ ನಾಥಮುನಿಗಳ ಅವತಾರವಾದ ಮೇಲೆ ಅವರು ನಮ್ಮಾಳ್ವಾರ್ರವರನ್ನು ಭಕ್ತಿಯಿಂದ ಪ್ರಾರ್ಥಿಸಿ ಆ ದಿವ್ಯ ಪ್ರಬಂಧಗಳನ್ನು ಅವರಿಂದ ಅರಿತವರಾಗಿ, ಅವುಗಳು ಇಂದೂ ನಮಗೆ ಲಭಿಸುವಂತೆ ಅನುಗ್ರಹಿಸಿದ್ದಾರೆ. ಆಳ್ವಾರ್ರುಗಳ ಪ್ರಬಂಧಗಳು ಒಟ್ಟು ನಾಲ್ಕು ಸಾವಿರ ಪಾಶುರಗಳಿಂದ ಕೂಡಿವೆ. ಶ್ರೀ ಯಾಮುನಾಚಾರ್ಯರೂ ಮತ್ತು ಶ್ರೀ ರಾಮಾನುಜಾಚಾರ್ಯರೂ ಅವತರಿಸಿ ಆಳ್ವಾರ್ರುಗಳ ಉಪದೇಶಗಳನ್ನೂ ನಾಲ್ಕು ಸಾವಿರ ದಿವ್ಯ ಪ್ರಬಂಧಗಳನ್ನೂ ಪ್ರಚಾರ ಮಾಡಿ ಜನಸಾಮಾನ್ಯರು ಅರಿಯುವಂತೆ ಅವುಗಳಿಗೆ ಅರ್ಥ ವಿಶೇಷಾರ್ಥಗಳನ್ನು ಸುಲಭ ರೀತಿಯಲ್ಲಿ ತಿಳಿಸಿ ವ್ಯಾಖ್ಯಾನಗಳನ್ನು ಬರೆಯಿಸಿ ಜನರಿಗೆ ಭಕ್ತಿ ಪ್ರಪತ್ತಿ ಮಾರ್ಗಗಳನ್ನು ಉಪದೇಶಿಸಿ ಉಪಕಾರ ಮಾಡಿದ್ದಾರೆ. ಕೆಲವು ಮುಖ್ಯವಾದ ಪಾಶುರಗಳನ್ನು ವಿಷ್ಣುದೇವಾಲಯಗಳಲ್ಲಿ ನಿತ್ಯವೂ ಅನುಸಂಧಾನ ಮಾಡಬೇಕೆಂದು ಶ್ರೀ ರಾಮಾನುಜಾಚಾರ್ಯರು ನೇಮನಮಾಡಿದ್ದಾರೆ. ಅದು ಇಂದಿಗೂ ಚೆನ್ನಾಗಿ ಆಚರಿಸಲ್ಪಡುತ್ತಿದೆ.

ಪ್ರಾಚೀನ ಗ್ರಂಥಗಳಲ್ಲಿ ತಿಳಿಸಿರುವ ಶ್ರೀವೈಷ್ಣವ ಆಳ್ವಾರ್ರುಗಳ ಜೀವನ ಚರಿತ್ರೆಯನ್ನೂ ಮತ್ತು ಅವರು ರಚಿಸಿರುವ ದಿವ್ಯ ಪ್ರಬಂಧಗಳ ವಿಷಯವನ್ನೂ ಸಂಕ್ಷೇಪವಾಗಿ ಸುಲಭವಾಗಿ ಕಥೆಯ ರೂಪದಲ್ಲಿ ತಿಳಿಸಬೇಕೆಂಬ ಸದುದ್ದೇಶದಿಂದ ಈ ಚಿಕ್ಕ ಪುಸ್ತಕವು ರಚಿಸಲ್ಪಟ್ಟಿದೆ.

ಇದನ್ನು ಶ್ರೀ ರಾಮಾನುಜ ಜನಪ್ರಿಯ ಕೃತಿ ಮಾಲೆಯ ಹತ್ತನೆಯ ಪುಷ್ಪವಾಗಿ ಪ್ರಕಟಿಸಿರುವ ಶ್ರೀ ರಾಮಾನುಜ ಸೇವಾ ಟ್ರಸ್ಟ್‌ನವರಿಗೆ ನಮ್ಮ

ಕೃತಜ್ಞತೆಗಳನ್ನೂ, ವಂದನೆಗಳನ್ನೂ ಅರ್ಪಿಸುತ್ತೇವೆ. ಈ ಕೃತಿಯನ್ನು ಸಕಾಲಕ್ಕೆ ಅಂದವಾಗಿ ಮುದ್ರಿಸಿಕೊಟ್ಟಿರುವ ಶ್ರೀರಾಮ ಪ್ರಿಂಟರ್ಸ್‌ನವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಇದರ ರಚನೆಗೆ ಮೂಲ ಸೂತ್ರಧಾರನಾದ ಭಗವಂತನ ಪಾದಾರವಿಂದಗಳಲ್ಲಿ ಈ ಗ್ರಂಥ ಪುಷ್ಪವನ್ನು ಸಮರ್ಪಿಸುತ್ತೇವೆ.

ಶ್ರೀ ಕೃಷ್ಣಾರ್ಪಣಮಸ್ತು

1-4-2001
ಬೆಂಗಳೂರು

ಎಂ.ಎ. ಸಿಂಗಮ್ಮ
ಮತ್ತು
ಎಂ.ಡಿ. ವೇದವಲ್ಲಿ

ಶ್ರೀಯೈ ನಮಃ, ಶ್ರೀಧರಾಯ ನಮಃ

ಶ್ರೀಶೈಲೇಶದಯಾಪಾತ್ರಂ ಧೀಭಕ್ತ್ಯಾದಿಗುಣಾರ್ಣವಮ್ ।
ಯತೀನ್ದ್ರಪ್ರವಣಂ ವನ್ದೇ ರಮ್ಯಜಾಮಾತರಂ ಮುನಿಮ್ ॥
ಲಕ್ಷ್ಮೀನಾಥಸಮಾರಂಭಾಂ ನಾಥಯಾಮುನಮಧ್ಯಮಾಮ್ ।
ಅಸ್ಮದಾಚಾರ್ಯಪರ್ಯನ್ತಾಂ ವನ್ದೇ ಗುರುಪರಂಪರಾಮ್ ॥

ಯೋ ನಿತ್ಯಮಚ್ಯುತಪದಾಮ್ಬುಜಯುಗ್ಮರುಕ್ಮ
ವ್ಯಾಮೋಹತಸ್ತದಿತರಾಣಿ ತೃಣಾಯ ಮೇನೇ ।
ಅಸ್ಮದ್ಗುರೋರ್ಭಗವತೋಽಸ್ಯ ದಯೈಕಸಿಂಧೋಃ
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ॥

ಮಾತಾಪಿತಾಯುವತಯಸ್ತನಯಾವಿಭೂತಿಃ
ಸರ್ವಂ ಯದೇವ ನಿಯಮೇನ ಮದನ್ವಯಾನಾಮ್ ।
ಆದ್ಯಸ್ಯ ನಃ ಕುಲಪತೇರ್ವಕುಳಾಭಿರಾಮಂ
ಶ್ರೀಮತ್ತದಙ್ಘ್ರಿಯುಗಳಂ ಪ್ರಣಮಾಮಿ ಮೂರ್ಧ್ನಾ ।

ಭೂತಂ ಸರಶ್ಚ ಮಹದಾಹ್ವಯ ಭಟ್ಟನಾಥ ।
ಶ್ರೀ ಭಕ್ತಿಸಾರ ಕುಲಶೇಖರ ಯೋಗಿವಾಹಾನ್ ॥
ಭಕ್ತಾಂಘ್ರಿರೇಣು ಪರಕಾಲ ಯತೀನ್ದ್ರ ಮಿಶ್ರಾನ್ ।
ಶ್ರೀಮತ್ಪರಾಂಕುಶಮುನಿಂ ಪ್ರಣತೋಽಸ್ಮಿನಿತ್ಯಮ್ ॥

*ಆಳ್ವಾರ್ ಎಂಬೆರುಮಾನಾರ್ ಜೀಯರ್*
*ತಿರುವಡಿಹಳೇ ಶರಣಂ*

# ಉಪೋದ್ಘಾತ

ಶ್ರಿಯಃಪತಿಯಾದ ಸರ್ವೇಶ್ವರನು ಶ್ರೀವೈಕುಂಠದಲ್ಲಿ ನಿತ್ಯ ಮುಕ್ತರುಗಳಿಗೆ ಪರಿಪೂರ್ಣ ಬ್ರಹ್ಮಾನುಭವಸುಖವನ್ನು ಅನುಗ್ರಹಿಸುತ್ತಾ ಇದ್ದಾನೆ ಎಂದು ವೇದಾಂತಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿದೆ. ಈ ಭೂಮಂಡಲದಲ್ಲಿರುವ ಸಮಸ್ತ ಚೇತನರೂ ಆ ಮಹದಾನಂದವನ್ನು ಅನುಭವಿಸಿ ಉಜ್ಜೀವಿಸಲಿ ಎಂದು ಪರಮಾತ್ಮನು ಅವರಿಗೆಲ್ಲಾ ಕರಣಕಳೇಬರಗಳನ್ನು ಅನುಗ್ರಹಿಸಿಕೊಟ್ಟಿದ್ದಾನೆ. ಆದರೆ ಅವರು ಅದನ್ನು ಶಬ್ದಾದಿ ವಿಷಯಾಂತರಗಳಲ್ಲಿ ಪ್ರವರ್ತಿಸಿ, ಹುಟ್ಟು ಸಾವುಗಳಿಂದ ಕೂಡಿದ ಸಂಸಾರ ಸಾಗರದಲ್ಲಿ ಮುಳುಗಿ ಪರಿತಪಿಸುತ್ತಿದ್ದಾರೆ. ಇದನ್ನು ಕಂಡು ಹೇಗಾದರೂ ಮಾಡಿ ಈ ಸಂಸಾರಚೇತನರನ್ನು ಬ್ರಹ್ಮಾನಂದ ಹೊಂದುವಂತೆ ಮಾಡಬೇಕೆಂಬ ಉದ್ದೇಶದಿಂದ, ಅವರಿಗೆ ಒಳ್ಳೆಯದು ಕೆಟ್ಟದ್ದು ಎಂಬುದನ್ನು ಬೋಧಿಸುವುದಕ್ಕಾಗಿ, ಪರಮಾತ್ಮನು ವೇದ, ವೇದಾಂಗ ಇತಿಹಾಸಗಳೇ ಮುಂತಾದ ಅನೇಕ ಶಾಸ್ತ್ರಗಳನ್ನು ಮಹಾಋಷಿಗಳ ಮೂಲಕ ಉಂಟು ಮಾಡಿ ಅನುಗ್ರಹಿಸಿದ್ದಾನೆ.

ಆದರೆ ಈ ಸಂಸಾರಿಗಳು ಅನಾದಿಕರ್ಮವಾಸನಾದೋಷ ದೂಷಿತಾಂತಃಕರಣರಾಗಿ ಇರುವುದರಿಂದ ಆ ಶಾಸ್ತ್ರಪ್ರದೀಪಗಳು ಇವರಿಗೆ ನಿಷ್ಫಲವಾದವು. ಇದನ್ನು ಕಂಡು ಪರಮಾತ್ಮನು ತಾನೇ ಬಂದು ರಾಮ, ಕೃಷ್ಣಾದಿ ರೂಪಗಳನ್ನು ಧರಿಸಿ, ಭೂಲೋಕದಲ್ಲಿ ಅವತರಿಸಿ, ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ ಮಾಡಿ, ತನ್ನ ದಿವ್ಯಮಂಗಳ ಸೌಂದರ್ಯದಿಂದಲೂ, ಉಪದೇಶದಿಂದಲೂ, ತಾನೇ ಅನುಷ್ಠಿಸಿ ತೋರಿಸುವುದರ ಮೂಲಕವೂ, ಸಂಸಾರಿಗಳನ್ನು ತಿದ್ದಿ ಉಜ್ಜೀವಿಸುವಂತೆ ಮಾಡಲು ಪ್ರಯತ್ನಿಸುತ್ತಿದ್ದಾನೆ. ಆದರೆ ಇವರು ರಾಮ ಕೃಷ್ಣಾದಿ ಅವತಾರಗಳ ವಿಷಯದಲ್ಲಿ ಮನುಷ್ಯ ಬುದ್ಧಿ ಹೊಂದಿ, ಅವರುಗಳನ್ನು ಅನಾದರಿಸಿ ಭಗವದವತಾರಗಳಿಂದ ಯಾವ ವಿಶೇಷ

ಉಪಯೋಗವನ್ನೂ ಪಡೆಯದೇ ಇದ್ದಾರೆ. ಇದನ್ನು ಕಂಡು ಇವರ ವಿಷಯದಲ್ಲಿ ಪರಮಾತ್ಮನು ಕರುಣೆ ಹೊಂದಿದವನಾಗಿ ಈ ಸಂಸಾರಿಗಳನ್ನು ಇವರಿಗೆ ಸಜಾತೀಯರಾದ ಮಾನವರ ಮೂಲಕವಾದರೂ ಉಪದೇಶಿಸಿ ತಿದ್ದಿ ಅವರು ಉಜ್ಜೀವಿಸುವಂತೆ ಮಾಡಬಹುದೆಂದು ಯೋಚಿಸಿ, ನಿಶ್ಚಯಿಸಿಕೊಂಡು ಅದಕ್ಕಾಗಿ ಶ್ರೀವತ್ಸ, ಕೌಸ್ತುಭ, ವೈಜಯಂತಿ ವನಮಾಲೆಗಳನ್ನೂ, ಶ್ರೀದೇವಿ, ಭೂದೇವಿ ಮತ್ತು ನೀಳಾದೇವಿಯವರನ್ನೂ, ಶ್ರೀಪಂಚಾಯುಧಗಳನ್ನೂ, ಅನಂತ ಗರುಡ ವಿಷ್ವಕ್ಸೇನ ಪ್ರಭೃತಿಗಳನ್ನೂ ನಿಯಮಿಸಿದ್ದಾನೆ. ಅವರುಗಳು ಈ ಪ್ರಪಂಚದ ದ್ರವಿಡ ಭೂಭಾಗದಲ್ಲಿ ನಾನಾ ವರ್ಣಗಳಲ್ಲಿ ಬಂದು ಅವತರಿಸಿದರು. ಸರ್ವೇಶ್ವರನು ಅವರುಗಳಿಗೆ ಜ್ಞಾನಭಕ್ತಿ ವೈರಾಗ್ಯಗಳನ್ನು ಅನುಗ್ರಹಿಸಿದ್ದಾನೆ. ಅವರೇ ಆಳ್ವಾರುಗಳೆಂದು ಪ್ರಸಿದ್ಧಿಪಡೆದ ದೈವಭಕ್ತರು. ಅವರುಗಳ ಮೂಲಕ ಪರಮಾತ್ಮನು ಸರ್ವಾಧಿಕಾರವಾದ, ದ್ರಾವಿಡವೇದರೂಪವಾದ ದಿವ್ಯಪ್ರಬಂಧವನ್ನು ಕೃಪೆಯಿಂದ ಪ್ರಕಾಶಪಡಿಸಿದ್ದಾನೆ.

ಆಳ್ವಾರುಗಳಲ್ಲಿ ಉಚ್ಚ ನೀಚರೆಂಬ ಭಾವನೆಗೆ ಎಡೆ ಇಲ್ಲ. ಜಾತಿ ಬೇಧವಿಲ್ಲ. ಸ್ತ್ರೀ ಪುರುಷರ ಬೇಧವಿಲ್ಲ. ಭಗವದ್ಭಕ್ತಿಯೇ ಪ್ರಧಾನ. ಅವರು ತಮ್ಮ ದೈವಭಕ್ತಿಯಿಂದ ಭಗವಂತನ ಅನುಗ್ರಹ ಪಡೆದು ಪೂಜ್ಯರಾಗಿದ್ದಾರೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಮಹಾಭಕ್ತರೆನಿಸಿದ ಈ ಆಳ್ವಾರ್ರುಗಳು ಹತ್ತು ಮಂದಿ. ಅವರ ಕ್ರಮವೇನೆಂದರೆ- ಪೊಯ್‌ಹೈ ಆಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್, ಶಿರುಮಳಿಶೈ ಆಳ್ವಾರ್, ನಮ್ಮಾಳ್ವಾರ್, ಶ್ರೀಕುಲಶೇಖರ ಆಳ್ವಾರ್, ಪೆರಿಯಾಳ್ವಾರ್, ತೊಂಡರಡಿಪ್ಪೊಡಿ ಆಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈ ಆಳ್ವಾರ್ ಎಂದು ತಿಳಿಸಲ್ಪಟ್ಟಿದೆ. ಅವರೊಂದಿಗೆ ಶ್ರೀ ನಮ್ಮಾಳ್ವಾರ್ರವರ ಭಕ್ತರಾದ ಮಧುರಕವಿ ಆಳ್ವಾರ್ ಮತ್ತು ಶ್ರೀ ಪೆರಿಯಾಳ್ವಾರ್ರವರ ಸಾಕು ಮಗಳಾದ ಗೋದಾದೇವಿಯವರನ್ನೂ ಸೇರಿಸಿ ಆಳ್ವಾರ್ರುಗಳು ಒಟ್ಟು 12 ಮಂದಿ ಎಂದು ತಿಳಿಸಲ್ಪಟ್ಟಿದೆ. ಇವರುಗಳಿಗೆ

ಪರಮಾತ್ಮನು ತಾನೇ ತನ್ನ ಸಾಕ್ಷಾತ್ಕಾರವು ಲಭಿಸುವಂತೆ ಮಾಡಿರುವುದರಿಂದ ಇವರು ಸುಖವಾಗಿ ಜ್ಞಾನ ಭಕ್ತಿ ವೈರಾಗ್ಯಾದಿಗಳನ್ನು ಹೊಂದಿ, ತಾವು ಅರಿತ ವೇದ ವೇದಾಂಗ ರಹಸ್ಯಾರ್ಥಗಳನ್ನೆಲ್ಲಾ ದ್ರಾವಿಡ ದಿವ್ಯ ಪ್ರಬಂಧಗಳಾಗಿ ರಚಿಸಿದ್ದಾರೆ. ಇವರು ಭಗವದನುಭವಸಾಗರದಲ್ಲಿ ಆಳವಾಗಿ ಮುಳುಗಿ, ಅದರಿಂದ ತಾವು ಪಡೆದ ಆನಂದವನ್ನು ಮಧುರವಾದ ಗೀತಗಳ ರೂಪದಲ್ಲಿ ಹಾಡಿದ್ದಾರೆ ಮತ್ತು ತಾವು ಕಂಡು ಅನುಭವಿಸಿದ ಭಗವದನುಭವವನ್ನು ಲೋಕದ ಜನರಿಗೆ ತಿಳಿಸಿದ್ದಾರೆ.

ಆಳ್ವಾರ್ರುಗಳು ರಚಿಸಿರುವ ಈ ತಮಿಳು ದಿವ್ಯಪ್ರಬಂಧಗಳೇ ತಮಿಳು ವೇದವೆನಿಸಿಕೊಂಡು ಪ್ರಸಿದ್ಧಿ ಪಡೆದಿವೆ. ಈ ದಿವ್ಯ ಪ್ರಬಂಧಗಳನ್ನು ಎಲ್ಲರೂ ಅರಿತು ಉಜ್ಜೀವಿಸಲಿ ಎಂದು ಆಚಾರ್ಯರುಗಳು ಅವುಗಳನ್ನು ಚೆನ್ನಾಗಿ ಪ್ರಚಾರ ಮಾಡಿ ತಿಳಿಸಿದ್ದಾರೆ.

# ಮೊದಲನೆಯ ಆಳ್ವಾರುಗಳು

**ಪೊಯ್‌ಹೈಆಳ್ವಾರ್, ಪೂದತ್ತಾಳ್ವಾರ್ ಮತ್ತು ಪೇಯಾಳ್ವಾರ್**

ದಿವ್ಯಪ್ರಬಂಧಗಳನ್ನು ಅನುಗ್ರಹಿಸಿದ ಪೊಯ್‌ಹೈಯಾರ್, ಪೂದತ್ತಾರ್ ಮತ್ತು ಪೇಯಾರ್ ಎನ್ನುವ ಈ ಮೂವರು ಆಳ್ವಾರುಗಳು ಮೊದಲಾಳ್ವಾರ್‌ಗಳೆಂದು ಪ್ರಸಿದ್ಧಿ ಪಡೆದಿದ್ದಾರೆ.

**ಪೊಯ್‌ಹೈಆಳ್ವಾರ್** - ಇವರು ಕಾಂಚೀ ಮಹಾನಗರದಲ್ಲಿ ಉತ್ತರ ಭಾಗದಲ್ಲಿರುವ ಒಂದು ಪೊತ್ತಾಮರೈ ಎಂಬ ತಟಾಕದಲ್ಲಿ ಒಂದು ಶ್ರೇಷ್ಠವಾದ ಕಮಲ ಪುಷ್ಪದಲ್ಲಿ ಸಿದ್ಧಾರ್ಥ ಸಂವತ್ಸರದ ತುಲಾಮಾಸದ ಶ್ರವಣ ನಕ್ಷತ್ರದಲ್ಲಿ ಶ್ರೀ ಪಾಂಚಜನ್ಯ ಅಂಶರಾಗಿ ಅವತರಿಸಿದರು. ಇವರಿಗೆ **ಪೊಯ್‌ಹೈಆಳ್ವಾರ್** ಎಂದು ಹೆಸರಾಯಿತು.

**ಪೂದತ್ತಾಳ್ವಾರ್** - ಇವರು ಅದೇ ಸಿದ್ಧಾರ್ಥ ಸಂವತ್ಸರದ ತುಲಾಮಾಸದಲ್ಲಿ ಧನಿಷ್ಠಾ ನಕ್ಷತ್ರದಲ್ಲಿ ಅಂದರೆ ಪೊಯ್‌ಹೈ ಆಳ್ವಾರ್ ಹುಟ್ಟಿದ ಮಾರನೆಯ ದಿನ ತಿರುಕ್ಕಡಲ್‌ಮಲ್ಲೈ ಎಂಬ ಮಹಾಬಲಿಪುರದಲ್ಲಿ ಒಂದು ಮಾಧವೀ ಪುಷ್ಪದಲ್ಲಿ ಕೌಮೋದಕೀ ಎಂಬ ಗದಾಂಶರಾಗಿ ಅವತರಿಸಿದರು, ಭೂತಂ ಎಂದರೆ ಸತ್ತು (ತಿರುಳು) ಎಂದು ಅರ್ಥ, ಬ್ರಹ್ಮಜ್ಞಾನವೆಂಬ ಸತ್ತನ್ನು ಅಂದರೆ ತಿರುಳನ್ನು ಹೊಂದಿದ್ದರಿಂದ ಇವರಿಗೆ **ಪೂದತ್ತಾಳ್ವಾರ್** ಎಂದು ಹೆಸರಾಯಿತು. ಅಂದರೆ ಮಹಾತ್ಮರು ಎಂದರ್ಥ.

**ಪೇಯಾಳ್ವಾರ್**- ಅದೇ ಸಿದ್ಧಾರ್ಥ ಸಂವತ್ಸರದ ತುಲಾ ಮಾಸದಲ್ಲಿ ಶತಭಿಷಾ ನಕ್ಷತ್ರದಲ್ಲಿ ಅಂದರೆ ಪೂದತ್ತಾಳ್ವಾರ್ ಹುಟ್ಟಿದ ಮಾರನೆಯ ದಿವಸ ತಿರುವಲ್ಲಿಕ್ಕೇಣಿ ಎಂಬ ದಿವ್ಯದೇಶದಲ್ಲಿರುವ ಮಯಿಲೈ ಮಾನಗರದ ಆದಿಕೇಶವ ಪೆರುಮಾಳ್ ದೇವಸ್ಥಾನದ ಕೊಳದಲ್ಲಿ ಬೆಳೆದ ಒಂದು ಕನ್ನೈದಿಲೆ ಪುಷ್ಪದಲ್ಲಿ ಶ್ರೀ ನಂದಕಾಂಶರಾಗಿ ಇವರು ಅವತರಿಸಿದರು. ಇವರು ಅಪರಿಮಿತವಾದ ಭಗವದ್ಭಕ್ತಿ ಹೊಂದಿದವರಾಗಿದ್ದರು. ಪ್ರಾಪಂಚಿಕ ಜ್ಞಾನದ

ಅರಿವಿಲ್ಲದೆ ಸದಾ ಅಂತರ್ಮುಖರಾಗಿ, ಭಗವಂತನಿಗೆ ನಮಸ್ಕಾರ ಮಾಡುತ್ತಲೂ, ಅವನ ನಾಮಸಂಕೀರ್ತನೆ ಮಾಡುತ್ತಲೂ, ಅಳುತ್ತಲೂ, ನಗುತ್ತಲೂ, ಹಾಡುತ್ತಲೂ ತಮ್ಮ ಕಾಲವನ್ನು ಕಳೆಯುತಿದ್ದುದರಿಂದ ಇವರಿಗೆ **ಪೇಯಾಳ್ವಾರ್** ಎಂಬ ತಿರುನಾಮವು ಉಂಟಾಯಿತು. ಇವರಿಗೆ ಮಹದಾಹ್ವಯರು ಎಂಬ ಇನ್ನೊಂದು ತಿರುನಾಮವೂ ಇದೆ. ಏಕೆಂದರೆ ಇವರಿಗೆ ಮಿಕ್ಕ ಆಳ್ವಾರುಗಳಿಗಿಂತ ಹೆಚ್ಚಾದ ಭಗವದ್ಭಕ್ತಿಯಿದ್ದಿತು ಮತ್ತು ಇವರು ತಿರುಮಳಿಶೈಆಳ್ವಾರ್ರನ್ನು ತಿದ್ದಿದ ಮಹಾತ್ಮರಾಗಿದ್ದುದರಿಂದ ಇವರಿಗೆ ಮಹದಾಹ್ವಯರು ಎಂಬ ಹೆಸರುಂಟಾಯಿತು.

**ಈ ಮೂವರು ಮೊದಲಾಳ್ವಾರ್ರುಗಳ ವೈಭವ**-ಹೀಗೆ ಪುಷ್ಪ ಜಾತರಾಗಿ ಬಂದು ಅವತರಿಸಿದ ಇವರುಗಳು ಪರಮಾತ್ಮನ ನಿರ್ಹೇತುಕ ಕೃಪಾ ಕಟಾಕ್ಷದಿಂದ ರಜೋಗುಣತಮೋಗುಣ ರಹಿತರಾಗಿ, ಸತ್ವಗುಣಭರಿತರಾಗಿ, ಜ್ಞಾನಭಕ್ತಿವೈರಾಗ್ಯಾದಿಗಳನ್ನು ಹೊಂದಿ "**ವಾಸುದೇವ ಸ್ಸರ್ವಮಿತಿ ಸಮಹಾತ್ಮಾ ಸುದುರ್ಲಭಃ**" ಎಂದು ಗೀತೆಯಲ್ಲಿ ಹೇಳಿರುವಂತೆ ಭಗವದ್ಗುಣಾನುಭವವನ್ನೇ ಧಾರಕ ಪೋಷಕ ಭೋಗ್ಯಗಳನ್ನಾಗಿ ಹೊಂದಿ, ಅನ್ನ ಪಾನಾದಿ ವರ್ಜಿತರಾಗಿ, ಸಂಸಾರಿಗಳೊಂದಿಗೆ ಸೇರದೆ, ಒಂದು ದಿವಸ ಇದ್ದ ಸ್ಥಳದಲ್ಲಿ ಇನ್ನೊಂದು ದಿವಸ ಇರದೆ ಗ್ರಾಮೈಕರಾತ್ರರಾಗಿ, ಸುತ್ತಾಡುತ್ತಾ, ತಾವುಗಳು ಒಬ್ಬರನ್ನೊಬ್ಬರು ಅರಿಯದೆ ಒಬ್ಬಂಟಿಗರಾಗಿ ಸುತ್ತುತ್ತಾ ಇದ್ದರು.

ಹೀಗೆ ಬೇರೆ ಬೇರೆಯಾಗಿ ಸಂಚಾರ ಮಾಡಿಕೊಂಡಿದ್ದ ಈ ಮೂರು ಭಾಗವತೋತ್ತಮರನ್ನು ಒಂದೇ ಜಾಗದಲ್ಲಿ ಒಟ್ಟಿಗೆ ಸೇರಿಸಿ, ಇವರುಗಳನ್ನು ಅನುಗ್ರಹಿಸಿ, ಇವರ ಮೂಲಕ ಅಜ್ಞಾನಾಂಧಕಾರದಲ್ಲಿರುವ ಸಂಸಾರಿ ಚೇತನರಿಗೆ, ಜ್ಞಾನಭಕ್ತಿ ವೈರಾಗ್ಯಗಳನ್ನು ಉಂಟುಮಾಡಬೇಕೆಂಬ ಸಂಕಲ್ಪವು ಪರಮಾತ್ಮನಿಗೆ ಉಂಟಾಗಿ ಅದು ಫಲಕಾರಿಯಾಯಿತು.

ಅದು ಹೇಗೆಂದರೆ-ಒಂದು ದಿನ ಸೂರ್ಯಾಸ್ತಮಯವಾದ ಮೇಲೆ ಪೊಯ್‌ಹೈ ಆಳ್ವಾರ್ರು ತಿರುಕ್ಕೋವಿಲೂರ್ ಎಂಬ ದಿವ್ಯದೇಶವನ್ನುಸೇರಿ ಅಲ್ಲಿ

ಮೃಕಂಡು ಮಹರ್ಷಿಗಳ ಮನೆಯನ್ನು ಸೇರಿ, ಅದರ ಪಕ್ಕದಲ್ಲಿದ್ದ ಒಂದು ಚಿಕ್ಕ ಕೊಠಡಿಯಲ್ಲಿ ಮಲಗಿಕೊಂಡಿದ್ದರು. ಅನಂತರ ಭಗವತ್‌ಸಂಕಲ್ಪದಿಂದ ಪೂದತ್ತಾಳ್ವಾರ್ರವರೂ ಅಲ್ಲಿಗೆ ಬಂದು ಸೇರಿದರು. ಒಬ್ಬರಿಗೊಬ್ಬರು ಸಾಷ್ಟಾಂಗ ಪ್ರಣಾಮಾದಿಗಳನ್ನು ಮಾಡಿದ ಮೇಲೆ ಪೊಯ್‌ಹೈಆಳ್ವಾರ್ರು ಆ ಜಾಗದಲ್ಲಿ ಒಬ್ಬರಿಗೆ ಮಲಗಲು ಜಾಗವಿರುವುದಾಗಿಯೂ, ಇಬ್ಬರಿಗೆ ಕುಳಿತು ಕೊಳ್ಳಲು ಜಾಗವಿರುವುದಾಗಿಯೂ ತಿಳಿಸಿದರು. ಅನಂತರ ಅವರಿಬ್ಬರೂ ಅಲ್ಲಿ ಕುಳಿತುಕೊಂಡಿದ್ದರು. ಭಗವತ್ ಸಂಕಲ್ಪದಿಂದ ಪೇಯಾಳ್ವಾರ್ರವರೂ ಅಲ್ಲಿಗೆ ಬಂದು ಸೇರಿದರು. ಒಬ್ಬರಿಗೊಬ್ಬರು ಸಾಷ್ಟಾಂಗ ಪ್ರಣಾಮಾದಿಗಳನ್ನು ಮಾಡಿದಮೇಲೆ ಪೊಯ್‌ಹೈಆಳ್ವಾರ್ರು, ಅವರಿಗೆ ಅಲ್ಲಿ ಒಬ್ಬರಿಗೆ ಮಲಗಲು ಜಾಗವಿರುವುದಾಗಿಯೂ, ಇಬ್ಬರಿಗೆ ಕುಳಿತುಕೊಳ್ಳಲು ಜಾಗವಿರುವುದಾಗಿಯೂ, ಮೂವರು ನಿಂತುಕೊಳ್ಳಲು ಜಾಗವಿರುವುದಾಗಿಯೂ ತಿಳಿಸಿದರು. ಅನಂತರ ಮೂವರೂ ಆ ಇಕ್ಕಟ್ಟಾದ ಜಾಗದಲ್ಲಿ ನಿಂತುಕೊಂಡರು. ಒಬ್ಬರನ್ನೊಬ್ಬರು ನೋಡಿ ಗುರುತಿಸಲಾಗದಷ್ಟು ಕತ್ತಲೆಯಾಗಿದ್ದಿತು. ''ನೀವಾರು'' ''ನೀವಾರು'' ಎಂದು ಒಬ್ಬರನ್ನೊಬ್ಬರು ಕೇಳಿಕೊಂಡರು. ಒಬ್ಬರು ''ನಾನು ಭಗವತ್ ಶೇಷಭೂತನು''ಎಂದರು; ಇನ್ನೊಬ್ಬರು ''ನಾನು ವಾಸುದೇವನ ದಾಸನು'' ಎಂದರು; ಮತ್ತೊಬ್ಬರು ''ನಾನು ಕೋಸಲೇಂದ್ರನ ದಾಸನು'' ಎಂದರು. **''ಮಚ್ಚಿತ್ತಾ ಮದ್ಗತ ಪ್ರಾಣಾ ಬೋಧಯನ್ತಃ ಪರಸ್ಪರಂ''** ಎಂದು ಗೀತೆಯಲ್ಲಿ ಹೇಳಿರುವಂತೆ ಇವರು ಒಬ್ಬರಿಗೊಬ್ಬರು ಶ್ರೀಮನ್ನಾರಾಯಣನ ಗುಣಗಳನ್ನು ಹೇಳಿಕೊಳ್ಳುತ್ತಾ ಇದ್ದರು.

ಆಗ ಪರಮಾತ್ಮನು ಇವರಿಗೆ ಪರಮಕೃಪೆಯನ್ನು ತೋರಿ ಅನುಗ್ರಹಿಸುವುದಕ್ಕಾಗಿ ದಟ್ಟವಾದ ಕತ್ತಲೆಯನ್ನೂ, ಬಹಳ ಜೋರಾದ ಮಳೆಯನ್ನೂ ಉಂಟುಮಾಡಿದನು. ತಾನು ದೊಡ್ಡ ಶರೀರ ಹೊಂದಿದವನಾಗಿ ಇವರ ಹತ್ತಿರ ಹೋಗಿ ಸೇರಿ ಇವರಿಗೆ ಸಹಿಸಲಾಗದಷ್ಟು ಒತ್ತಡವನ್ನು ಉಂಟು ಮಾಡಿದನು. ಆಗ ಇವರು ಇಷ್ಟು ಹೊತ್ತೂ ಇಲ್ಲದ ಈ ಬಹಳ ಇಕ್ಕಟ್ಟಾದ

ಸ್ಥಿತಿಯು ಹೇಗೆ ಉಂಟಾಗಿದೆ; ಬೇರೆ ಯಾರಾದರೂ ಇಲ್ಲಿಗೆ ಬಂದು ಸೇರಿಕೊಂಡಿರುವರೇ ಎಂದು ಶಂಕಿಸಿದರು. ಆಗ ಪೊಯ್‌ಹೈಆಳ್ವಾರ್ರು **''ವೈಯಮ್ ತಹಳಿಯಾ''** ಎಂಬ ಪಾಶುರವನ್ನು ಹಾಡಿ ಅದರಲ್ಲಿ ತಿಳಿಸಿರುವಂತೆ ಒಂದು ವಿಲಕ್ಷಣವಾದ ಜ್ಞಾನಜ್ಯೋತಿಯ ರೂಪದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿದರು. ಪೂದತ್ತಾಳ್ವಾರ್ರು, **''ಅನ್ಬೇತಹಳಿಯಾ''**-ಎಂಬ ಪಾಶುರವನ್ನು ಹಾಡಿ ಅದರಲ್ಲಿ ತಿಳಿಸಿರುವಂತೆ ಜ್ಞಾನ ಸ್ವರೂಪವಾದ ಆತ್ಮ ದೀಪವನ್ನು ಹತ್ತಿಸಿ ಪರಮಾತ್ಮನನ್ನು ಸಾಕ್ಷಾತ್ಕರಿಸಿದರು. ಇವರಿಬ್ಬರ ಜ್ಯೋತಿಯ ಪ್ರಕಾಶದಲ್ಲಿ ಪೇಯಾಳ್ವಾರ್ರು ತಮ್ಮ ಜ್ಞಾನದೃಷ್ಟಿಯಿಂದ ಭಗವಂತನನ್ನು ದರ್ಶಿಸಿ ನಮಸ್ಕರಿಸಿ, ತಾವು ಅವನನ್ನು ದರ್ಶಿಸಿದ್ದನ್ನು **''ತಿರುಕ್ಕಂಡೇನ್, ಪೊನ್ ಮೇನಿ ಕಂಡೇನ್''** ಎಂದು ಪಾಶುರದಲ್ಲಿ ಹಾಡಿ ತಿಳಿಸಿದ್ದಾರೆ. ಈ ರೀತಿ ಮೂವರೂ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಅನುಭವಿಸಿದರು. ಆ ಅನುಭವದ ಆನಂದವನ್ನು ದಿವ್ಯ ಪ್ರಬಂಧಗಳಲ್ಲಿ ರಚಿಸಿ ಅನುಗ್ರಹಿಸಿ ಲೋಕದ ಜನರು ಉಜ್ಜೀವಿಸುವಂತೆ ಕೃಪೆಮಾಡಿದ್ದಾರೆ. ಪೊಯ್‌ಹೈ ಆಳ್ವಾರ್ರು ನೂರು ಪಾಶುರಗಳಿಂದ ಕೂಡಿದ ಮೊದಲನೆಯ ತಿರುವಂದಾದಿಯನ್ನೂ, ಪೂದತ್ತಾಳ್ವಾರ್ರು ನೂರು ಪಾಶುರಗಳಿಂದ ಕೂಡಿದ ಎರಡನೆಯ ತಿರುವಂದಾದಿಯನ್ನೂ, ಪೇಯಾಳ್ವಾರ್ರು ನೂರು ಪಾಶುರಗಳಿಂದ ಕೂಡಿದ ಮೂರನೆಯ ತಿರುವಂದಾದಿಯನ್ನೂ ರಚಿಸಿ ಒಟ್ಟು ಮೂರು ದಿವ್ಯ ಪ್ರಬಂಧಗಳನ್ನು ಅನುಗ್ರಹಿಸಿದ್ದಾರೆ.

ಅನಂತರ ಈ ಮೂವರೂ ತಿರುಕ್ಕೋವಿಲೂರ್ ದೇವಸ್ಥಾನದ ಅರ್ಚಾರೂಪಿಯಾದ ಪರಮಾತ್ಮನನ್ನು ನಮಸ್ಕರಿಸಿ, ಮಂಗಳಾಶಾಸನ ಮಾಡಿ, ಅಲ್ಲಿಂದ ಮೂವರೂ ಬೇರೆ ಬೇರೆ ಮಾರ್ಗಗಳಲ್ಲಿ ಹೊರಟು ಬಹಳ ಕಾಲ ಸಂಚಾರಮಾಡಿ, ಅನೇಕ ದಿವ್ಯಕ್ಷೇತ್ರಗಳಿಗೆ ಹೋಗಿ ಅಲ್ಲಿನ ದಿವ್ಯ ಅರ್ಚಾಮೂರ್ತಿಗಳಿಗೆ ಮಂಗಳಾಶಾಸನ ಮಾಡುತ್ತಾ ಸಾವಿರಾರು ವರ್ಷಗಳು ಈ ಭೂಮಂಡಲದಲ್ಲಿ ಜೀವಿಸಿದ್ದರು. ಇವರು ತಮ್ಮ ದಿವ್ಯಪ್ರಬಂಧಗಳ ಮೂಲಕ ಚೇತನರಿಗೆ ಉಪದೇಶ ಮಾಡಿ ಕೃಪೆ ಮಾಡಿದ್ದಾರೆ.

**ಮೊದಲ್‌ತಿರುವಂದಾದಿ** ಎಂಬ ನೂರು ಪಾಶುರಗಳಲ್ಲಿ ಪೊಯ್‌ಹೈ ಆಳ್ವಾರ್, ಶ್ರೀಮನ್ನಾರಾಯಣನ ದಶಾವತಾರಗಳನ್ನು ಆನಂದದಿಂದ ಅನುಭವಿಸಿ ಹಾಡಿದ್ದಾರೆ. ಭಗವದ್ಭಕ್ತಿಯು ಭಗವತ್ಕೈಂಕರ್ಯರೂಪವಾಗಿ ಪರಿಣಮಿಸಬೇಕೆಂದೂ, ಈ ಕೈಂಕರ್ಯವನ್ನು ಹೊಂದುವ ಭಗವಂತನ ಇಷ್ಟದಂತೆ ಮಾಡುವುದೇ ಉತ್ತಮವಾದ ಕೈಂಕರ್ಯವೆಂದೂ ತಿಳಿಸಿದ್ದಾರೆ. ಪರಮಾತ್ಮನು ಸೃಷ್ಟಿಕಾಲದಲ್ಲಿ ಬ್ರಹ್ಮನಾಗಿಯೂ, ರಕ್ಷಣೆಯ ಕಾಲದಲ್ಲಿ ವಿಷ್ಣುವಾಗಿಯೂ, ಸಂಹಾರಕಾಲದಲ್ಲಿ ರುದ್ರನಾಗಿಯೂ ಪ್ರಕಾಶಿಸುತ್ತಿದ್ದಾನೆಂದೂ, ಶ್ರೀಮನ್ನಾರಾಯಣನೇ ಆತ್ಮನಾಗಿಯೂ ಮಿಕ್ಕವರೆಲ್ಲರೂ ಅವನ ಶರೀರವಾಗಿಯೂ ಇರುವರೆಂದೂ ಇವರು ತಿಳಿಸಿದ್ದಾರೆ.

**ಎರಡನೆಯ ತಿರುವಂದಾದಿ**ಯಲ್ಲಿ ಪೂದತ್ತಾಳ್ವಾರ್, ಭಗವಂತನ ಅವತಾರಗಳ ವಿಷಯವನ್ನು ತಿಳಿಸಿ, ತಮಗೆ ಕೃಷ್ಣಾವತಾರದಲ್ಲಿ ಅತ್ಯಂತ ಅಭಿರುಚಿ ಇದೆ ಎಂಬುದನ್ನು ತಿಳಿಸಿದ್ದಾರೆ, ಭಗವಂತನನ್ನು ತತ್ತ್ವತಃ ಅರಿತು, ಧ್ಯಾನಿಸುವವರ ಹೃದಯದಲ್ಲಿ ಅವನು ನಿತ್ಯವಾಸ ಮಾಡುತ್ತಿರುವನು ಎಂದೂ, ಭಕ್ತಿಯೇ ಭಗವಂತನ ಸಾಕ್ಷಾತ್ಕಾರಕ್ಕೆ ಮಾರ್ಗ ಎಂದೂ ತಿಳಿಸಿದ್ದಾರೆ.

**ಮೂರನೆಯ ತಿರುವಂದಾದಿ**ಯಲ್ಲಿ ಪೇಯಾಳ್ವಾರ್, ಭಕ್ತಿಯೊಂದೇ ಪರಮಾತ್ಮನನ್ನು ಸಾಕ್ಷಾತ್ಕರಿಸಲು ಮಾರ್ಗವೆಂದೂ, ಭಗವನ್ನಾಮಗಳನ್ನು ಧ್ಯಾನಿಸುತ್ತಿದ್ದರೆ ಪರಮಾತ್ಮನು ತಾನಾಗಿಯೇ ನಮ್ಮ ಬಳಿ ಬಂದು ನಮ್ಮ ಕೋರಿಕೆಗಳನ್ನು ನೆರವೇರಿಸುವನೆಂದೂ ತಿಳಿಸಿದ್ದಾರೆ.

ಈ ಮೂವರು ಆಳ್ವಾರ್‌ಗಳೂ ತಮ್ಮ ತಮ್ಮ ಪ್ರಬಂಧಗಳಲ್ಲಿ ಭಗವಂತನ ಸ್ವರೂಪವನ್ನೂ, ಅವನನ್ನು ಪಡೆಯುವುದೇ ಪರಮ ಪುರುಷಾರ್ಥವೆಂಬುದನ್ನೂ, ಅವನನ್ನು ಪಡೆಯುವುದಕ್ಕೆ ಭಕ್ತಿ ಪ್ರಪತ್ತಿಗಳೇ ಉಪಾಯವೆಂಬುದನ್ನೂ ಉಪದೇಶ ಮಾಡಿದ್ದಾರೆ.

ಪೊಯ್ ಹೈ ಆಳ್ವಾರ್ರ ತನಿಯನ್- (ಧ್ಯಾನ ಶ್ಲೋಕ)

ಕಾಂಚ್ಯಾಂ ಸರಸಿ ಹೇಮಾಬ್ಜೇ ಜಾತಂ ಕಾಸಾರಯೋಗಿನಂ।
ಕಲಯೇ ಯಃ ಶ್ರಿಯಃಪತ್ಯೈ ರವಿಂ ದೀಪಮಕಲ್ಪಯತ್॥

ಪೂದತ್ತಾಳ್ವಾರ್ರ ತನಿಯನ್

ಮಲ್ಲಾ ಪುರವರಾಧೀಶಂ ಮಾಧವೀ ಕುಸುಮೋದ್ಭವಂ।
ಭೂತಂ ನಮಾಮಿ ಯೋ ವಿಷ್ಣೋರ್ಜ್ಞಾನದೀಪಮಕಲ್ಪಯತ್॥

ಪೇಯಾಳ್ವಾರ್ರ ತನಿಯನ್

ದೃಷ್ಟ್ವಾ ತುಷ್ಟಾವ ಯೋ ವಿಷ್ಣುಂ ರಮಯಾ ಮಯಿಲಾಧಿಪಂ।
ಕೂಪೇ ರಕ್ತೋತ್ಪಲೇ ಜಾತಂ ಮಹದಾಹ್ವಯಮಾಶ್ರಯೇ॥

# ತಿರುಮಳಿಶೈ ಆಳ್ವಾರ್

ಮಹಿಷಾಸುರಕ್ಷೇತ್ರವೆಂದು ಪ್ರಸಿದ್ಧಿ ಪಡೆದ ತಿರುಮಳಿಶೈ ಎಂಬ ಕ್ಷೇತ್ರದಲ್ಲಿ ಇವರ ಅವತಾರವಾಯಿತು. ಆ ಕ್ಷೇತ್ರದಲ್ಲಿ ಅನೇಕ ಮಹರ್ಷಿಗಳು ಜಿತೇಂದ್ರಿಯರಾಗಿ ಮಹಾತಪಸ್ವಿಗಳಾಗಿ ಇದ್ದರು. ಅವರಲ್ಲಿ ಭಾರ್ಗವರೆಂಬ ಋಷಿಯು ಒಂದು ಮಹಾಯಜ್ಞವನ್ನು ಮಾಡಿ ಭಗವಂತನನ್ನು ಆರಾಧಿಸುತ್ತಿದ್ದರು. ಅದನ್ನು ಸಹಿಸದೆ ದೇವತೆಗಳು ಅವರ ತಪೋಭಂಗ ಮಾಡುವುದಕ್ಕಾಗಿ ಕನಕಾಂಗಿ ಎಂಬ ಅಪ್ಸರ ಸ್ತ್ರೀಯನ್ನು ಕಳುಹಿಸಿದರು. ಅವಳ ಮೋಹಬಲೆಯಲ್ಲಿ ಸಿಕ್ಕಿಕೊಂಡ ಅವರು ಅವಳೊಂದಿಗೆ ಕೆಲವು ಕಾಲ ಇದ್ದರು. ಅವಳಿಗೆ ತೈಮಾಸ ಮಖಾ ನಕ್ಷತ್ರದಲ್ಲಿ ಶ್ರೀ ಸುದರ್ಶನ ಆಳ್ವಾರ್‌ರವರ ಅಂಶವಾಗಿ ಅವಯವರಹಿತವಾಗಿ, ಪಿಂಡಾಕಾರವಾಗಿ ಒಂದು ಶಿಶುವು ಹುಟ್ಟಿತು. ಅದನ್ನು ಸಮೀಪದಲ್ಲಿ ಇದ್ದ ಒಂದು ಪೊದೆಯಲ್ಲಿ ಎಸೆದು ಅವಳು ಹೊರಟು ಹೋದಳು. ಪ್ರಬುದ್ಧರಾದ ಭಾರ್ಗವರೂ ತಮ್ಮ ತಪೋ ಭಂಗವಾದುದಕ್ಕೆ ಪಶ್ಚಾತ್ತಾಪಪಟ್ಟು ಬೇರೊಂದು ಕಡೆ ಹೋಗಿ ಮತ್ತೆ ತಪೋನಿಷ್ಠರಾದರು.

ಪೊದೆಯಲ್ಲಿ ಎಸೆಯಲ್ಪಟ್ಟ ಆ ಪಿಂಡವು ಸರ್ವಲಕ್ಷಣಸಂಪನ್ನವಾದ ಒಂದು ಗಂಡು ಮಗುವಾಗಿ ಪರಿಣಮಿಸಿ ಹಸಿವುದಾಹಗಳಿಂದ ಅಳುತ್ತಾ ಇದ್ದಿತು. ಆಗ ಆ ಊರಿನ ಜಗನ್ನಾಥ ದೇವರು ಶ್ರೀದೇವಿ ಸಹಿತ ಬಂದು ಆ ಶಿಶುವನ್ನು ಕಟಾಕ್ಷಿಸಿ, ತಮ್ಮ ದರ್ಶನವನ್ನು ಇತ್ತು ಅನುಗ್ರಹಿಸಿ, ಅಂತರ್ಧಾನರಾದರು. ಆಗ ಮತ್ತೆ ಆ ಶಿಶುವು ಅಳಲು ಆರಂಭಿಸಲು ಅಲ್ಲಿಯೇ ಹತ್ತಿರದಲ್ಲಿ ಬಿದಿರುಹೆಣೆಯುವ ಕೆಲಸ ಮಾಡುತ್ತಿದ್ದ **ತಿರುವಾಳರ್** ಎಂಬುವರು ಬಂದು ಆ ಮಗುವನ್ನು ತಮ್ಮ ಮನೆಗೆ ಎತ್ತಿಕೊಂಡು ಹೋದರು. ಮಕ್ಕಳಿಲ್ಲದ ಅವರೂ ಅವರ ಪತ್ನಿಯೂ ಆ ಮಗುವನ್ನು ಪ್ರೀತಿಯಿಂದ ಬೆಳಸಿದರು. ಆದರೆ

ಆ ದೇವಶಿಶುವಾಗಿದ್ದ **ತಿರುಮಳಿಶೈ ಆಳ್ವಾರ್ರು** ಸ್ತನ್ಯಪಾನಾದಿಗಳಲ್ಲಿ ಆಸೆಯಿಲ್ಲದೆ ಪರಿಶುದ್ಧರಾಗಿ ಭಗವದ್ಗುಣಾನುಭವವೊಂದನ್ನೇ ಧಾರಕ ಪೋಷಕವಾಗಿ ಹೊಂದಿ ಬಾಲಸೂರ್ಯನಂತೆ ಬೆಳೆಯುತ್ತಾ ಬಂದರು.

ಈ ಆಶ್ಚರ್ಯವನ್ನು ಅರಿತು ಮಕ್ಕಳಿಲ್ಲದಿದ್ದ ವೃದ್ಧರೊಬ್ಬರು ತಮ್ಮ ಪತ್ನಿಯೊಂದಿಗೆ ನಿತ್ಯವೂ ಬಂದು ಇವರಿಗೆ ಭಕ್ತಿಯಿಂದ ಹಾಲನ್ನು ತಂದುಕೊಡುತ್ತಿದ್ದರು. ಅವರ ಭಕ್ತಿಯನ್ನು ನೋಡಿ ಆಳ್ವಾರ್ರು ಸಂತುಷ್ಟರಾಗಿ ಅವರಿಗೆ ಒಬ್ಬ ಪುತ್ರನು ಜನಿಸುವಂತೆ ಅನುಗ್ರಹಿಸಿದರು. ಅವರ ಅನುಗ್ರಹದಿಂದ ಜನಿಸಿದ ಆ ಶಿಶುವಿಗೆ **ಕಣಿಕಣ್ಣನೆಂದು** ನಾಮಕರಣವನ್ನು ಮಾಡಿದರು. ಆ ಬಾಲಕನು ಇವರ ಕಟಾಕ್ಷದಿಂದ ಒಳ್ಳೆಯ ಜ್ಞಾನ ಹೊಂದಿ ಭಗವದ್ಭಾಗವತ ಭಕ್ತಿಸಂಪನ್ನನಾಗಿ ಬೆಳೆದನು.

ಏಳು ವರ್ಷಗಳಾದ ಮೇಲೆ ಭಾರ್ಗವಕುಮಾರರಾದ ತಿರುಮಳಿಶೈ ಆಳ್ವಾರ್ರು ಅಷ್ಟಾಂಗ ಯೋಗ ನಿಷ್ಠೆಯನ್ನು ಪಡೆಯುವುದಕ್ಕೋಸ್ಕರ ಅನೇಕ ಸ್ಥಳಗಳನ್ನು ಸುತ್ತಿ, ಶಿವನ ಮಹಿಮೆಯನ್ನು ಅರಿಯಲು ಅನೇಕ ಗ್ರಂಥಗಳನ್ನು ಓದಿದರು. ಅದರಲ್ಲಿ ಶ್ರದ್ಧೆಯನ್ನು ಹೊಂದಿ 'ಶಿವವಾಕ್ಕಿಯರ್' ಎಂಬ ಹೆಸರನ್ನು ಪಡೆದು ಏಕಾಂಗಿಯಾಗಿ ಶಿವನನ್ನು ಧ್ಯಾನಿಸುತ್ತಿದ್ದರು. ಹೀಗೆ ಇರಲು ಮೊದಲಾಳ್ವಾರ್ರುಗಳಲ್ಲಿ ಒಬ್ಬರಾದ ಪೇಯಾಳ್ವಾರ್ರು ಅಲ್ಲಿಗೆ ಬಂದು ಇವರು ಶೈವರಾಗಿರುವುದನ್ನು ಅರಿತು, ಮನಸ್ಸಿನಲ್ಲಿ ವ್ಯಾಕುಲ ಹೊಂದಿದರು. ಇವರೊಂದಿಗೆ ವಾದವಿವಾದಗಳನ್ನು ಮಾಡಿ, ಇವರಿಗೆ ಪರಾತ್ಪರನಾದ ಶ್ರೀಮನ್ನಾರಾಯಣನ ಮಹಿಮೆಯನ್ನು ತಿಳಿಸಿ ವೈಷ್ಣವ ಮತದಲ್ಲಿ ಇವರಿಗೆ ಶ್ರದ್ಧೆ ಉಂಟಾಗುವಂತೆ ಮಾಡಿದರು. ತಿರುಮಳಿಶೈಆಳ್ವಾರ್ರು ಪೇಯಾಳ್ವಾರ್ರ ಶಿಷ್ಯರಾಗಿ ಅವರ ಬಳಿ ಪಂಚಸಂಸ್ಕಾರವನ್ನು ಪಡೆದು ಶ್ರಿಯಃಪತಿಯ ಧ್ಯಾನ ಮಾಡುತ್ತಾ ಕಾಲ ಕಳೆಯುತ್ತಿದ್ದರು.

ಒಂದು ಸಲ ಶಿವನಿಗೂ ತಿರುಮಳಿಶೈ ಆಳ್ವಾರ್ರಿಗೂ ವಾದವುಂಟಾಗಲು ಇವರು ಶ್ರೀಮನ್ನಾರಾಯಣನಲ್ಲಿ ತಮಗೆ ಇರುವ ಭಕ್ತಿಯನ್ನು

ಪ್ರತಿಪಾದಿಸಿದರು. ಶಿವನು ಇವರ ಭಕ್ತಿಯನ್ನು ಮೆಚ್ಚಿ ಇವರಿಗೆ **"ಭಕ್ತಿಸಾರರು"**- ಎಂಬ ಬಿರುದನ್ನು ದಯಪಾಲಿಸಿದನು. ಶುಕ್ತಿಸಾರನೆಂಬ ಒಬ್ಬ ಸಿದ್ಧನು ಇವರನ್ನು ಪರೀಕ್ಷಿಸಲು ಇವರಿಗೆ ಬಹಳ ಬೆಲೆಬಾಳುವ ವಸ್ತ್ರವನ್ನೂ, ಮಣಿಮಾಲೆಗಳನ್ನೂ ಧರಿಸಿಕೊಳ್ಳಲು ಕೊಟ್ಟನು. ಆದರೆ ಇವರು ಅವುಗಳನ್ನೆಲ್ಲಾ ತಿರಸ್ಕರಿಸಿ ತಮ್ಮ ಶಕ್ತಿ ಪ್ರಭಾವಗಳಿಂದ ಮಾಣಿಕ್ಯಮಯವಾದ ಕವಚವನ್ನೂ, ನವರತ್ನ ಮಾಲೆಯನ್ನೂ ತಾವೇ ಸೃಷ್ಟಿಸಿದರು. ಇದನ್ನು ನೋಡಿ ಶುಕ್ತಿಸಾರನು ನಾಚಿಕೆಯನ್ನು ಹೊಂದಿ ಅವಮಾನಿತನಾಗಿ ಇವರಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಇವರಿಂದ ಬೀಳ್ಕೊಂಡನು. ಅನಂತರ ಕೊಂಕಣ ಸಿದ್ಧನೆಂಬ ಒಬ್ಬ ರಸವಾದಿಯು ಇವರನ್ನು ಪರೀಕ್ಷಿಸಲು ಬಂದು ಇವರಿಂದ ಪರಾಜಿತನಾಗಿ ಇವರ ಪ್ರಭಾವವನ್ನು ಅರಿತು ಬಹಳ ಭಕ್ತಿಯಿಂದ ಇವರಿಗೆ ನಮಸ್ಕರಿಸಿ ಬೀಳ್ಕೊಂಡನು.

ಅನಂತರ ಭಕ್ತಿಸಾರರು ಒಂದು ಪರ್ವತದ ಗುಹೆಯಲ್ಲಿ ಯೋಗಾಭ್ಯಾಸದಲ್ಲಿ ನಿರತರಾಗಿದ್ದರು. ದಿವ್ಯದೇಶದ ಯಾತ್ರೆಗೆ ಹೊರಟಿದ್ದ ಮೊದಲಾಳ್ವಾರ್ರುಗಳು ಮೂವರೂ ಇವರಲ್ಲಿಗೆ ಬಂದರು. ಈ ನಾಲ್ವರೂ ಸೇರಿ ಸದಾಕಾಲವೂ ಭಗವದ್ಗುಣಾನುಭವದಲ್ಲಿ ಮಗ್ನರಾಗಿ ತಪಸ್ವಿಗಳಾಗಿದ್ದರು. ಎಲ್ಲರೂ ಪೇಯಾಳ್ವಾರ್ರವರ ಅವತಾರ ಸ್ಥಳವಾದ ಮಯೂರಪುರಿಗೆ ಹೋಗಿ ಅಲ್ಲಿ ಕೆಲವು ಕಾಲ ಯೋಗಾನುಷ್ಠಾನ ನಿಷ್ಠರಾಗಿ ಇದ್ದರು. ಅನಂತರ ಮೊದಲಾಳ್ವಾರ್ರುಗಳು ಮೂವರೂ ಭೂಸಂಚಾರ ಮಾಡಲು ಅಲ್ಲಿಂದ ತೆರಳಿದರು. ತಿರುಮಳಿಶೈ ಆಳ್ವಾರ್ರು ತಮ್ಮ ಜನ್ಮಭೂಮಿಯಾದ ಮಹಿಷಾಸುರಪುರಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಇದ್ದು, ಅನಂತರ ಕಾಂಚೀಪುರಕ್ಕೆ ಹೋಗಿ ಭಗವದ್ಧ್ಯಾನ ಮಾಡುತ್ತಾ ಬಹಳ ಕಾಲ ಇದ್ದರು.

ಕಣಿಕಣ್ಣನ್ ತನ್ನ ಆಚಾರ್ಯರಾದ ತಿರುಮಳಿಶೈಯವರಿಗೆ ಶುಶ್ರೂಷೆ ಮಾಡುತ್ತಾ ಅವರೊಂದಿಗೆ ಇದ್ದನು. ಒಬ್ಬ ವೃದ್ಧ ಸ್ತ್ರೀಯು ಅವರು ಇದ್ದ ಜಾಗವನ್ನು ನಿತ್ಯವೂ ಶುದ್ಧಿ ಮಾಡುವ ಕೈಂಕರ್ಯವನ್ನು ಮಾಡುತ್ತಿದ್ದಳು. ಅವಳು ಅವರನ್ನು ಒಲಿಸಿ ಅವರ ವರಪ್ರಸಾದದಿಂದ ಯೌವನವನ್ನು ಪಡೆದಳು.

ಸೌಂದರ್ಯವತಿಯಾದ ಅವಳನ್ನು ಮೋಹಿಸಿ ಅಲ್ಲಿನ ರಾಜನು ಅವಳನ್ನು ವಿವಾಹವಾಗಿ ಅವಳೊಂದಿಗೆ ವಾಸಿಸುತ್ತಿದ್ದನು. ಕಾಲಕ್ರಮದಲ್ಲಿ ಅವನಿಗೆ ವಾರ್ಧಕ್ಯವು ಉಂಟಾಯಿತು. ಆದರೆ ಅವಳ ಸೌಂದರ್ಯವು ಮಾತ್ರ ಒಂದೇ ರೀತಿಯಾಗಿ ಇದ್ದಿತು. ಅವಳಿಂದ ರಾಜನು ಆಳ್ವಾರ್ರ ಅನುಗ್ರಹವೇ ಇದಕ್ಕೆ ಕಾರಣವೆಂಬುದನ್ನು ತಿಳಿದನು. ತನಗೂ ಯೌವನವನ್ನು ದಯಪಾಲಿಸಲಿ ಎಂದು ಆಳ್ವಾರ್ರವರ ಹತ್ತಿರ ಪುರುಷಕಾರ ಮಾಡುವಂತೆ ಕಣಿಕಣ್ಣನವರನ್ನು ಪ್ರಾರ್ಥಿಸಿದನು. ಆದರೆ ಅವರು ಅದನ್ನು ನಿರಾಕರಿಸಿದರು. ರಾಜನು ಅವರನ್ನು ತಕ್ಷಣ ಆ ಊರನ್ನು ಬಿಟ್ಟು ಹೊರಟು ಹೋಗುವಂತೆ ಆಜ್ಞಾಪಿಸಿದನು. ಇದನ್ನು ತಿಳಿದ ಆಳ್ವಾರ್ರು ತಾವು ಪೂಜಿಸುತ್ತಿದ್ದ ದಿವ್ಯ ಅರ್ಚಾಮೂರ್ತಿಯೊಂದಿಗೆ ತಾವೂ ಆ ಊರನ್ನು ಬಿಟ್ಟು ಹೊರಟರು. ಆದರೆ ಇವರ ನಿರ್ಗಮನದಿಂದ ಆ ದಿವ್ಯದೇಶದ ಎಲ್ಲಾ ಕಡೆಯಲ್ಲಿಯೂ ಕತ್ತಲೆಯು ಆವರಿಸಿಕೊಂಡಿತು. ಇದರಿಂದ ರಾಜನು ಭೀತಿಗೊಂಡು ಇವರ ಕಾಲಿಗೆ ಬಿದ್ದು ಕ್ಷಮಾಪಣೆ ಬೇಡಿ ತನ್ನ ಊರಿಗೆ ವಾಪಸ್ಸು ಬರುವಂತೆ ಪ್ರಾರ್ಥಿಸಿದನು. ಅದರಂತೆ ಇವರು ತಮ್ಮ ದಿವ್ಯ ಅರ್ಚಾಮೂರ್ತಿಯೊಂದಿಗೆ ವಾಪಸ್ಸು ಬಂದು ತಿರುವೆಫ್‌ಕಾ ಎಂಬ ಸ್ಥಳದಲ್ಲಿ ಆ ದಿವ್ಯಮೂರ್ತಿಯನ್ನು ಪ್ರತಿಷ್ಠೆ ಮಾಡಿದರು. ಆ ದೇವರಿಗೆ **"ಯಥೋಕ್ತಕಾರಿ" (ಶೊನ್ನವಣ್ಣಂ ಶೈದ ಪೆರುಮಾಳ್)** ಎಂಬ ತಿರುನಾಮವು ಉಂಟಾಯಿತು. ರಾಜನು ಆಳ್ವಾರ್ರ ಮಹಿಮೆಯನ್ನು ಅರಿತು ಅವರ ದಾಸಾನುದಾಸನಾದನು.

ಅನಂತರ ಆಳ್ವಾರ್ರು ಪೆರುಂಬುಲಿಯೂರೆಂಬ ಗ್ರಾಮಕ್ಕೆ ಬಂದು ಮಾರ್ಗಾಯಾಸದಿಂದ ಒಬ್ಬ ಬ್ರಾಹ್ಮಣನ ಮನೆಯ ಜಗಲಿಯ ಮೇಲೆ ವಿಶ್ರಮಿಸಿಕೊಂಡಿದ್ದರು. ಅಲ್ಲಿ ವೇದ ಪಾರಾಯಣ ಮಾಡುತ್ತಿದ್ದ ಅನೇಕ ವೈದಿಕರು ಇವರು ಕೀಳು ಜಾತಿಯವರೆಂದು ತಿಳಿದು ತಮ್ಮ ಪಾರಾಯಣವನ್ನು ನಿಲ್ಲಿಸಿದರು. ಆದರೆ ಅವರು ಶೀಘ್ರದಲ್ಲಿ ಇವರ ವಿದ್ವತ್ತನ್ನು ಅರಿತು ಇವರಿಗೆ ಪ್ರದಕ್ಷಿಣೆ ಪ್ರಣಾಮಗಳನ್ನು ಮಾಡಿ ಉಪಚರಿಸಿ ಕೃತಾರ್ಥರಾದರು. ಊರಿನ

ಗುಡಿಯಲ್ಲಿದ್ದ ದೇವರು ಆಳ್ವಾರ್ರವರು ಇರುವ ಕಡೆಯೇ ತಿರುಗುತ್ತಿದ್ದುದರಿಂದ ಇವರ ವೈಭವವನ್ನು ಅಲ್ಲಿ ಯಾಗವನ್ನು ನಡೆಸುತ್ತಿದ್ದ ಮಹಾತ್ಮರುಗಳು ಅರಿತು ಇವರನ್ನು ಯಾಗಶಾಲೆಗೆ ಕರೆದುಕೊಂಡು ಹೋಗಿ, ಇವರಿಗೆ ಅಗ್ರಪೂಜೆ ಮಾಡಿದರು. ಅದನ್ನು ನೋಡಿ ಕೆಲವು ಅಸಹಿಷ್ಣುಗಳಾದ ವೈದಿಕ ಬ್ರಾಹ್ಮಣರು ಅಸೂಯೆಗೊಳ್ಳಲು ಅವರಿಗೆ ಬುದ್ಧಿಯನ್ನು ಕಲಿಸಬೇಕೆಂದು ಆಳ್ವಾರ್ರು ಪರಮಾತ್ಮನನ್ನು ಪ್ರಾರ್ಥಿಸಿದರು. ಆಗ ಪರಮಾತ್ಮನು ಎಲ್ಲರೂ ತನ್ನ ದರ್ಶನವನ್ನು ಇವರಲ್ಲಿ ಕಾಣುವಂತೆ ಮಾಡಿದನು. ಎಲ್ಲರೂ ಆ ಸುಂದರವಾದ ದಿವ್ಯಮೂರ್ತಿಯನ್ನು ದರ್ಶನ ಮಾಡಿ ಆಳ್ವಾರ್ರವರ ಅಪ್ರತಿಮ ವೈಭವವನ್ನು ಅರಿತು ಅವರಿಗೆ ನಮಸ್ಕರಿಸಿ ತಮ್ಮ ಅಪರಾಧಕ್ಕೆ ಕ್ಷಮಾಪಣೆ ಬೇಡಿದರು. ಆಳ್ವಾರ್ರು ಅವರಿಗೆಲ್ಲಾ ಜ್ಞಾನೋಪದೇಶ ಮಾಡಿದರು.

ಅಲ್ಲಿಂದ ಆಳ್ವಾರ್ರು ತಿರುಕ್ಕುಡಂದೈಗೆ (ಕುಂಭಕೋಣಕ್ಕೆ) ಬಂದರು. ಅಲ್ಲಿ ಶಯನಮೂರ್ತಿಯಾಗಿ ಗುಡಿಯಲ್ಲಿ ಇದ್ದ ಆರಾವಮುದನ್ ದಿವ್ಯಮೂರ್ತಿಯ ದರ್ಶನ ಮಾಡಿ ಮಂಗಳಾಶಾಸನ ಮಾಡಿದರು. ಆ ದಿವ್ಯ ಮಂಗಳ ವಿಗ್ರಹವನ್ನು ಧ್ಯಾನಿಸುತ್ತಾ ಆ ದಿವ್ಯದೇಶದಲ್ಲಿಯೇ ತಿರುಮಳಿಶೈ ಆಳ್ವಾರ್ರು ಅನೇಕ ವರ್ಷಗಳು ಯೋಗನಿಷ್ಠರಾಗಿ ಇದ್ದರು. ಇವರು ಅನೇಕ ಗ್ರಂಥಗಳನ್ನೂ ತಮಿಳು ಪಾಶುರಗಳನ್ನೂ ರಚಿಸಿದ್ದರು. ಆದರೆ ನಮಗೆ ಈಗ 'ನಾನ್ಮುಹನ್ ತಿರುವಂದಾದಿ'' ''ತಿರುಚ್ಚಂದ ವಿರುತ್ತಮ್'' ಎಂಬ ಎರಡು ಗ್ರಂಥಗಳು ಮಾತ್ರ ಲಭಿಸಿವೆ. ಹೀಗೆ ಇವರು ಅನೇಕ ಸಂವತ್ಸರಗಳು ಭೂಲೋಕದಲ್ಲಿ ಜೀವಿಸಿದ್ದು ತಿರುಕ್ಕುಡಂದೆಯಲ್ಲಿಯೇ ದೇವರ ಪಾದಾರವಿಂದವನ್ನು ಸೇರಿದರು.

ಇವರು ರಚಿಸಿರುವ **ನಾನ್ಮುಹನ್ ತಿರುವಂದಾದಿ**ಯಲ್ಲಿ 96 ಪಾಶುರಗಳಿವೆ. ಇದರಲ್ಲಿ ಶ್ರೀಮನ್ನಾರಾಯಣನೇ ಪರತತ್ತ್ವವೆಂದೂ, ಚತುರ್ಮುಖಬ್ರಹ್ಮನು ಅವನ ನಾಭೀಕಮಲದಿಂದಲೂ, ರುದ್ರನು ಚತುರ್ಮುಖಬ್ರಹ್ಮನಿಂದಲೂ ಜನಿಸಿದರೆಂದೂ, ವಿಶಿಷ್ಟಾದ್ವೈತವು

ವೇದಪ್ರತಿಪಾದ್ಯವಾದುದೆಂದೂ, ಮತ್ತು ಭಕ್ತಿ ಪ್ರಪತ್ತಿಗಳೇ ಮುಕ್ತಿಗೆ ಸಾಧನಗಳೆಂದೂ ತಿಳಿಸಿದ್ದಾರೆ. ಪರಮಾತ್ಮನ ಅವತಾರ ಲೀಲೆಗಳನ್ನೂ ಅದರಲ್ಲಿ ಕೃಷ್ಣಾವತಾರದ ವಿಶೇಷತೆಯನ್ನೂ ತಿಳಿಸಿ, ಪರಮಾತ್ಮನಲ್ಲಿ ಶರಣಾಗಿದ್ದಾರೆ. ಇವರು ರಚಿಸಿರುವ **ತಿರುಚ್ಚಂದವಿರುತ್ತ**ದಲ್ಲಿ 120 ಪಾಶುರಗಳಿವೆ. ಇದರಲ್ಲಿ ತತ್ತ್ವ, ಹಿತ ಪುರುಷಾರ್ಥಗಳೂ, ಅಷ್ಟಾಕ್ಷರೀ ಮಂತ್ರದ ಮಹಾತ್ಮೆಯೂ ವಿಸ್ತಾರವಾಗಿ ತಿಳಿಸಲ್ಪಟ್ಟಿವೆ. ಪರತತ್ತ್ವವಾದ ಶ್ರೀಮನ್ನಾರಾಯಣನಲ್ಲಿ ಶರಣಾಗತಿ ಮಾಡುವಂತೆ ಉಪದೇಶಮಾಡಿದ್ದಾರೆ. ಪರಮಾತ್ಮನ ಅರ್ಚಾಮೂರ್ತಿಗಳನ್ನು ಪೂಜಿಸಿ ಮುಕ್ತಿ ಪಡೆಯುವುದು ಸುಲಭವಾದ ಮಾರ್ಗವೆಂದು ತಿಳಿಸಿದ್ದಾರೆ.

ತಿರುಮಳಿಶೈ ಆಳ್ವಾರ್ರ ತನಿಯನ್

**ಶಕ್ತಿಪಞ್ಚಮಯ ವಿಗ್ರಹಾತ್ಮನೇ ಶುಕ್ತಿಹಾರಜಿತ ಚಿತ್ತಹಾರಿಣೇ।**
**ಮುಕ್ತಿದಾಯಕ ಮುರಾರಿಪಾದಯೋರ್ಭಕ್ತಿಸಾರಮುನಯೇ ನಮೋ ನಮಃ॥**

# ಕುಲಶೇಖರ ಆಳ್ವಾರ್

ಚೇರದೇಶದ ಕೋಳಿಕ್ಕೂಡು ಎಂಬ ರಾಜಧಾನಿಯಲ್ಲಿ ದೃಢವ್ರತನೆಂಬ ರಾಜನಿಗೆ ಬಹಳ ಕಾಲ ಮಕ್ಕಳಿರಲಿಲ್ಲ. ಅವನು ಶ್ರೀಮನ್ನಾರಾಯಣನನ್ನು ಭಕ್ತಿಯಿಂದ ಪೂಜಿಸಲು ಅದರ ಫಲವಾಗಿ ಅವನಿಗೆ ಒಬ್ಬ ಪುತ್ರನು ಮಾಶಿ (ಕುಂಭ) ಮಾಸ ಪುನರ್ವಸು ನಕ್ಷತ್ರದಲ್ಲಿ ಕೌಸ್ತುಭಾಂಶನಾಗಿ ಜನಿಸಿದನು. ಅರಸನು ಮಹದಾನಂದ ಹೊಂದಿ ಅವನಿಗೆ **ಕುಲಶೇಖರ**ನೆಂದು ನಾಮಕರಣ ಮಾಡಿದನು. ಕಾಲಕ್ರಮದಲ್ಲಿ ಅವನಿಗೆ ಚೌಳೋಪನಯನವು ನಡೆಯಿತು. ಅವನು ಆಚಾರ್ಯರುಗಳಿಂದ ಶಾಸ್ತ್ರಗಳನ್ನೆಲ್ಲಾ ಕಲಿತುಕೊಂಡನು. ಅದರೊಂದಿಗೆ ರಾಜನಾಗಿರಲು ಬೇಕಾದ ನೀತಿಶಾಸ್ತ್ರಗಳನ್ನೂ, ರಥತುರಗ ಶಾಸ್ತ್ರಗಳನ್ನೂ ಕಲಿತು ಪ್ರಾಪ್ತ ಕಾಲದಲ್ಲಿ ಯುವರಾಜ ಪದವಿಯನ್ನು ಪಡೆದನು.

ಕುಲಶೇಖರರು ತಮ್ಮ ಪರಾಕ್ರಮದಿಂದ ಅನೇಕ ರಾಜ್ಯಗಳನ್ನು ಜಯಿಸಿ ಎಲ್ಲಾ ರಾಜ್ಯಗಳಿಗೂ ಪ್ರಭುವಾಗಿ ''ಕೋಳಿಕೋನ್ ಕುಲಶೇಖರನ್'' ಎಂಬ ಬಿರುದನ್ನು ಪಡೆದರು. ಅನಂತರ ಅವರ ತಂದೆಯಾದ ದೃಢವ್ರತ ಮಹಾರಾಜರು ರಾಜ್ಯಭಾರವನ್ನು ಕುಲಶೇಖರರಿಗೆ ವಹಿಸಿ ತಾವು ವಾನಪ್ರಸ್ಥಾಶ್ರಮವನ್ನು ಕೈಕೊಂಡು ತಪೋಭೂಮಿಗೆ ತೆರಳಿದರು.

ಕುಲಶೇಖರರು ಚೆನ್ನಾಗಿ ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಕಾಲಕ್ರಮದಲ್ಲಿ ಅವರು ಇಳೈ ಎಂಬ ಪುತ್ರಿಯನ್ನೂ, ದೃಢವ್ರತನೆಂಬ ಪುತ್ರನನ್ನೂ ಪಡೆದರು. ಅನೇಕ ಪಂಡಿತರುಗಳಿಂದ ಶ್ರುತಿ ಇತಿಹಾಸ ಪುರಾಣಗಳನ್ನೆಲ್ಲಾ ಅಧ್ಯಯನ ಮಾಡಿ ಭಗವಂತನ ಅನುಗ್ರಹದಿಂದ ಶ್ರೀ ಮಹಾವಿಷ್ಣುವೇ ಪರದೈವವೆಂಬುದನ್ನು ಅರಿತರು. ಇವರಿಗೆ ಭಗವಂತನ

ವಿಭವಾವತಾರಗಳಾದ ರಾಮಾವತಾರ ಕೃಷ್ಣಾವತಾರಗಳಲ್ಲಿ ಬಹಳ ಭಕ್ತಿಯುಂಟಾಯಿತು. ಯಾವಾಗಲೂ ರಾಮಾಯಣ ಕಾಲಕ್ಷೇಪದಲ್ಲಿಯೇ ಕಾಲವನ್ನು ಕಳೆಯುತ್ತಾ ಇದ್ದರು. ಇವರು ವೈಷ್ಣವರನ್ನೂ ಭಾಗವತರನ್ನೂ ಪ್ರೀತಿಯಿಂದ ಉಪಚರಿಸುತ್ತಾ ಭಗವಂತನ ಕೈಂಕರ್ಯವನ್ನು ಮಾಡುತ್ತಿದ್ದರು.

ನಿತ್ಯವೂ ಪೌರಾಣಿಕರಿಂದ ಶ್ರೀರಾಮಾಯಣ ಕಾಲಕ್ಷೇಪವನ್ನು ಬಹಳ ಭಕ್ತಿಯಿಂದ ಕೇಳುತ್ತಿದ್ದರು. ಒಮ್ಮೆ ಶ್ರೀರಾಮನು ತಾನೊಬ್ಬನೇ ಖರದೂಷಣರೊಂದಿಗೆ ಯುದ್ಧ ಮಾಡಲು ಹೊರಟನೆಂಬ ಕಥಾಭಾಗವನ್ನು ಕೇಳುತ್ತ ಅದು ಬಹಳ ಹಿಂದೆ ನಡೆದ ಸಮಾಚಾರವೆಂಬುದನ್ನು ಮರೆತು ಭ್ರಮೆಯನ್ನು ಹೊಂದಿ, ಶ್ರೀ ರಾಮಚಂದ್ರನಿಗೆ ತಾವು ಸಹಾಯ ಮಾಡಬೇಕೆಂದು ಸೈನ್ಯವನ್ನು ತೆಗೆದುಕೊಂಡು ಹೊರಡಲು ಸಿದ್ಧರಾದರು. ಆಗ ಪೌರಾಣಿಕರು ರಾಮಚಂದ್ರನು ಖರದೂಷಣರನ್ನು ಸಂಹರಿಸಿ ಜಯಶೀಲನಾಗಿ ಬರಲು ಸೀತಾದೇವಿಯು ಅವನನ್ನು ಎದುರುಗೊಂಡು ಉಪಚರಿಸಿದಳೆಂಬ ಕಥಾಭಾಗವನ್ನು ತಿಳಿಸಲು ಇವರು ಸಂತೋಷಗೊಂಡು ಶಾಂತಚಿತ್ತರಾದರು. ಮತ್ತೊಮ್ಮೆ ಶ್ರೀರಾಮಾಯಣ ಕಾಲಕ್ಷೇಪದಲ್ಲಿ ಸೀತಾಪಹರಣ ಘಟ್ಟದಲ್ಲಿಯೂ ಇವರು ಭ್ರಮೆ ಹೊಂದಿ ತಮ್ಮ ಸೇನೆಯನ್ನು ತೆಗೆದುಕೊಂಡು ಹೊರಟು ಯುದ್ಧ ಮಾಡಲು ಸಿದ್ಧರಾಗಿ ಸಮುದ್ರದಲ್ಲಿ ಇಳಿಯಲು ಶ್ರೀರಾಮಚಂದ್ರನು ಇವರ ಭಕ್ತಿಯನ್ನು ಮೆಚ್ಚಿ ಇವರಿಗೆ ತನ್ನ ಪಟ್ಟಾಭಿಷೇಕದ ದರ್ಶನವನ್ನು ಕೊಟ್ಟನು. ಅನಂತರ ಇವರು ಶಾಂತರಾಗಿ ತಮ್ಮ ರಾಜ್ಯಕ್ಕೆ ಹಿಂತಿರುಗಿದರು.

ಇವರಿಗೆ ವೈಷ್ಣವರನ್ನೂ, ಭಾಗವತರನ್ನೂ ಉಪಚರಿಸಬೇಕೆಂಬ ತ್ವರೆಯು ಹೆಚ್ಚಾಯಿತು. ಇದರಿಂದ ಇವರ ಅರಮನೆಯಲ್ಲಿ ವೈಷ್ಣವರ ಮತ್ತು ಭಾಗವತರ ಓಡಾಟವು ಹೆಚ್ಚಾಗಲು ಇವರ ಮಂತ್ರಿಗಳಿಗೆ ಅಸಮಾಧಾನವುಂಟಾಯಿತು. ಅವರು ಇದನ್ನು ಹೇಗಾದರೂ ತಪ್ಪಿಸಬೇಕೆಂದು ಒಳಸಂಚುಮಾಡಿದರು. ಶ್ರೀರಾಮದೇವರ ತಿರುಮಂಜನ ಕಾಲದಲ್ಲಿ ತೆಗೆದು

ಇಟ್ಟಿದ್ದ ಒಂದು ನವರತ್ನ ಮಾಲೆಯನ್ನು ಮಂತ್ರಿಗಳು ಕದ್ದು ಬಚ್ಚಿಟ್ಟರು. ಅನಂತರ ಅದನ್ನು ಶ್ರೀವೈಷ್ಣವರುಗಳೇ ಅಪಹರಿಸಿರಬೇಕೆಂದು ಮಹಾರಾಜರಲ್ಲಿ ದೂರುಕೊಟ್ಟರು. ಆದರೆ ಇವರಿಗೆ ಶುದ್ಧರಾದ ಶ್ರೀವೈಷ್ಣವರುಗಳು ನಿರ್ದೋಷಿಗಳೆಂಬ ಧೃಢನಂಬಿಕೆಯು ಇದ್ದಿತು. ಅದರಿಂದ ಇವರು ಅದನ್ನು ಮಂತ್ರಿಗಳಿಗೆ ನಿರೂಪಿಸಿ ತೋರಿಸಬೇಕೆಂದು ಒಂದು ಸರ್ಪವುಳ್ಳ ಬಿಂದಿಗೆಯನ್ನು ತರಿಸಿದರು. ಭಾಗವತರು ತಪ್ಪಿತಸ್ಥರಲ್ಲವೆಂಬುದು ಸತ್ಯವಾದರೆ ಈ ಸರ್ಪವು ತಮ್ಮನ್ನು ಕಚ್ಚುವುದಿಲ್ಲವೆಂದು ಶಪಥಮಾಡಿ ಬಿಂದಿಗೆಯೊಳಗೆ ಕೈಯನ್ನು ಇಟ್ಟರು. ಸರ್ಪವು ಇವರನ್ನು ಕಚ್ಚಲಿಲ್ಲ. ಇದನ್ನು ನೋಡಿ ಮಂತ್ರಿಗಳಿಗೆ ಅವಮಾನವೂ, ಅನುತಾಪವೂ ಉಂಟಾಗಿ ಇವರಿಗೆ ನವರತ್ನ ಮಾಲೆಯನ್ನು ವಾಪಸ್ಸು ಕೊಟ್ಟು ನಮಸ್ಕರಿಸಿ ಮಹಾಭೀತಿಯನ್ನು ಹೊಂದಿದವರಾಗಿ ಕ್ಷಮಾಪಣೆ ಬೇಡಿದರು. ಇವರು ಅವರನ್ನು ಬಹಳ ಸಹನೆಯಿಂದ ಕ್ಷಮಿಸಿ, ಇನ್ನು ಮುಂದೆ ಭಾಗವತ ಕೈಂಕರ್ಯವನ್ನು ಮಾಡಿಕೊಂಡಿರುವುದೇ ಅವರ ಪಾಪಕ್ಕೆ ಪ್ರಾಯಶ್ಚಿತ್ತವೆಂದು ತಿಳಿಸಿದರು. ಅವರು ಇವರ ಆಜ್ಞೆಯಂತೆ ಭಾಗವತರ ಕೈಂಕರ್ಯದಲ್ಲಿ ನಿರತರಾದರು.

ಮುಂದೆ ಕುಲಶೇಖರ ಆಳ್ವಾರ್ರು ತಮ್ಮ ಮಗನಾದ ದೃಢವ್ರತನಿಗೆ ಮದುವೆ ಮಾಡಿ ಪಟ್ಟಾಭಿಷೇಕವನ್ನು ಮಾಡಿದರು. ಶ್ರೀರಂಗಕ್ಕೆ ಹೋಗಿ ಭಗವದ್ಭಾಗವತರ ಕೈಂಕರ್ಯವನ್ನು ಮಾಡುತ್ತಾ ದೇವರ ಸೇವೆಯಲ್ಲಿ ನಿರತರಾಗಿ ಅಲ್ಲಿಯೇ ಕೆಲವು ಕಾಲ ಇದ್ದರು.

ಅನಂತರ ತಿರುಪತಿ, ಅಯೋಧ್ಯೆ, ಚಿತ್ರಕೂಟ, ತಿರುಕ್ಕಣ್ಣಪುರ, ತಿರುಮಾಲಿರುಂಶೋಲೈ ಮುಂತಾದ ದಿವ್ಯ ದೇಶಗಳಿಗೆ ಹೋಗಿ ಅಲ್ಲಿನ ಅರ್ಚಾವಿಗ್ರಹಗಳನ್ನು ದರ್ಶನ ಮಾಡಿದರು. ನಮ್ಮಾಳ್ವಾರ್ರವರ ಅವತಾರ ಸ್ಥಳವಾದ ತಿರುಕುರುಹೂರಿಗೆ ಹೋಗಿ ಅದಕ್ಕೆ ಸಮೀಪದಲ್ಲಿರುವ ಬ್ರಹ್ಮದೇಶವೆಂಬ ಊರಿಗೆ ಹೋದರು. ಅಲ್ಲಿ ಶ್ರೀ ರಾಜಗೋಪಾಲ ಸ್ವಾಮಿಯ ದೇವಸ್ಥಾನದಲ್ಲಿ ಕೈಂಕರ್ಯ ಮಾಡಿಕೊಂಡಿದ್ದು ತಮ್ಮ 67ನೇ

ವಯಸ್ಸಿನಲ್ಲಿ ದೇವರ ಪಾದಾರವಿಂದವನ್ನು ಸೇರಿದರು. ಇವರು ತಮಿಳಿನಲ್ಲಿ **ಪೆರುಮಾಳ್ ತಿರುಮೊಳಿ** ಎಂಬ ದಿವ್ಯಪ್ರಬಂಧವನ್ನೂ ಸಂಸ್ಕೃತದಲ್ಲಿ **ಮುಕುಂದಮಾಲೆ** ಎಂಬ ಸ್ತೋತ್ರವನ್ನೂ ರಚಿಸಿದ್ದಾರೆ.

ಇವರಿಗೆ ಶ್ರೀ ರಾಮಚಂದ್ರನಲ್ಲಿ ಅತ್ಯಂತ ಪ್ರೀತಿಯಿದ್ದುದ್ದರಿಂದ ಕುಲಶೇಖರ ಪೆರುಮಾಳ್ ಎಂಬ ಹೆಸರು ಬಂದಿದೆ. ಇವರು ತಮ್ಮ ದಿವ್ಯ ಪ್ರಬಂಧದಲ್ಲಿ **''ನಿನ್ ಕೋಯಿಲ್‌ವಾಶಲ್ ಪಡಿಯಾಯ್ ಕಿಡಂದು ಉನ್ ಪವಳವಾಯ್ ಕಾಣ್ಬೇನೇ''** ಅಂದರೆ ದೇವರ ಗರ್ಭಗುಡಿಯ ಬಾಗಿಲಿನ ಹೊಸ್ತಿಲಾಗಿ ಇದ್ದು ಭಾಗವತರ ಪಾದಧೂಳಿಯಿಂದ ಪುನೀತರಾಗಿ ಪರಮಾತ್ಮನ ಮುಖ ಮುಂಡಲದ ದರ್ಶನ ಭಾಗ್ಯವನ್ನು ಯಾವಾಗಲೂ ಹೊಂದುತ್ತಿರುವಂತೆ ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ. ಆಳ್ವಾರ್ರವರ ಈ ಪ್ರಾರ್ಥನೆಯಂತೆ ಎಲ್ಲಾ ದೇವಸ್ಥಾನಗಳಲ್ಲಿಯೂ ಗರ್ಭಗುಡಿಯ ಹೊಸ್ತಿಲನ್ನು ''ಕುಲಶೇಖರ ಪಡಿ'' ಅಂದರೆ ಕುಲಶೇಖರರ ಮೆಟ್ಟಿಲು ಎಂದು ಇಂದಿಗೂ ಕರೆಯುವ ವಾಡಿಕೆ ಇದೆ. ಇವರು ರಚಿಸಿರುವ **ಪೆರುಮಾಳ್ ತಿರುಮೊಳಿ** ಎಂಬ 150 ಪಾಶುರಗಳುಳ್ಳ ತಮಿಳು ದಿವ್ಯಪ್ರಬಂಧದಲ್ಲಿ ಇವರು ಶ್ರೀರಂಗದ ಶ್ರೀರಂಗನಾಥನನ್ನೂ, ತಿರುಪತಿಯ ಶ್ರೀನಿವಾಸ ದೇವರನ್ನೂ, ವಿತ್ತುಕ್ಕೋಡು ಎಂಬ ಊರಿನ ದೇವರನ್ನೂ ಸ್ತುತಿಸಿದ್ದಾರೆ. ಕೃಷ್ಣಾವತಾರ, ರಾಮಾವತಾರದ ಮಹಿಮೆಗಳನ್ನು ಕುರಿತು ಪಾಶುರಗಳನ್ನು ಹಾಡಿದ್ದಾರೆ. ಪರಮಾತ್ಮನು ಜೀವಾತ್ಮನ ಹಿತಕ್ಕಾಗಿಯೇ ಕಷ್ಟಗಳನ್ನು ಕೊಡುತ್ತಾನೆಂದೂ, ಆದ್ದರಿಂದ ಚೇತನನು ಎಷ್ಟು ಕಷ್ಟ ಬಂದರೂ ಅದನ್ನು ಸಹಿಸಿಕೊಂಡು ಪರಮಾತ್ಮನ ಅನುಗ್ರಹವನ್ನು ಕಾಯುತ್ತಿರಬೇಕೆಂದೂ ತಿಳಿಸಿದ್ದಾರೆ. ಇವರು ರಚಿಸಿರುವ **ಮುಕುಂದಮಾಲೆ** ಎಂಬ ಸಂಸ್ಕೃತ ಸ್ತೋತ್ರದಲ್ಲಿ ಮಾನವರಿಗೆ ಬಹಳ ಉತ್ತಮವಾದ ಉಪದೇಶ ನೀಡಿದ್ದಾರೆ ಮತ್ತು ತಮಗೆ ಪರಮಾತ್ಮನಲ್ಲಿ ಭಕ್ತಿ ಉಂಟಾಗುವಂತೆ ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ. ಬಾಯಿಯಲ್ಲಿ ಸರ್ವದಾ ಭಗವನ್ನಾಮಸಂಕೀರ್ತನೆ ಮಾಡುತ್ತಾ, ಕೈಯಿಂದ ಭಗವಂತನ

ಪೂಜಾದಿ ಕೈಂಕರ್ಯಗಳನ್ನು ಮಾಡುತ್ತಾ, ಕಿವಿಯಲ್ಲಿ ಭಗವನ್ನಾಮಗಳನ್ನು ಕೇಳುತ್ತಾ, ಮನಸ್ಸಿನಲ್ಲಿ ಸರ್ವದಾ ಭಗವಂತನನ್ನು ಸ್ಮರಿಸುತ್ತಾ ಇರಬೇಕೆಂದು ತಮ್ಮ ಇಂದ್ರಿಯಗಳಿಗೂ ಮತ್ತು ಲೋಕದ ಜನರಿಗೂ ಇವರು ಉಪದೇಶ ನೀಡಿದ್ದಾರೆ. ತಮ್ಮನ್ನೂ ಸರ್ವಮಾನವರನ್ನೂ ರಕ್ಷಿಸಿ ಕಾಪಾಡುವಂತೆ ಶ್ರೀಕೃಷ್ಣ ಪರಮಾತ್ಮನನ್ನು ಭಕ್ತಿಯಿಂದ ಪ್ರಾರ್ಥಿಸಿದ್ದಾರೆ. ಹೀಗೆ ಇದು ಭಗವಂತನಿಗೆ ಸಮರ್ಪಿಸಿರುವ ಭಕ್ತಿಭರಿತವಾದ ಪ್ರಾರ್ಥನಾಸ್ತೋತ್ರಗಳ ಸುಂದರ ಮಾಲೆಯಾಗಿ ಮುಕುಂದ ಮಾಲೆ ಎಂಬ ಹೆಸರು ಪಡೆದಿದೆ.

ಕುಲಶೇಖರ ಆಳ್ವಾರ್ರ ತನಿಯನ್

**ಘುಷ್ಯತೇ ಯಸ್ಯ ನಗರೇ ರಂಗಯಾತ್ರಾ ದಿನೇದಿನೇ।**
**ತಮಹಂ ಶಿರಸಾ ವಂದೇ ರಾಜಾನಂ ಕುಲಶೇಖರಮ್॥**

# ಪೆರಿಯಾಳ್ವಾರ್

ಪಾಂಡ್ಯದೇಶದ ಶ್ರೀವಿಲ್ಲಿಪುತ್ತೂರಿನಲ್ಲಿ ಮುಕುಂದ ಭಟ್ಟರೆಂಬ ಬ್ರಾಹ್ಮಣ ಶ್ರೇಷ್ಠರಿದ್ದರು. ಅವರಿಗೆ ಪದ್ಮವಲ್ಲಿ ಎಂಬ ಪತ್ನಿ ಇದ್ದಳು. ಇವರಿಗೆ ಜೇಷ್ಠಮಾಸ ಸ್ವಾತಿ ನಕ್ಷತ್ರದಲ್ಲಿ ಗರುಡಾಂಶರಾಗಿ ಪೆರಿಯಾಳ್ವಾರ್ರು ಜನಿಸಿದರು. ಇವರಿಗೆ ವಿಷ್ಣುಚಿತ್ತರೆಂದು ಹೆಸರು. ಇವರಿಗೆ ಕೃಷ್ಣಾವತಾರದಲ್ಲಿ ಅಪಾರವಾದ ಭಕ್ತಿಯಿದ್ದಿತು. ಇವರು, ಮಾಲಾಕಾರರು ಕೃಷ್ಣನಿಗೆ ಪುಷ್ಪಕೈಂಕರ್ಯವನ್ನು ಮಾಡಿದಂತೆ, ಒಂದು ನಂದನವನವನ್ನು ಮಾಡಿಕೊಂಡು ಭಗವಂತನಿಗೆ ನಿತ್ಯವೂ ಪುಷ್ಪಮಾಲೆಯನ್ನು ಸಮರ್ಪಿಸುತ್ತಿದ್ದರು.

ಪಾಂಡ್ಯ ದೇಶದ ಶ್ರೀವಲ್ಲಭದೇವನೆಂಬ ರಾಜನು ಮಧುರೈಯಲ್ಲಿ ಧರ್ಮಿಷ್ಠನಾಗಿ ರಾಜ್ಯಭಾರವನ್ನು ಮಾಡುತ್ತಿದ್ದನು. ಅವನು ಒಂದು ದಿವಸ ರಾತ್ರಿಯಲ್ಲಿ ನಗರ ಶೋಧನೆ ಮಾಡುತ್ತಾ ಸಂಚರಿಸುತ್ತಿದ್ದಾಗ ಒಂದು ಜಗಲಿಯ ಮೇಲೆ ಒಬ್ಬನು ಮಲಗಿರುವುದನ್ನು ಕಂಡನು. ಅವನನ್ನು ನೀನು ಯಾರೆಂದು ವಿಚಾರಿಸಿದನು. ಅದಕ್ಕೆ ಅವನು ತಾನು ಒಬ್ಬ ಬ್ರಾಹ್ಮಣನು ಎಂಬುದನ್ನು ತಿಳಿಸಿದನು. ರಾಜನು ಅವನನ್ನು ಏನಾದರೂ ಹಿತವಚನಗಳನ್ನು ಹೇಳುವಂತೆ ಕೇಳಿದನು. ಅನನು ''ಮಳೆ ಕಾಲದಲ್ಲಿ ಸುಖವಾಗಿ ಇರುವುದಕ್ಕಾಗಿ ಮಿಕ್ಕ ಎಂಟು ತಿಂಗಳ ಕಾಲ ಎಲ್ಲರೂ ಪ್ರಯತ್ನಿಸಬೇಕು, ರಾತ್ರಿಯ ಕಾಲದ ಆವಶ್ಯಕತೆಗಾಗಿ ಬೆಳಗಿನ ಕಾಲದಲ್ಲಿ ಪ್ರಯತ್ನಿಸಬೇಕು; ವಾರ್ಧಕ್ಯದಲ್ಲಿನ ಆವಶ್ಯಕತೆಗಾಗಿ ಯೌವನದಲ್ಲಿ ಪ್ರಯತ್ನಿಸಬೇಕು; ಅಂತೆಯೇ ಮುಕ್ತಿಯನ್ನು ಪಡೆಯುವುದಕ್ಕಾಗಿ ನಮ್ಮ ಈ ಆಯುಷ್ಯವನ್ನೆಲ್ಲಾ ಕಳೆಯಬೇಕು'' ಎಂಬುದನ್ನು ರಾಜನಿಗೆ ಒಂದು ಶ್ಲೋಕದ ಮೂಲಕ ತಿಳಿಸಿದನು. ರಾಜನು ಇದನ್ನು ಕೇಳಿ ಸಂತುಷ್ಟನಾಗಿ ಅಲ್ಲಿಂದ ಹೊರಟು ಹೋದನು.

ವಿವೇಕಿಯಾದ ಆ ರಾಜನು ಆ ರಾತ್ರಿಯೆಲ್ಲಾ ಆ ಬ್ರಾಹ್ಮಣನು ಹೇಳಿದ ವಾಕ್ಯಗಳನ್ನೇ ಚಿಂತಿಸುತ್ತಿದ್ದನು. ಅವನಿಗೆ ಇಹಲೋಕದ ಭೋಗಗಳಿಗೆ ಏನೂ ಕೊರತೆ ಇರಲಿಲ್ಲ. ಅವನು ರಾಜ್ಯವನ್ನು ಪಾಲಿಸುತ್ತಾ ತನ್ನ ಕರ್ತವ್ಯವನ್ನು ಶ್ರದ್ಧೆಯಿಂದ ಚೆನ್ನಾಗಿ ಮಾಡುತ್ತಿದ್ದನು. ಆದರೆ ಅವನು ಮುಕ್ತಿಯನ್ನು ಹೊಂದಲು ಯಾವ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ. ಅದಕ್ಕೆ ಒಂದು ಮಾರ್ಗವನ್ನು ಕಂಡುಹಿಡಿಯಬೇಕೆಂದು ಆಲೋಚಿಸಿದನು. ಅನಂತರ ಬೆಳಗಾದ ಒಡನೆ ತಮ್ಮ ಆಸ್ಥಾನ ಪುರೋಹಿತರಾದ ಶೆಲ್ವನಂಬಿಯವರನ್ನು ಕರೆಯಿಸಿ ಅವರನ್ನು ಪುರುಷಾರ್ಥ ನಿರ್ಣಯಕ್ಕೂ, ಪರತತ್ವವು ಯಾವುದೆಂಬುದನ್ನು ನಿಶ್ಚಯಿಸುವುದಕ್ಕೂ, ಮತ್ತೆ ಮುಕ್ತಿಯನ್ನು ಹೊಂದುವುದಕ್ಕೂ ಉಪಾಯವು ಯಾವುದು ಎಂಬುದನ್ನು ತಿಳಿಸುವಂತೆ ಕೇಳಿದನು. ಅದಕ್ಕೆ ಅವರು ವಿದ್ವಾಂಸರ ಸಭೆಯನ್ನು ಸೇರಿಸಿ ಅವರ ಸಹಾಯದಿಂದ ಇದನ್ನು ನಿರ್ಣಯಿಸಬೇಕೆಂದು ರಾಜನಿಗೆ ಹೇಳಿದರು. ಆಗ ರಾಜನು ಅಪರಿಮಿತವಾದ ದ್ರವ್ಯರಾಶಿಯನ್ನು ಒಂದು ಗಂಟಿನಲ್ಲಿ ಕಟ್ಟಿ ಅದನ್ನು ವಿದ್ಯಾಶುಲ್ಕವೆಂದು ಹೇಳಿ ಸಭಾಮಂಟಪದ ಮುಂದುಗಡೆ ಎತ್ತರದಲ್ಲಿ ಕಟ್ಟಿಸಿದನು. ಪರತತ್ವವನ್ನು ನಿರ್ಣಯಿಸುವವರಿಗೆ ಆ ವಿದ್ಯಾಶುಲ್ಕವು ಬಹುಮಾನವಾಗಿ ಕೊಡಲ್ಪಡುತ್ತದೆ ಎಂದು ಎಲ್ಲಾ ಕಡೆಗೂ ಪ್ರಚಾರ ಮಾಡಿದನು.

ಆಗ ಶ್ರೀವಿಲ್ಲಿಪುತ್ತೂರಿನ ವಡಪೆರುಂಕೋಯಿಲ್ ಪರಮಾತ್ಮನು ವಿಷ್ಣುಚಿತ್ತರಿಗೆ ಕನಸಿನಲ್ಲಿ ದರ್ಶನವಿತ್ತು ಅವರನ್ನು ಶೀಘ್ರವಾಗಿ ಮಧುರೈಗೆ ಹೋಗಿ ಪಾಂಡ್ಯ ರಾಜನು ಏರ್ಪಡಿಸಿರುವ ಈ ಪಂಡಿತರ ವಿದ್ವತ್‌ಸಭೆಯಲ್ಲಿ ಶ್ರೀಮನ್ನಾರಾಯಣನೇ ಪರತತ್ತ್ವವೆಂಬುದನ್ನು ಸ್ಥಾಪಿಸಿ ಆ ವಿದ್ಯಾಶುಲ್ಕವನ್ನು ಹೊಂದುವಂತೆ ನಿಯಮಿಸಿದನು. ಅದಕ್ಕೆ ವಿಷ್ಣುಚಿತ್ತರು ತಮಗೆ ಸ್ವಲ್ಪವೂ ಶಾಸ್ತ್ರ ಜ್ಞಾನವು ಇಲ್ಲದಿರುವುದರಿಂದ ಹೇಗೆ ತಾವು ಆ ಸಭೆಯಲ್ಲಿ ಗೆಲ್ಲಲು ಸಾಧ್ಯವಾಗುತ್ತದೆ ಎಂದು ಪರಮಾತ್ಮನನ್ನು ಕೇಳಲು, ಆ ಜವಾಬ್ದಾರಿ ತನಗೆ

ಇರುವುದಾಗಿ ಅವರಿಗೆ ಆಶ್ವಾಸನೆಯಿತ್ತು ಪರಮಾತ್ಮನು ಅಂತರ್ಧಾನನಾದನು.

ಅನಂತರ ವಿಷ್ಣುಚಿತ್ತರು ನಿದ್ರೆಯಿಂದ ಎದ್ದು ಆಶ್ಚರ್ಯವನ್ನು ಹೊಂದಿದವರಾಗಿ ಭಗವಂತನ ನಿಯಮನ ಪ್ರಕಾರ ನಡೆಯುವುದಾಗಿ ನಿಶ್ಚಯಿಸಿ ತಕ್ಷಣ ಹೊರಟು ಮಧುರೈಗೆ ಹೋಗಿ, ಪಾಂಡ್ಯರಾಜನ ಪಂಡಿತ ಸಭೆಗೆ ಬಂದು ಸೇರಿದರು. ಇವರ ದಿವ್ಯ ತೇಜಸ್ಸನ್ನು ಕಂಡು ರಾಜನೂ ಅವನ ಪರಿವಾರದವರೂ ಇವರಲ್ಲಿ ಏನೋ ವಿಶೇಷವಿರಬೇಕೆಂದು ಗ್ರಹಿಸಿ ಇವರನ್ನು ಬಹಳ ಮರ್ಯಾದೆಯಿಂದ ಎದಿರುಗೊಂಡು, ಇವರಿಗೆ ಸರ್ವ ಉಪಚಾರಗಳನ್ನೂ ಮಾಡಿ, ಸಭಾಮಧ್ಯದಲ್ಲಿ ಒಂದು ಅಗ್ರಸ್ಥಾನದಲ್ಲಿ ಕುಳ್ಳಿರಿಸಿದರು. ಇದನ್ನು ನೋಡಿ ಮಿಕ್ಕ ವಿದ್ವಾಂಸರಿಗೆಲ್ಲಾ ಬಹಳ ಅಸೂಯೆ ಉಂಟಾಯಿತು.

ಅವರು ವೇದಶಾಸ್ತ್ರಾದಿಗಳಲ್ಲಿ ಪಾರಂಗತರಾದ ತಮ್ಮನ್ನೆಲ್ಲಾ ಬಿಟ್ಟು ಏನೂ ತಿಳಿಯದ ವಿಷ್ಣುಚಿತ್ತರನ್ನು ಗೌರವಿಸುವುದು ನ್ಯಾಯವಲ್ಲವೆಂದು ಆಕ್ಷೇಪಿಸಿದರು. ಇದನ್ನು ಕೇಳಿ ಶೆಲ್ವನಂಬಿಯವರು ಅವರನ್ನು ಸುಮ್ಮನಿರುವಂತೆ ಹೇಳಿ ವಿಷ್ಣುಚಿತ್ತರನ್ನು ಕೃಪೆಮಾಡಿ ಪರತತ್ತ್ವ ನಿರ್ಣಯ ಮಾಡುವಂತೆ ಪ್ರಾರ್ಥಿಸಿದರು. ಆಗ ವಿಷ್ಣುಚಿತ್ತರು ತಮಗೆ ಭಗವಂತನು ಸ್ವಪ್ನದಲ್ಲಿ ಕೊಟ್ಟಿದ್ದ ಅಭಯವಚನವನ್ನು ನೆನೆಸಿಕೊಳ್ಳಲು ಅವರಿಗೆ ಸಕಲ ಶಾಸ್ತ್ರಗಳ ಜ್ಞಾನೋದಯವಾಯಿತು. ಅನಂತರ ಅವರು ಶ್ರುತಿ ಇತಿಹಾಸ ಪುರಾಣಗಳ ಪ್ರಮಾಣಗಳೊಂದಿಗೆ ವಾದವಿವಾದಮಾಡಿ ಶ್ರೀಮನ್ನಾರಾಯಣನೇ ಪರತತ್ತ್ವವೆಂಬುದನ್ನು ನಿರೂಪಿಸಿದರು. ಅದೇ ವೇಳೆಗೆ ಮೇಲುಗಡೆ ಗಂಟಿನಲ್ಲಿ ಕಟ್ಟಿದ್ದ ದ್ರವ್ಯದ ವಿದ್ಯಾಶುಲ್ಕವು ತಾನಾಗಿಯೇ ವಿಷ್ಣುಚಿತ್ತರ ಕಾಲಿನ ಹತ್ತಿರ ಬಂದು ಬಿದ್ದಿತು. ಅವರು ಅದನ್ನು ಭಗವಂತನ ಕೃಪೆಯೆಂದು ಭಾವಿಸಿ ಭಗವತ್ ಕೈಂಕರ್ಯಕ್ಕೆ ಉಪಯೋಗಿಸಲು ಸ್ವೀಕರಿಸಿದರು.ಇವರ ಮೇಲೆ ಅಸೂಯೆಗೊಂಡ ವಿದ್ವಾಂಸರುಗಳೆಲ್ಲಾ ಅವಮಾನಿತರಾಗಿ ತಲೆತಗ್ಗಿಸಿದರು ಮತ್ತು ಇವರ ವಾದವನ್ನು ಒಪ್ಪಿಕೊಂಡರು. ವಲ್ಲಭ ದೇವನೂ ಶೆಲ್ವನಂಬಿಯವರೂ ಇವರ ಜ್ಞಾನವೈಭವವನ್ನು ಕೊಂಡಾಡಿದರು.

ಇದೆಲ್ಲವನ್ನೂ ನೋಡಿ ರಾಜನೂ ಪುರೋಹಿತರೂ ಆಳ್ವಾರ್ರವರಿಗೆ "**ಪಟ್ಟರ್ ಪಿರಾನ್**" ಎಂಬ ಬಿರುದನ್ನು ದಯಪಾಲಿಸಿ ಅವರನ್ನು ಬಹಳವಾಗಿ ಹೊಗಳಿ ಆನೆಯ ಮೇಲೆ ಕೂರಿಸಿ ತಾಳಮೇಳಗಳೊಡನೆ ಅಲ್ಲಿನ ತಿರುವೀಧಿಗಳಲ್ಲಿ ಮೆರವಣಿಗೆ ಮಾಡಿಸಿದರು. ಈ ಮಹೋತ್ಸವವನ್ನು ನೋಡಿ ಆನಂದಿಸಲು ಸಾಕ್ಷಾತ್ ಭಗವಂತನೇ ಮಹಾಲಕ್ಷ್ಮೀ ಸಹಿತನಾಗಿ ಗರುಡಾರೂಢನಾಗಿ ಎದುರಿಗೆ ಬಂದು ಆಳ್ವಾರ್ರವರಿಗೆ ದರ್ಶನವಿತ್ತನು. ಸರ್ವೇಶ್ವರನ ದಿವ್ಯಮಂಗಳ ವಿಗ್ರಹವನ್ನು ಕಂಡು ಪೆರಿಯಾಳ್ವಾರ್ರವರು ಅವನ ಸೌಂದರ್ಯ ಸೌಕುಮಾರ್ಯಗಳನ್ನು ಸೇವಿಸಿ ಭಕ್ತಿಪರವಶರಾಗಿ ತನ್ನ ಮೇಲಿನ ವ್ಯಾಮೋಹದಿಂದ ಭೂಲೋಕಕ್ಕೆ ಬಂದಿರುವ ಭಗವಂತನ ಸೌಂದರ್ಯಕ್ಕೆ ಯಾವ ದೃಷ್ಟಿದೋಷವುಂಟಾಗುವುದೋ, ಏನು ತೊಂದರೆ ಬರುವುದೋ ಎಂದು ಭಯಪಟ್ಟು ಅವನ ದಿವ್ಯಮಂಗಳ ವಿಗ್ರಹಕ್ಕೆ ಯಾವ ರೀತಿಯ ಚ್ಯುತಿಯೂ ಉಂಟಾಗದಿರಲಿ ಎಂದು ಆನೆಯ ಮೇಲೆಯೇ ಎದ್ದುನಿಂತು ಆನೆಯ ಗಂಟೆಗಳನ್ನೇ ತಾಳವಾಗಿ ಮಾಡಿಕೊಂಡು "**ತಿರುಪ್ಪಲ್ಲಾಂಡು**" ಎಂಬ ದಿವ್ಯಪ್ರಬಂಧವನ್ನು ಹಾಡಿ ಪರಮಾತ್ಮನಿಗೆ ಮಂಗಳಾಶಾಸನ ಮಾಡಿದರು. ಪರಮಾತ್ಮನು ಆಳ್ವಾರ್ರನ್ನು ಆಶೀರ್ವದಿಸಿದನು.

ಅನಂತರ ಪೆರಿಯಾಳ್ವಾರ್ರವರು ತಮಗೆ ಶರಣಾದ ಪಾಂಡ್ಯ ರಾಜನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡು ಭಾಗವತಾಗ್ರೇಸರನನ್ನಾಗಿ ಮಾಡಿದರು. ಶ್ರೀವಿಲ್ಲಿಪುತ್ತೂರಿಗೆ ಹೋಗಿ ಮಧುರೈಯಲ್ಲಿ ತಮಗೆ ದೊರೆತ ದ್ರವ್ಯಗಳನ್ನೆಲ್ಲಾ ವಟಪತ್ರಶಾಯಿಗೆ ಸಮರ್ಪಿಸಿ ಅವನ ಗುಡಿಗೆ ಗೋಪುರವನ್ನು ಕಟ್ಟಿಸಿದರು. ಮತ್ತೆ ಅವರು ಪುಷ್ಪಕೈಂಕರ್ಯದಲ್ಲಿ ನಿರತರಾದರು. ಇವರಿಗೆ ಕೃಷ್ಣಾವತಾರದಲ್ಲಿ ಅತ್ಯಂತ ಪ್ರೀತಿಯಿದ್ದುದರಿಂದ ಆ ಅವತಾರ ಚರಿತ್ರೆಗಳನ್ನೂ ಶ್ರೀಕೃಷ್ಣನ ಬಾಲ್ಯ, ಅವನ ಲೀಲಾಚೇಷ್ಟೆಗಳನ್ನೂ ತಮ್ಮ ಎದುರಿನಲ್ಲಿಯೇ ಕಂಡಂತೆ ಅನುಭವಿಸಿ ಆ ಅನುಭವಗಳನ್ನು **ಪೆರಿಯಾಳ್ವಾರ್ ತಿರುಮೊಳಿ** ಎಂಬ 461 ಪಾಶುರಗಳುಳ್ಳ ಒಂದು ದಿವ್ಯ ಪ್ರಬಂಧ ರಚಿಸಿ ಲೋಕದ ಜನರಿಗೆ ಉಪಕಾರ ಮಾಡಿದ್ದಾರೆ.

ಇದರಲ್ಲಿ ಸ್ವಲ್ಪ ರಾಮಾವತಾರ ನರಸಿಂಹಾವತಾರಗಳ ವರ್ಣನೆಯೂ ಇದೆ.

**ತಿರುಪ್ಪಲ್ಲಾಂಡು** ಎಂಬ 12 ಪಾಶುರಗಳುಳ್ಳ ಚಿಕ್ಕ ಪ್ರಬಂಧದಲ್ಲಿ ತಮ್ಮನ್ನು ಆಶೀರ್ವದಿಸಲು ಶ್ರೀವೈಕುಂಠದಿಂದ ಲಕ್ಷ್ಮೀಸಮೇತನಾಗಿ ಗರುಡಾರೂಢನಾಗಿ ಬಂದ ಪರಮಾತ್ಮನಿಗೆ ಮಂಗಳಾಶಾಸನ ಮಾಡಿದ್ದಾರೆ. ಇದರಲ್ಲಿ ಐಶ್ವರ್ಯಾರ್ಥಿ, ಕೈವಲ್ಯಾರ್ಥಿ, ಭಗವತ್ ಶರಣಾರ್ಥಿ ಮುಂತಾಗಿ ಎಲ್ಲಾ ಮಾನವರನ್ನೂ ಪರಮಾತ್ಮನಿಗೆ ಮಂಗಳಾಶಾಸನ ಮಾಡಲು ಬರುವಂತೆ ಆಹ್ವಾನಿಸುತ್ತಾರೆ ಮತ್ತು ಅವರೆಲ್ಲರೊಂದಿಗೂ ಸೇರಿ ಪರಮಾತ್ಮನಿಗೆ ಮಂಗಳಾಶಾಸನ ಮಾಡುತ್ತಾರೆ. ಇವರು ಇತರ ಆಳ್ವಾರ್‌ಗಳಂತೆ ತಮಗೆ ಮುಕ್ತಿಯನ್ನು ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸದೆ, ಪರಮಾತ್ಮನಿಗೆ ಮಂಗಳವಾಗಬೇಕೆಂದು ಪರಮಾತ್ಮನಿಗೂ, ಶ್ರೀದೇವಿಗೂ, ಅವನು ಧರಿಸಿರುವ ಶಂಖಚಕ್ರಾದಿ ಆಯುಧಗಳಿಗೂ ಮಂಗಳಾಶಾಸನ ಮಾಡಿದ್ದಾರೆ.

ಪೆರಿಯಾಳ್ವಾರ್ ತನಿಯನ್

**ಗುರುಮುಖಮನಧೀತ್ಯ ಪ್ರಾಹ ವೇದಾನಶೇಷಾ**
**ನರಪತಿ ಪರಿಕ್ಲ್ಪ್ತಂ ಶುಲ್ಕಮಾದಾತುಕಾಮಃ।**
**ಶ್ವಶುರಮಮರವಂದ್ಯಂ ರಂಗನಾಥಸ್ಯ ಸಾಕ್ಷಾತ್**
**ದ್ವಿಜಕುಲತಿಲಕಂ ತಂ ವಿಷ್ಣುಚಿತ್ತಂ ನಮಾಮಿ॥**

# ಗೋದಾದೇವಿ

ಹಿಂದೆ ತ್ರೇತಾಯುಗದಲ್ಲಿ ಜನಕಮಹಾರಾಜನು ಯಾಗಶಾಲೆಗಾಗಿ ಭೂಮಿಯನ್ನು ಅಗೆದಾಗ ಶ್ರೀದೇವಿಯ ಅಂಶವಾಗಿ ಒಬ್ಬ ಮಗಳು ಸಿಗಲು ರಾಜನು ಅವಳನ್ನು ತನ್ನ ಮಗಳಾಗಿ ಭಾವಿಸಿ ಸೀತೆಯೆಂದು ಹೆಸರಿಟ್ಟು ಬೆಳಸಿದನು. ಅದೇರೀತಿಕಲಿಯುಗದಲ್ಲಿ ಪಾಂಡ್ಯಮಂಡಲದ ಶ್ರೀವಿಲ್ಲಿಪುತ್ತೂರಿನಲ್ಲಿ ಪೆರಿಯಾಳ್ವಾರ್ರು ತಿರುನಂದನವನದಲ್ಲಿ ಅಗೆಯುತ್ತಿದ್ದಾಗ ತುಳಸೀಗಿಡದ ಪಾತಿಯ ಕೆಳಗೆ ಭೂದೇವಿಯ ಅಂಶವಾಗಿ ಒಬ್ಬ ಮಗಳು ಆಡಿ ಮಾಸ ಪುಬ್ಬಾ ನಕ್ಷತ್ರದಲ್ಲಿ ಅವರಿಗೆ ಸಿಕ್ಕಿದಳು. ಅವಳನ್ನು ಆಳ್ವಾರ್ರು ತಮ್ಮ ಮಗಳಾಗಿ ಭಾವಿಸಿ ಗೋದಾದೇವಿ ಎಂದು ನಾಮಕರಣ ಮಾಡಿ ಬೆಳೆಸಿದರು. ಅವಳಿಗೆ ಪಂಚಸಂಸ್ಕಾರವನ್ನು ಮಾಡಿ ಬ್ರಹ್ಮಜ್ಞಾನವನ್ನು ಬೋಧಿಸಿದರು. ಅವಳಿಗೆ ಆಂಡಾಳ್ ಎಂದೂ ಹೆಸರಾಯಿತು.

ಗೋದಾದೇವಿಗೆ ಭಗವದ್ಭಕ್ತಿಯು ಹೆಚ್ಚಾಗಿದ್ದುದರಿಂದ ಭಗವಂತನನ್ನೇ ವಿವಾಹವಾಗಲು ನಿಶ್ಚಯಿಸಿ ಯಾವಾಗಲೂ ಅವನ ಮಹಿಮೆಯನ್ನು ಚಿಂತಿಸುತ್ತಲೂ, ನಾಮಸ್ಮರಣೆ ಮಾಡುತ್ತಲೂ ಇದ್ದಳು. ಪ್ರತಿದಿನವೂ ಪೆರಿಯಾಳ್ವಾರ್ರು ಶ್ರೀರಂಗನಾಥನಿಗೆ ಸಮರ್ಪಿಸಲು ಕಟ್ಟಿದ ಪುಷ್ಪಮಾಲೆಯನ್ನು ತನ್ನ ಕೊರಳಿಗೆ ಹಾಕಿಕೊಂಡು, ಪೀತಾಂಬರಗಳನ್ನೂ ಆಭರಣಗಳನ್ನೂ ಧರಿಸಿಕೊಂಡು, ತಾನು ಭಗವಂತನಿಗೆ ಅನುರೂಪಳಾಗಿ ಇರುವೆನೋ ಇಲ್ಲವೋ ಎಂದು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದಳು. ಅನಂತರ ತನ್ನ ತಂದೆಯವರು ಮನೆಗೆ ಹಿಂತಿರುಗುವುದಕ್ಕೆ ಮುಂಚೆಯೇ ಆ ಹೂಮಾಲೆಯನ್ನು ತೆಗೆದು ಮೊದಲಿನ ಹಾಗೆಯೇ ಸ್ವಲ್ಪವೂ ಬಾಡದಂತೆ ಸುತ್ತಿ ಹೂಬುಟ್ಟಿಯಲ್ಲಿ ಇಟ್ಟುಬಿಡುತ್ತಿದ್ದಳು. ಈ ರಹಸ್ಯವನ್ನು ಸ್ವಲ್ಪವೂ ಅರಿಯದ ಆಳ್ವಾರ್ರು ನಿತ್ಯವೂ

ಆ ಹೂಮಾಲೆಯನ್ನು ರಂಗನಾಥನಿಗೆ ಸಮರ್ಪಿಸುತ್ತಿದ್ದರು. ಭಗವಂತನೂ ಅದನ್ನು ಪ್ರೀತಿಯಿಂದ ಸ್ವೀಕರಿಸುತ್ತಿದ್ದನು. ಹೀಗೆಯೇ ಕೆಲವು ಕಾಲ ನಡೆಯುತ್ತಿದ್ದಿತು.

ಒಂದು ದಿವಸ ಹೊರಗೆ ಹೋಗಿದ್ದ ಆಳ್ವಾರ್‌ರು ಕಾರ್ಯಗೌರವದಿಂದ ಶೀಘ್ರವಾಗಿ ಮನೆಗೆ ಹಿಂದಿರುಗಿದಾಗ ಆಂಡಾಳ್ ಆ ಹೂಮಾಲೆಯನ್ನು ಧರಿಸಿಕೊಂಡಿರುವುದನ್ನು ನೋಡಿ ಕೋಪಿಸಿಕೊಂಡರು, ಅನಂತರ ತಮ್ಮ ಮಗಳಿಗೆ ಈ ರೀತಿ ಅಪಚಾರ ಮಾಡಕೂಡದೆಂದು ಬುದ್ಧಿ ಹೇಳಿ ಆ ದಿವಸ ವಟಪತ್ರಶಾಯಿಗೆ ಹೂಮಾಲೆಯನ್ನು ನಿತ್ಯದಂತೆ ಸಮರ್ಪಿಸದೆ ವ್ಯಸನಾಕ್ರಾಂತರಾಗಿದ್ದರು. ಆ ದಿವಸ ರಾತ್ರಿ ಭಗವಂತನು ಅವರಿಗೆ ಸ್ವಪ್ನದಲ್ಲಿ ದರ್ಶನವಿತ್ತು ತನಗೇಕೆ ಹೂಮಾಲೆಯನ್ನು ಸಮರ್ಪಿಸಲಿಲ್ಲವೆಂದು ಕೇಳಿದನು. ಅದಕ್ಕೆ ಪೆರಿಯಾಳ್ವಾರ್‌ರು ತಮ್ಮ ಮಗಳು ಮಾಡಿದ ತಪ್ಪನ್ನು ತಿಳಿಸಲು, ಅದರಿಂದಲೇ ಅದು ಸುವಾಸನೆಯಾಗಿ ತನಗೆ ಪ್ರಿಯವಾಗಿತ್ತೆಂದು ಭಗವಂತನು ಹೇಳಿದನು. ಇದನ್ನು ಕೇಳಿದ ಆಳ್ವಾರ್‌ರು ಜ್ಞಾನೋದಯವನ್ನು ಹೊಂದಿ ತಮ್ಮ ಮಗಳಾದ ಆಂಡಾಳನ್ನು ಬಹಳವಾಗಿ ಪ್ರೀತಿಸಿ ಅವಳನ್ನು ''ಶೂಡಿಕ್ಕೊಡುತ್ತನಾಚ್ಚಿಯಾರ್'' ಎಂಬ ತಿರುನಾಮದಿಂದ ಕರೆದರು.

ಆಂಡಾಳ್ ದೊಡ್ಡವಳಾಗುತ್ತಾ ಬರಲು ಅವಳಲ್ಲಿ ಜ್ಞಾನಭಕ್ತಿಗಳು ಹೆಚ್ಚುತ್ತಾ ಬಂದಿತು. ಹಿಂದೆ ಶ್ರೀಕೃಷ್ಣನ ವಿರಹವನ್ನು ಸಹಿಸಲಾರದೆ ಗೋಕುಲದ ಗೋಪಕನ್ಯೆಯರು ಮಾರ್ಗಶೀರ್ಷ ಮಾಸದಲ್ಲಿ ಕಾತ್ಯಾಯಿನೀ ವ್ರತವನ್ನು ಕೈಗೊಂಡಂತೆ ಗೋದಾದೇವಿಯು ಮಾರ್ಹಳಿ ನೀರಾಟ್ಟವೆಂಬ ವ್ರತವನ್ನು ಆಚರಿಸಿದಳು. ಅದರ ವಿಷಯಗಳನ್ನೆಲ್ಲಾ ತಮಿಳಿನಲ್ಲಿ **ತಿರುಪ್ಪಾವೈ, ನಾಚ್ಚಿಯಾರ್ ತಿರುಮೊಳಿ** ಎಂಬ ದಿವ್ಯ ಪ್ರಬಂಧಗಳಲ್ಲಿ ವಿವರಿಸಿ ತಿಳಿಸಿ ಜಗತ್ತಿಗೆ ಉಪಕಾರ ಮಾಡಿದ್ದಾಳೆ.

ಹೀಗೆಯೇ ಇರುತ್ತಿರಲು ಇವಳಿಗೆ ವಿವಾಹದ ವಯಸ್ಸು ಪ್ರಾಪ್ತವಾಗಲು ಪೆರಿಯಾಳ್ವಾರ್‌ರವರಿಗೆ ಇವಳಿಗೆ ಸರಿಯಾದ ವರನನ್ನು ಹುಡುಕುವ

ಯೋಚನೆಯುಂಟಾಯಿತು. ಆದರೆ ಇವಳು ತಾನು ಮನುಷ್ಯ ಮಾತ್ರದವರನ್ನು ವಿವಾಹವಾಗಲಾರೆನೆಂದೂ ಭಗವಂತನನ್ನೇ ವರಿಸಬೇಕೆಂಬ ಆಸೆಯನ್ನು ಹೊಂದಿರುವೆನೆಂದೂ ತಿಳಿಸಿದಳು. ಆಗ ಪೆರಿಯಾಳ್ವಾರ್ರವರು ನೂರೆಂಟು ದಿವ್ಯದೇಶಗಳ ಆರಾಧ್ಯ ದೇವರುಗಳ ಗುಣ ಪ್ರಭಾವಗಳನ್ನೆಲ್ಲಾ ಇವಳಿಗೆ ತಿಳಿಸಿದರು ಮತ್ತು ಅವರುಗಳಲ್ಲಿ ಇವಳು ಯಾರನ್ನು ಇಷ್ಟಪಡುತ್ತಾಳೆಂದು ಕೇಳಿದರು. ಅದನ್ನೆಲ್ಲಾ ಕೇಳಿ ಇವಳು ತಾನು ಶ್ರೀರಂಗದ ಅಳಹಿಯ ಮಣವಾಳನೆಂಬ ಶ್ರೀರಂಗನಾಥ ಪ್ರಭುವನ್ನು ವರಿಸಲು ಇಚ್ಛಿಸುವುದಾಗಿ ತಿಳಿಸಿದಳು.

ಇದನ್ನು ಕೇಳಿ ಪೆರಿಯಾಳ್ವಾರ್ರು ಭಗವಂತನೊಂದಿಗೆ ಇವಳ ವಿವಾಹವು ಸಾಧ್ಯವಾಗಬಲ್ಲದೇ ಎಂದು ಚಿಂತಾಕ್ರಾಂತರಾದರು. ಆಗ ಭಗವಂತನು ಸ್ವಪ್ನದಲ್ಲಿ ಇವರಿಗೆ ದರ್ಶನವನ್ನು ಇತ್ತು ಇವರ ಮಗಳಾದ ಆಂಡಾಳನ್ನು ತನ್ನ ದೇವಸ್ಥಾನಕ್ಕೆ ಕರತಂದರೆ ತಾನು ಅವಳನ್ನು ವರಿಸುವುದಾಗಿ ಅಭಯ ವಚನವನ್ನು ಹೇಳಿದನು. ಅದನ್ನು ಕೇಳಿ ಪೆರಿಯಾಳ್ವಾರ್ರು ಸಂತುಷ್ಟರಾದರು.

ಅನಂತರ ಶ್ರೀರಂಗನಾಥನು ತನ್ನ ದೇವಸ್ಥಾನದ ಪರಿಜನರಿಗೂ ಕನಸಿನಲ್ಲಿ ತೋರಿ ಅವರು ಶ್ರೀವಿಲ್ಲಿಪುತ್ತೂರಿಗೆ ಹೋಗಿ ನವರತ್ನ ಪಲ್ಲಕ್ಕಿಯಲ್ಲಿ ಗೋದಾದೇವಿಯನ್ನು ಸಕಲ ಮರ್ಯಾದೆಯೊಂದಿಗೆ ಕರೆತರುವಂತೆ ಆಜ್ಞಾಪಿಸಿದನು. ಇದನ್ನು ಅವರು ಶ್ರೀವಿಲ್ಲಿಪುತ್ತೂರಿಗೆ ಬಂದು ವಿಷ್ಣುಚಿತ್ತರಿಗೆ ತಿಳಿಸಲು ಅವರು ಸಂತೋಷಭರಿತರಾದರು. ಅವರು ಈ ವಿಷಯವನ್ನು ಶ್ರೀವಿಲ್ಲಿಪುತ್ತೂರಿನ ವಟಪತ್ರಶಾಯಿ ಪರಮಾತ್ಮನಿಗೆ ತಿಳಿಸಿ ಅವನ ಅನುಮತಿಯನ್ನು ಪಡೆದರು. ಈ ವೃತ್ತಾಂತವು ಅಲ್ಲಿನ ರಾಜನಾದ ವಲ್ಲಭದೇವನಿಗೆ ತಿಳಿಯಲು ಅವನು ಸಂತೋಷಿಸಿ ತಾನೂ ಈ ವಿವಾಹವನ್ನು ನಡೆಸಿ ಕೃತಾರ್ಥನಾಗಬೇಕೆಂದು ಇಚ್ಛಿಸಿ ಶ್ರೀವಿಲ್ಲಿಪುತ್ತೂರನ್ನೂ ಶ್ರೀರಂಗವನ್ನೂ ಅವರೆಡಕ್ಕೂ ಮಧ್ಯದಲ್ಲಿರುವ ಎಲ್ಲಾ ಸ್ಥಳಗಳನ್ನೂ ಚೆನ್ನಾಗಿ ಅಲಂಕರಿಸಲು ಏರ್ಪಾಡು ಮಾಡಿದನು ಮತ್ತು ಅವನೂ ಆಳ್ವಾರ್ರೊಂದಿಗೆ ಶ್ರೀರಂಗಕ್ಕೆ ಬಂದನು.

ಪೆರಿಯಾಳ್ವಾರ್ರು ಮಣಿಪಲ್ಲಕ್ಕಿಯಲ್ಲಿ ಗೋದಾದೇವಿಯನ್ನು ಕರೆದುಕೊಂಡು ವಾದ್ಯಗೋಷ್ಠಿಯೊಂದಿಗೆ ಶ್ರೀರಂಗಕ್ಕೆ ಬಂದರು. ಗೋದಾದೇವಿಯು ಭಗವಂತನ ಸಮೀಪಕ್ಕೆ ಹೋಗಿ ಅವನ ದಿವ್ಯ ಪಾದಾರವಿಂದದಲ್ಲಿ ನಮಸ್ಕರಿಸಿ ದಿವ್ಯಾನಂದವನ್ನು ಅನುಭವಿಸುತ್ತಾ ಅವನಲ್ಲಿ ಐಕ್ಯಳಾದಳು.

ಇದನ್ನು ಕಂಡು ವಲ್ಲಭದೇವನೂ ಆಳ್ವಾರ್ರೂ ಬಹಳ ಆಶ್ಚರ್ಯ ಹೊಂದಿದರು. ಭಗವಂತನು ಆಳ್ವಾರ್ರನ್ನು ನೋಡಿ "ನೀವೂ ನನಗೆ ಕ್ಷೀರ ಸಮುದ್ರರಾಜನಂತೆ ಮಾವನಾಗಿಬಿಟ್ಟಿರಿ" ಎಂದು ಹೇಳಿದನು. ಅವರಿಗೆ ತೀರ್ಥ, ತಿರುಪರಿವಟ್ಟ, ಮಾಲೆ, ಶ್ರೀಶಡಹೋಪ ಮುಂತಾದ ಮರ್ಯಾದೆಗಳನ್ನು ಅನುಗ್ರಹಿಸಿ ಅವರನ್ನು ಮೊದಲಿನಂತೆಯೇ ಶ್ರೀವಿಲ್ಲಿಪುತ್ತೂರಿನಲ್ಲಿ ಪುಷ್ಪಕೈಂಕರ್ಯವನ್ನು ನಡೆಸುವಂತೆ ಸ್ವಪ್ನದಲ್ಲಿ ನಿಯಮಿಸಿದನು. ಅನಂತರ ಆಳ್ವಾರ್ರು ಭಗವಂತನನ್ನೂ ಗೋದಾದೇವಿಯನ್ನೂ ಮನಸ್ಸಿಲ್ಲದ ಮನಸ್ಸಿನಿಂದ ಅಗಲಿ ಅಲ್ಲಿಂದ ಹೊರಟು ಶ್ರೀವಿಲ್ಲಿಪುತ್ತೂರಿಗೆ ಬಂದು ಸೇರಿ ಅಲ್ಲಿ ನಿತ್ಯ ಕೈಂಕರ್ಯವನ್ನು ಮಾಡುತ್ತಾ 85 ವರ್ಷಗಳ ಕಾಲ ಬಾಳಿ ಭಗವಂತನ ಪಾದಾರವಿಂದವನ್ನು ಸೇರಿದರು.

ಗೋದಾದೇವಿಯು **ತಿರುಪ್ಪಾವೈ** ಮತ್ತು **ನಾಚ್ಚಿಯಾರ್ ತಿರುಮೊಳಿ** ಎಂಬ ಎರಡು ದಿವ್ಯಪ್ರಬಂಧಗಳನ್ನು ರಚಿಸಿದ್ದಾಳೆ. **ತಿರುಪ್ಪಾವೈ** - ಇದರಲ್ಲಿ 30 ಪಾಶುರಗಳಿವೆ. ಕೃಷ್ಣಾವತಾರ ಕಾಲದಲ್ಲಿ ಗೋಪಿಯರು ಅನುಷ್ಠಿಸಿದ ಕಾತ್ಯಾಯಿನಿ ವ್ರತವನ್ನು ಅನುಸರಿಸಿ ಗೋದಾದೇವಿಯು ಮಾರ್ಹಳಿನೀರಾಟ್ಟವೆಂಬ ವ್ರತವನ್ನು ಕೈಗೊಂಡಳು. ಅದರಲ್ಲಿ ಕಲೆತುಕೊಳ್ಳುವಂತೆ ಎಲ್ಲರನ್ನೂ ಕರೆಯುತ್ತಾಳೆ. ಭಗವನ್ನಾಮ ಸಂಕೀರ್ತನೆ ಮಾಡಿ ಭಗವದ್ಗುಣ ಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯುವುದೇ ನೀರಾಟ್ಟವು. ಭಗವಂತನಿಗೆ ಸಲ್ಲಿಸುವ ಕೈಂಕರ್ಯವೇ ಇವರು ಆಸೆಪಡುವ 'ಪರೈ'- ಎಂಬ ಪುರುಷಾರ್ಥವು. ಗೋದಾದೇವಿಯು ತನ್ನನ್ನು

ಗೋಪಿಯನ್ನಾಗಿಯೂ, ಶ್ರೀವಿಲ್ಲಿಪುತ್ತೂರನ್ನೇ ನಂದಗೋಕುಲವನ್ನಾಗಿಯೂ, ಅಲ್ಲಿನ ದೇವಸ್ಥಾನವನ್ನೇ ಶ್ರೀಕೃಷ್ಣಪರಮಾತ್ಮನ ಅರಮನೆಯನ್ನಾಗಿಯೂ, ಅಲ್ಲಿಯ ಶ್ರೀವಟಪತ್ರಶಾಯಿಯ ಅರ್ಚಾಮೂರ್ತಿಯನ್ನೇ ಶ್ರೀಕೃಷ್ಣ ಪರಮಾತ್ಮನನ್ನಾಗಿಯೂ ಭಾವಿಸಿಕೊಂಡು 'ಮಾರ್ಹಳಿ ನೀರಾಟ್ಟ'-ವೆಂಬ ಈ ವ್ರತವನ್ನು ಆಚರಿಸಿದ್ದಾಳೆ.

**ತಿರುಪ್ಪಾವೈಯ ಮೊದಲ ಐದು ಪಾಶುರಗಳಲ್ಲಿ** ಶ್ರೀಗೋದಾದೇವಿಯು ತಾನು ಅನುಷ್ಠಿಸುವ ಈ ವ್ರತದ ಕ್ರಮವನ್ನೂ, ಅದರ ಹಿರಿಮೆಯನ್ನೂ ತಿಳಿಸಿದ್ದಾಳೆ. ಭಗವನ್ನಾಮ ಸಂಕೀರ್ತನೆ ಮಾಡುವುದರಿಂದ ಚೇತನರ ಹೃದಯದಲ್ಲಿ ಭಗವಂತನಲ್ಲಿ ಭಕ್ತಿಯು ಹುಟ್ಟಿ ಬೆಳೆಯುತ್ತದೆ ಎಂದೂ, ಭಗವದ್ಭಕ್ತರಿರುವ ದೇಶದಲ್ಲಿ ಮಳೆಯಾಗಿ ಫಲಪುಷ್ಪ ಪೈರುಗಳೆಲ್ಲವೂ ಸಮೃದ್ಧಿಯಾಗಿ ಬೆಳೆಯುತ್ತವೆ ಎಂದೂ, ಪರಮಾತ್ಮನು ತಮ್ಮ ಇಷ್ಟಾರ್ಥವನ್ನು ನೆರವೇರಿಸುವನೆಂದೂ; ಭಗವನ್ನಾಮಸಂಕೀರ್ತನೆ ಮಾಡುವ ಚೇತನರ ಹಿಂದಿನ, ಇಂದಿನ ಮತ್ತು ಮುಂದಿನ ಪಾಪಗಳೆಲ್ಲವೂ ಸುಟ್ಟು ಭಸ್ಮವಾಗುತ್ತವೆ ಎಂದೂ ತಿಳಿಸಿದ್ದಾಳೆ. ಆದ್ದರಿಂದ ಭಗವಂತನ ನಾಮಸಂಕೀರ್ತನೆ ಮಾಡಿ ಭಗವದ್ಗುಣ ಸಾಗರದಲ್ಲಿ ಮುಳುಗೋಣ ಬನ್ನಿರಿ ಎಂದು ಎಲ್ಲರನ್ನೂ ಕರೆಯುತ್ತಾಳೆ ಮತ್ತು ಆಚಾರ್ಯರ ಅನುಗ್ರಹವನ್ನೂ ಪ್ರಾರ್ಥಿಸುತ್ತಾಳೆ. ಅನಂತರ **6ನೇ ಪಾಶುರದಿಂದ 15ನೇ ಪಾಶುರದವರೆಗಿನ 10 ಪಾಶುರಗಳಲ್ಲಿ** ಭಗವದ್ಭಕ್ತರನ್ನೂ ಭಾಗವತರನ್ನೂ ಎಲ್ಲರನ್ನೂ ಬಂದು ತಮ್ಮೊಡನೆ ತಮ್ಮ ವ್ರತದಲ್ಲಿ ಕಲೆತುಕೊಳ್ಳುವಂತೆ ಪ್ರಾರ್ಥಿಸುತ್ತಾಳೆ.

**16ನೇ ಪಾಶುರದಿಂದ 20ರವರೆಗಿನ 5 ಪಾಶುರಗಳಲ್ಲಿ**- ಭಗವದ್ಭಕ್ತರೊಂದಿಗೂ ಭಾಗವತರೊಂದಿಗೂ ಸೇರಿ ಪರಮಾತ್ಮನ ಸನ್ನಿಧಿಗೆ ಹೋಗಿ ಅಲ್ಲಿ ಭಗವತ್ಕೈಂಕರ್ಯ ಪರರನ್ನೂ, ನಂದಗೋಪ, ಯಶೋದೆ ಬಲರಾಮರನ್ನೂ ಪ್ರಾರ್ಥಿಸಿ ಅವರ ಅನುಗ್ರಹಪಡೆದು; ಶ್ರೀದೇವಿಯನ್ನು ಪ್ರಾರ್ಥಿಸಿ ಅವಳ ಪುರುಷಕಾರವನ್ನೂ ಪಡೆದು - ಅನಂತರ ಪರಮಾತ್ಮನ

ಸನ್ನಿಧಿಗೆ ಹೋಗಿ ಶ್ರೀಸಹಿತನಾದ ಅವನ ಅನುಗ್ರಹವನ್ನು ಪ್ರಾರ್ಥಿಸುತ್ತಾಳೆ.

**21ನೇ ಪಾಶುರದಿಂದ 29ನೇ ಪಾಶುರದವರೆಗಿನ 9 ಪಾಶುರಗಳಲ್ಲಿ-** ಪರಮಾತ್ಮನಲ್ಲಿ ಶರಣಾಗತಿ ಮಾಡಿ, ಅವನಿಗೆ ಮಂಗಳಾಶಾಸನ ಮಾಡಿ, ತಮಗೆ ಭಗವತ್‌ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸಬೇಕೆಂದೂ ಅದಕ್ಕೆ ಅಡ್ಡಿಯಾಗಿರುವ ತಮ್ಮ ಸ್ವಾರ್ಥಕಾಮಗಳನ್ನೂ ತಮ್ಮ ಪಾಪಗಳನ್ನೂ ಹೋಗಲಾಡಿಸಬೇಕೆಂದೂ ಪ್ರಾರ್ಥಿಸಿದ್ದಾಳೆ.

**30ನೆಯ ಪಾಶುರವು** ಫಲಶ್ರುತಿಯಾಗಿದೆ. ಮಾರ್ಗಳಿ ನೀರಾಟ್ಟವೆಂಬ ಈ ವ್ರತವನ್ನು ಆಚರಿಸುವವರಿಗೆ ಪರಮಾತ್ಮನ ಅನುಗ್ರಹವು ಲಭಿಸುವುದೆಂದು ತಿಳಿಸಿದ್ದಾಳೆ. ಒಟ್ಟಿನಲ್ಲಿ ತಿರುಪ್ಪಾವೈಯಲ್ಲಿ ಗೋದಾದೇವಿಯು ಭಗವನ್ನಾಮ ಸಂಕೀರ್ತನೆಯ ಹಿರಿಮೆಯನ್ನೂ, ಭಗವದ್ಭಕ್ತರನ್ನೂ ಭಾಗವತರನ್ನೂ ಮುಂದಿಟ್ಟುಕೊಂಡು ಅವರ ಅನುಗ್ರಹ ಪಡೆದು ಶ್ರೀದೇವಿಯ ಪುರುಷಕಾರವನ್ನು ಪ್ರಾರ್ಥಿಸಿ ಪರಮಾತ್ಮನಲ್ಲಿ ಶರಣಾಗತಿ ಮಾಡ ಬೇಕೆಂಬುದನ್ನೂ, ಭಗವತ್‌ಕೈಂಕರ್ಯವೇ ಪರಮಪುರುಷಾರ್ಥವು, ಅದನ್ನು ಪಡೆಯಲು ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯವೆಂಬುದನ್ನೂ ಉಪದೇಶಮಾಡಿದ್ದಾಳೆ.

ತಿರುಪ್ಪಾವೈ ಸರ್ವರೂ ಅನುಸಂಧಾನ ಮಾಡಬೇಕಾದ ದಿವ್ಯ ಪ್ರಬಂಧವಾಗಿದೆ. ಮಾರ್ಗಳಿ ಮಾಸದಲ್ಲಿ ದೇವಸ್ಥಾನಗಳಲ್ಲಿ ತಿರುಪ್ಪಾವೈ ಪಾಶುರಗಳನ್ನು ಪ್ರತಿದಿನವೂ ಹೇಳಿ ಪರಮಾತ್ಮನಿಗೆ ಪೂಜೆ ಸಲ್ಲಿಸುವ ಪದ್ಧತಿ ಇಂದಿಗೂ ಇದೆ.

ಗೋದಾದೇವಿಯು ರಚಿಸಿರುವ **ನಾಚ್ಚಿಯಾರ್ ತಿರುಮೊಳಿಯಲ್ಲಿ** 143 ಪಾಶುರಗಳಿವೆ. ಇದರಲ್ಲಿ ಗೋದಾದೇವಿಯು ಶ್ರೀಕೃಷ್ಣಪರಮಾತ್ಮನಲ್ಲಿ ಪ್ರೇಮಾತಿಶಯವುಳ್ಳವಳಾಗಿ, ತನ್ನನ್ನು ನಾಯಕಿಯಾಗಿ ನೆನೆದು ಅನುಗ್ರಹಿಸಿ ಸ್ವೀಕರಿಸುವಂತೆ ಪ್ರಾರ್ಥಿಸಿದ್ದಾಳೆ.

ಗೋದಾದೇವಿಯ ತನಿಯನ್

ನೀಳಾತುಂಗಸ್ತನಗಿರಿತಟೀಸುಪ್ತಮುದ್ಬೋಧ್ಯ ಕೃಷ್ಣಂ
ಪಾರಾರ್ಥ್ಯಂ ಸ್ವಂ ಶ್ರುತಿಶತರಸ್ಸಿದ್ಧಮಧ್ಯಾಪಯನ್ತೀ।
ಸ್ವೋಚ್ಛಿಷ್ಟಾಯಾಂ ಸ್ರಜಿ ನಿಗಳಿತಂ ಯಾಬಲಾತ್ಕೃತ್ಯ ಭುಙ್ಕ್ತೇ
ಗೋದಾ ತಸ್ಯೈ ನಮ ಇದಮಿದಂ ಭೂಯ ಏವಾಸ್ತು ಭೂಯಃ॥

# ತೊಂಡರಡಿಪ್ಪೊಡಿ ಆಳ್ವಾರ್

ಇವರು ಚೋಳದೇಶದಲ್ಲಿ ತಿರುಮಂಡಂಕುಡಿ ಎಂಬ ಊರಿನಲ್ಲಿ ಮಾರ್ಗಶಿರ ಮಾಸದಲ್ಲಿ ಜೇಷ್ಠಾ ನಕ್ಷತ್ರದಲ್ಲಿ ವೈಜಯಂತಿ ಮಾಲೆಯ ಅಂಶವಾಗಿ ವೈದಿಕೋತ್ತಮರಾದ ಒಬ್ಬ ಬ್ರಾಹ್ಮಣ ಶ್ರೇಷ್ಠರಿಗೆ ಜನಿಸಿದರು. ಭಗವಂತನ ಕಟಾಕ್ಷದಿಂದ ಅವತರಿಸಿದ ಇವರಿಗೆ ಇವರ ತಂದೆಯವರು ವಿಪ್ರನಾರಾಯಣರೆಂದು ನಾಮಕರಣ ಮಾಡಿದರು. ಯಥಾಕಾಲದಲ್ಲಿ ಇವರಿಗೆ ಚೌಲೋಪನಯನಗಳು ನಡೆದುವು. ಇವರು ಸರ್ವವೇದ ವೇದಾಂಗಗಳಲ್ಲಿ ಚೆನ್ನಾಗಿ ಪಾರಂಗತರಾಗಿ ಪರಮ ಸಾತ್ವಿಕರಾಗಿ ಬೆಳೆದರು.

ಸರ್ವಜ್ಞರೂ ಸದಾಚಾರ ಸಂಪನ್ನರೂ ಆದ ವಿಪ್ರನಾರಾಯಣರು ಐಹಿಕ ಸುಖಗಳನ್ನು ತ್ಯಜಿಸಿ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾ ಇದ್ದರು. ದಿವ್ಯ ದೇಶಗಳಿಗೆ ಹೋಗಿ ಅಲ್ಲಿನ ಅರ್ಚಾಮೂರ್ತಿಗಳಿಗೆ ಮಂಗಳಾಶಾಸನ ಮಾಡಬೇಕೆಂಬ ಇಚ್ಛೆಯುಳ್ಳವರಾಗಿ ಶ್ರೀರಂಗಕ್ಷೇತ್ರಕ್ಕೆ ಹೋದರು. ಅಲ್ಲಿ ಶ್ರೀರಂಗನಾಥನ ಸೌಂದರ್ಯವನ್ನು ಅನುಭವಿಸುತ್ತಾ ಭಕ್ತಿಯಿಂದ ಅವರಿಗೆ ನಿತ್ಯಕೈಂಕರ್ಯ ಮಾಡುತ್ತಿದ್ದರು. ಇವರೂ ಪೆರಿಯಾಳ್ವಾರ್ರಂತೆಯೇ ಒಂದು ನಂದನವನವನ್ನು ನಿರ್ಮಿಸಿ ಅಲ್ಲಿ ಬೆಳಸಿದ ಹೂಮಾಲೆಯನ್ನೂ ತುಳಸೀ ಮಾಲೆಯನ್ನೂ ತಂದು ಭಗವಂತನಿಗೆ ಸಮರ್ಪಿಸುತ್ತಿದ್ದರು. ಬ್ರಾಹ್ಮಣರ ಮನೆಗಳಲ್ಲಿ ಭಿಕ್ಷಾಟನೆ ಮಾಡಿ ಊಟ ಮಾಡುತ್ತಿದ್ದರು.

ಬಹಳ ಸುಂದರಿಯಾದ ದೇವದೇವಿ ಎಂಬುವಳು ಚೋಳರಾಜನ ಆಸ್ಥಾನದಲ್ಲಿ ರಾಜನರ್ತಕಿಯಾಗಿದ್ದಳು. ಅವಳು ಅವನಿಂದ ಬಹಳ ಹಣವನ್ನು ಸಂಪಾದಿಸಿ ಬಹಳ ಗರ್ವದಿಂದ ಇದ್ದಳು. ಅವಳು ಒಂದುದಿನ ತನ್ನ ಸಖಿಯರೊಂದಿಗೂ ಸಹೋದರಿಯೊಂದಿಗೂ ತನ್ನ ಊರಿಗೆ ವಾಪಸ್ಸು

ಬರುತ್ತಿದ್ದಾಗ ವಿಶ್ರಾಂತಿಗೋಸ್ಕರ ಈ ವಿಪ್ರನಾರಾಯಣರ ನಂದನವನದ ಮರದ ಕೆಳಗೆ ಕುಳಿತಿದ್ದಳು. ಅವಳು ಅಲ್ಲಿನ ಉದ್ಯಾನವನ್ನು ನೋಡಿ ಬಹಳ ಸಂತೋಷ ಹೊಂದಿದಳು. ಆಗ ಅಲ್ಲಿ ವಿಪ್ರನಾರಾಯಣರು ತಿರುಪರಿವಟ್ಟವನ್ನೂ ದ್ವಾದಶೋರ್ಧ್ವಪುಂಡ್ರಗಳನ್ನೂ ತುಳಸೀ ಮಾಲೆಯನ್ನೂ ಧರಿಸಿ ಹೂಗಿಡಗಳಿಗೆ ಪಾತಿಯನ್ನು ಮಾಡುತ್ತಾ ನೀರನ್ನು ಹಾಕುತ್ತಿರುವುದನ್ನು ನೋಡಿದಳು. ಕೂಡಲೇ ಅವರ ಹತ್ತಿರ ಹೋಗಿ ಅವರನ್ನು ತನ್ನ ದೇಹ ಸೌಂದರ್ಯದಿಂದ ವಿಚಲಿತಗೊಳಿಸಬೇಕೆಂದು ಪ್ರಯತ್ನಿಸಿದಳು. ಆದರೆ ವಿರಕ್ತರಾದ ಅವರು ಅವಳನ್ನು ಕಣ್ಣೆತ್ತಿಯೂ ನೋಡದೆ ತಿರಸ್ಕರಿಸಿ ತಮ್ಮ ಕೈಂಕರ್ಯದಲ್ಲಿಯೇ ನಿರತರಾಗಿದ್ದರು. ರಾಜಾಧಿರಾಜರುಗಳೇ ತನ್ನ ಸೌಂದರ್ಯಕ್ಕೆ ಮರುಳಾಗಿದ್ದುದರಿಂದ ಇವರ ವಿರಕ್ತಿಯನ್ನು ನೋಡಿ ಅವಳಿಗೆ ಬಹಳ ಆಶ್ಚರ್ಯವಾಯಿತು. ಅವಳಿಗೆ ಹೇಗಾದರೂ ಇವರನ್ನು ವಶಪಡಿಸಿಕೊಳ್ಳಬೇಕೆಂಬ ಛಲವು ಉಂಟಾಯಿತು. ತನ್ನ ಅಕ್ಕನಿಗೆ ತಾನು ಇವರನ್ನು ವಶಪಡಿಸಿಕೊಳ್ಳದೆ ಬಿಡುವುದಿಲ್ಲವೆಂಬ ತನ್ನ ಹಠವನ್ನು ತಿಳಿಸಿದಳು.

ಅನಂತರ ಅವಳು ತನ್ನ ಆಭರಣಗಳನ್ನೆಲ್ಲಾ ತೆಗೆದು ಅವುಗಳನ್ನೂ ತನ್ನ ಸಹೋದರಿಯನ್ನೂ ಸಖಿಗಳೊಂದಿಗೆ ತನ್ನ ಊರಿಗೆ ಕಳುಹಿಸಿಬಿಟ್ಟಳು. ತೆಳುವಾದ ಕಾವಿಯ ಸೀರೆಯನ್ನುಟ್ಟು ವಿಪ್ರನಾರಾಯಣರಿಗೆ ನಮಸ್ಕರಿಸಿ ತಾನು ಒಬ್ಬ ಅನಾಥೆಯೆಂದೂ ತನ್ನನ್ನು ಅವರು ಕಾಪಾಡಬೇಕೆಂದೂ ಪ್ರಾರ್ಥಿಸಿಕೊಂಡಳು. ಅಲ್ಲದೆ ಅವರ ತೋಟದಲ್ಲಿ ಕೆಲಸದಲ್ಲಿ ಸಹಾಯ ಮಾಡುವುದಾಗಿಯೂ, ಹೂವಿನ ಮಾಲೆಗಳನ್ನು ಕಟ್ಟುವುದಾಗಿಯೂ, ಅವರು ಹೇಳಿದ ಕೆಲಸಗಳನ್ನೆಲ್ಲಾ ತಾನು ಮಾಡುವುದಾಗಿಯೂ ತಿಳಿಸಿದಳು. ಅವಳ ಕೃತ್ರಿಮವನ್ನು ಸ್ವಲ್ಪವೂ ಅರಿಯದೆ ಅದನ್ನು ನಿಜವೆಂದು ನಂಬಿ ವಿಪ್ರನಾರಾಯಾಣರು ಅವಳು ತಮ್ಮ ತೋಟದ ಕೆಲಸದಲ್ಲಿ ಸಹಾಯಕಳಾಗಲು ಸಮ್ಮತಿಸಿದರು. ಅವಳಿಗೆ ತಮ್ಮ ಊಟದಲ್ಲಿಯೇ ಮಿಕ್ಕಿದ್ದುದನ್ನು ಕೊಟ್ಟರು. ಅವಳು ಬಹಳ ಶ್ರದ್ಧೆಯಿಂದ ಆರು ತಿಂಗಳ ಕಾಲ ಇವರ ತೋಟದ ಕೆಲಸವನ್ನು

ಮಾಡುತ್ತಾ ಇವರಿಗೆ ತಾನು ಬಹಳ ಒಳ್ಳೆಯವಳೆಂಬ ನಂಬಿಕೆಯನ್ನು ಉಂಟುಮಾಡಿದಳು. ಹೀಗೆ ಕೆಲವು ಕಾಲ ಕಳೆಯಿತು.

ಒಂದು ದಿವಸ ಬಹಳ ಜೋರಾದ ಮಳೆಯು ಬಂದಿತು. ಆಗ ತೋಟದಲ್ಲಿದ್ದ ಅವಳನ್ನು ಪರ್ಣಶಾಲೆಯಲ್ಲಿದ್ದ ವಿಪ್ರನಾರಾಯಣರು ಒಳಕ್ಕೆ ಬರುವಂತೆ ಕರೆದರು. ಅವಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಇವರನ್ನು ತನ್ನ ದೇಹಸೌಂದರ್ಯದಿಂದಲೂ, ಹಿತವಾದ ಮಾತುಗಳಿಂದಲೂ ವಶಪಡಿಸಿಕೊಂಡು ಕೆಲವು ಕಾಲ ಇವರ ಜೊತೆಯಲ್ಲಿ ಇದ್ದಳು. ಅನಂತರ ಹಣವಿಲ್ಲದೆ ಇವರು ನಿರ್ಗತಿಕರಾಗಲು ಇವರನ್ನು ಲಕ್ಷ್ಯ ಮಾಡದೆ, ಅವಳು ಇವರನ್ನು ಮನೆಯಿಂದ ಆಚೆಗೆ ತಳ್ಳಿದಳು. ಇವರು ಅವಳನ್ನು ಬಿಟ್ಟಿರಲಾರದೆ ಅವಳ ಮನೆಯ ಬಾಗಿಲಿನಲ್ಲಿಯೇ ಇರುತ್ತಿದ್ದರು.

ಆಗ ಮಹಾಲಕ್ಷ್ಮಿಯು, ತಮಗೆ ಬಹಳ ವರ್ಷದಿಂದ ಸೇವೆ ಮಾಡುತ್ತಿದ್ದ ವಿಪ್ರನಾರಾಯಣರು ಈ ರೀತಿ ಒಬ್ಬ ದಾಸಿಗೆ ಮನಸೋತು ಅವಳ ದಾಸರಾಗಿ ಅವಳಿಂದ ತಿರಸ್ಕರಿಸಲ್ಪಟ್ಟು ಕಷ್ಟಪಡುತ್ತಿರುವುದನ್ನು ನೋಡಿ ಸಹಿಸಲಾರದೆ, ಹೇಗಾದರೂ ಮಾಡಿ ಇವರನ್ನು ಆ ಕಷ್ಟದಿಂದ ಪಾರುಮಾಡಿಸಿ ಪುನಃ ಮೊದಲಿನಂತೆ ತಮ್ಮ ಅಂತರಂಗ ಭಕ್ತರನ್ನಾಗಿ ಮಾಡಿಕೊಳ್ಳುವಂತೆ ಭಗವಂತನನ್ನು ಪ್ರಾರ್ಥಿಸಿದಳು. ಆಗ ಭಗವಂತನು ಮಹಾಲಕ್ಷ್ಮಿಯ ಇಷ್ಟವನ್ನು ನೆರವೇರಿಸಬೇಕೆಂದು ತಮ್ಮ ಸನ್ನಿಧಿಯಲ್ಲಿದ್ದ ಒಂದು ಚಿನ್ನದ ಬಟ್ಟಲನ್ನು ತೆಗೆದುಕೊಂಡು ಚಿಕ್ಕ ಬಾಲಕನಂತೆ ವೇಷ ಧರಿಸಿ ಅಳಹಿಯ ಮಣವಾಳನೆಂಬ ಹೆಸರು ಹೊಂದಿ ವಿಪ್ರನಾರಾಯಣರಿಗೆ ತಿಳಿಯದಂತೆ ಆ ದೇವದೇವಿಗೆ ಅದನ್ನು ವಿಪ್ರನಾರಾಯಾಣರು ಕಳುಹಿಸಿದರೆಂದು ಹೇಳಿಕೊಟ್ಟನು. ಅವಳು ಬಹಳ ಸಂತುಷ್ಟಳಾಗಿ ಅದನ್ನು ತೆಗೆದುಕೊಂಡು ತಾನು ಆಚೆಗೆತಳ್ಳಿದ್ದ ವಿಪ್ರನಾರಾಯಣರನ್ನು ಒಳಗೆ ಬರಮಾಡಿಕೊಂಡಳು. ಇದರಿಂದ ಇವರಿಗೆ ಮಹದಾನಂದವಾಯಿತು.

ಆ ರಾತ್ರಿಕಳೆದು ಬೆಳಗಾದ ಮೇಲೆ ದೇವಸ್ಥಾನದಲ್ಲಿದ್ದ ಬಹಳ ಬೆಲೆಬಾಳುವ ಚಿನ್ನದ ಬಟ್ಟಲು ಕಾಣದೆ ಇರಲು ಅಲ್ಲಿನ ಅಧಿಕಾರಿಗಳು ರಾಜನಿಗೆ ದೂರುಕೊಟ್ಟರು. ವಿಚಾರಣೆ ಮಾಡಲು ಅಲ್ಲಿಯ ಪರಿಜನರಲ್ಲಿ ಯಾರಲ್ಲಿಯೂ ಅದು ಸಿಕ್ಕಲಿಲ್ಲ. ಅಷ್ಟರಲ್ಲಿ ಅದು ದೇವದೇವಿಯ ಮನೆಯಲ್ಲಿರುವ ಸಮಾಚಾರವು ತಿಳಿಯಿತು. ಅವಳನ್ನು ರಾಜನು ವಿಚಾರಿಸಲು ಅವಳು ತನಗೆ ಅಳಹಿಯಮಣವಾಳದಾಸನೆಂಬ ದೂತನ ಮೂಲಕ ವಿಪ್ರನಾರಾಯಣರು ಕಳುಹಿಸಿದರೆಂದು ತಿಳಿಸಿದಳು. ಆದರೆ ವಿಪ್ರನಾರಾಯಣರನ್ನು ವಿಚಾರಿಸಲು ಅವರು ಈ ವಿಷಯವು ತಮಗೇನೂ ತಿಳಿಯದೆಂಬುದನ್ನು ತಿಳಿಸಿದರು. ಆದರೆ ರಾಜನು ಇವರನ್ನು ಸೆರೆಯಲ್ಲಿಟ್ಟನು.

ಮತ್ತೆ ಮಹಾಲಕ್ಷ್ಮಿಯು ವಿಪ್ರನಾರಾಯಣರನ್ನು ಕಾಪಾಡಬೇಕೆಂದು ಭಗವಂತನನ್ನು ಪ್ರಾರ್ಥಿಸಿದಳು. ಭಗವಂತನು ರಾಜನಿಗೆ ಸ್ವಪ್ನದಲ್ಲಿ ದರ್ಶನವಿತ್ತು ವಿಪ್ರನಾರಾಯಣರಿಗೆ ಅವರ ಕರ್ಮದಿಂದ ಈ ರೀತಿ ಸೆರೆವಾಸ ಪ್ರಾಪ್ತವಾಯಿತೆಂದೂ, ನಿಜವಾಗಿಯೂ ಅವರು ಕಳ್ಳರಲ್ಲವೆಂದೂ, ಪರಿಶುದ್ಧರೆಂದೂ ತಿಳಿಸಿದನು. ಇದನ್ನರಿತ ರಾಜನು ತಕ್ಷಣ ಇವರನ್ನು ಸೆರೆಯಿಂದ ಬಿಡಿಸಿದನು. ಇವರಿಗೆ ತಾವು ನಂದನವನದ ಕೈಂಕರ್ಯವನ್ನು ಬಿಟ್ಟು ವಿಷಯಲೋಲುಪ್ತರಾಗಿದ್ದುದರಿಂದ ಮನಸ್ಸಿಗೆ ಬಹಳ ಅನುತಾಪವುಂಟಾಯಿತು. ಅಗ ಇವರು ಹಿರಿಯರನ್ನು ತಮ್ಮ ದೋಷಕ್ಕೆ ಪ್ರಾಯಶ್ಚಿತ್ತವನ್ನು ವಿಧಿಸಬೇಕೆಂದು ಪ್ರಾರ್ಥಿಸಿದರು. ಅವರು ಸಕಲಪಾಪಕ್ಕೂ ಭಾಗವತರ ಸೇವೆ, ಅವರ ಶ್ರೀಪಾದತೀರ್ಥ ಸ್ವೀಕಾರವೇ ಪರಿಹಾರ ಎಂದು ತಿಳಿಸಲು ಅಂತೆಯೇ ಇವರು ಭಾಗವತರ ಸೇವೆ ಮಾಡಿ ಪರಿಶುದ್ಧರಾದರು.

ಇವರಿಗೆ ಮೊದಲಿನಂತೆಯೇ ಭಗವದ್ಭಾಗವತರಲ್ಲಿ ಭಕ್ತಿಯುಂಟಾಯಿತು. ಇವರು ಅನೇಕ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿ ಶ್ರೀವೈಷ್ಣವರ ದಾಸಾನುದಾಸರಾಗಿ ಅವರಿಗೆ ಸೇವೆ ಮಾಡಿ "**ತೊಂಡರಡಿಪ್ಪೊಡಿ ಆಳ್ವಾರ್**" ಎಂಬ ಹೆಸರನ್ನು ಪಡೆದರು.

ಶ್ರೀರಂಗನಾಥನು ಆಳ್ವಾರ್ರಿಗೆ ತತ್ತ್ವಜ್ಞಾನವನ್ನೂ ಮತ್ತು ತನ್ನಲ್ಲಿ ಭಕ್ತಿಯನ್ನೂ ಉಂಟುಮಾಡಿದನು. ಅನಂತರ ಇವರು ಯಾವಾಗಲೂ ಪರಮಾತ್ಮನ ಕೈಂಕರ್ಯದಲ್ಲಿಯೇ ನಿರತರಾಗಿದ್ದರು. ತಮ್ಮ ಅನುಭವಗಳನ್ನೆಲ್ಲಾ **''ತಿರುಮಾಲೈ''** **''ತಿರುಪಳ್ಳಿಯೆಳುಚ್ಚಿ''** ಎಂಬ ದಿವ್ಯಪ್ರಬಂಧಗಳಲ್ಲಿ ತಿಳಿಸಿ ಎಲ್ಲರಿಗೂ ಉಪಕಾರ ಮಾಡಿದ್ದಾರೆ. ಇವರು ಶ್ರೀರಂಗದಲ್ಲಿಯೇ ನೂರು ವರ್ಷ ಭಗವದ್ಭಾಗವತರ ಕೈಂಕರ್ಯಮಾಡಿಕೊಂಡಿದ್ದು ಅನಂತರ ದೇವರ ಪಾದಾರವಿಂದವನ್ನು ಸೇರಿದರು. ಇವರು **ತಿರುಪ್ಪಳ್ಳಿಯೆಳುಚ್ಚಿ** ಎಂಬ ಹತ್ತು ಪಾಶುರಗಳಲ್ಲಿ ಶ್ರೀರಂಗನಾಥನಿಗೆ ಸುಪ್ರಭಾತ ಹಾಡಿದ್ದಾರೆ. **ತಿರುಮಾಲೈ** ಎಂಬ 45 ಪಾಶುರಗಳುಳ್ಳ ದಿವ್ಯಪ್ರಬಂಧದಲ್ಲಿ ಪರಮಾತ್ಮನ ಗುಣಗಾನ ಮಾಡಿ, ಅವನ ನಾಮದ ಮಹಿಮೆಯನ್ನು ತಿಳಿಸಿದ್ದಾರೆ. ಶ್ರೀರಂಗನಾಥನ ಕಲ್ಯಾಣ ಗುಣಗಳನ್ನೂ, ದಿವ್ಯನಾಮಗಳನ್ನೂ ಸಂಕೀರ್ತನೆ ಮಾಡುವುದೇ ತಮಗೆ ಪರಮಪುರುಷಾರ್ಥವೆಂದೂ, ಅದರ ಸವಿಯ ಮುಂದೆ ಇಂದ್ರ ಪದವಿಯ ಸವಿಯೂ ತಮಗೆ ಬೇಡವೇಬೇಡ ಎಂದೂ ತಿಳಿಸಿದ್ದಾರೆ. ಪರಮಾತ್ಮನನ್ನು ಸ್ತುತಿಸಿ, ಭಜಿಸಿ ಅವನ ನಾಮಸಂಕೀರ್ತನೆ ಮಾಡಿ ಸಂಸಾರದಿಂದ ವಿಮುಕ್ತರಾಗಿ ಭಗವದನುಭವ ಪಡೆದು ಉಜ್ಜೀವಿಸುವಂತೆ ಮಾನವರೆಲ್ಲರಿಗೂ ಉಪದೇಶ ನೀಡಿದ್ದಾರೆ. ಇದು ಭಕ್ತಿಭರಿತವಾದ ಪಾಶುರವಾಗಿದೆ.

ತೊಂಡರಡಿಪ್ಪೊಡಿ ಆಳ್ವಾರ್ರ ತನಿಯನ್

**ತಮೇವ ಮತ್ವಾ ಪರವಾಸುದೇವಂ।**<br>
**ರಂಗೇಶಯಂ ರಾಜವದರ್ಹಣೀಯಂ॥**<br>
**ಪ್ರಾಬೋಧಕೀಂ ಯೋಽಕೃತ ಸೂಕ್ತಿಮಾಲಾಂ।**<br>
**ಭಕ್ತಾಂಘ್ರಿರೇಣುಮ್ ಭಗವನ್ತಮೀಡೇ॥**

# ತಿರುಪ್ಪಾಣಾಳ್ವಾರ್

ನೀಳಾದೇವಿಯ ಅಂಶರಾದ ಉರೆಯೂರ್ ನಾಚ್ಚಿಯಾರು ಅವತರಿಸಿದ, ಕಾವೇರಿ ನದಿಯ ತೀರದಲ್ಲಿರುವ ಉರೈಯೂರಿನಲ್ಲಿ **ತಿರುಪ್ಪಾಣಾಳ್ವಾರು** ಶ್ರೀವತ್ಸಾಂಶರಾಗಿ ಅವತರಿಸಿದರು. ಕಾರ್ತಿಕಮಾಸ ರೋಹಿಣೀ ನಕ್ಷತ್ರದಲ್ಲಿ ಒಬ್ಬ ಬ್ರಾಹ್ಮಣನ ಭತ್ತದ ಗದ್ದೆಯಲ್ಲಿ ಇವರ ಅವತಾರವಾಯಿತು. ಆ ಊರಿನಲ್ಲಿದ್ದ ಪಂಚಮಜಾತಿಯ ಪಾಣರ್ ಕುಲದವನೊಬ್ಬನು ಈ ದೇವತಾಮಗುವನ್ನು ನೋಡಿ ತನ್ನ ಜನ್ಮಾಂತರದ ಸುಕೃತವೆಂದು ಬಗೆದು ಸಂತೋಷಿಸಿ ತಮಗೆ ಮಕ್ಕಳಿಲ್ಲದ ಕೊರತೆ ನೀಗಿತೆಂದು ಅದನ್ನು ತನ್ನ ಮನೆಗೆ ಎತ್ತಿಕೊಂಡು ಹೋದನು. ಅವನೂ ಅವನ ಪತ್ನಿಯೂ ಈ ಮಗುವನ್ನು ಹಸುವಿನ ಹಾಲನ್ನೂ ಪರಿಶುದ್ಧವಾದ ಆಹಾರವನ್ನೂ ಕೊಟ್ಟು ಬೆಳೆಸಿದರು. ಭಗವಂತನ ಕೃಪೆಯಿಂದ ಇವರು ಸತ್ವಗುಣಭರಿತರಾಗಿ, ಲೋಕವ್ಯಾಪಾರಗಳಲ್ಲಿ ಆಸೆಯಿಲ್ಲದವರಾಗಿ, ಯಾವಾಗಲೂ ಭಗವಂತನನ್ನೇ ಧ್ಯಾನಿಸುತ್ತಾ ಇದ್ದರು. ಪಾಣರ್ ಎಂದು ಕರೆಯಲ್ಪಟ್ಟ ಇವರು ತಮ್ಮ ಕುಲ ಪದ್ಧತಿಯಂತೆ ವೀಣಾವಾದನವನ್ನು ಕಲಿತು ನಾರದರ ಹಾಗೆ ಜ್ಞಾನವೈರಾಗ್ಯಗಳನ್ನು ಹೊಂದಿ ಸಂಗೀತದಲ್ಲಿ ಸಾಮರ್ಥ್ಯವನ್ನು ಪಡೆದರು.

ಭಾಗವತೋತ್ತಮರಾದ ಇವರು ಶ್ರೀರಂಗನಾಥನಿಗೆ ಸಂಗೀತ ಕೈಂಕರ್ಯವನ್ನು ಮಾಡಲು ಉದ್ದೇಶಿಸಿ ತಾವು ಹೀನ ಕುಲದಲ್ಲಿ ಜನಿಸಿದ್ದುದರಿಂದ ಶ್ರೀರಂಗಕ್ಷೇತ್ರದಲ್ಲಿ ಕಾಲನ್ನಿಡದೆ ಕಾವೇರಿಯ ದಕ್ಷಿಣ ದಿಕ್ಕಿನಲ್ಲಿ ಶ್ರೀರಂಗನಾಥಸ್ವಾಮಿಗೆ ಎದುರಾಗಿ ಕೈಯಲ್ಲಿ ವೀಣೆಯೊಂದಿಗೆ ನಿಂತುಕೊಂಡು ಪರಮಾತ್ಮನಿಗೆ ನಮಸ್ಕರಿಸಿ ಭಗವದ್ವಿಷಯವಾದ ಅನೇಕ ಕೀರ್ತನೆಗಳನ್ನು ಇಂಪಾಗಿ ಭಕ್ತಿಯಿಂದ ಹಾಡುತ್ತಿದ್ದರು.

ಹೀಗೆ ಭಕ್ತಿಪರವಶರಾಗಿ ಇವರು ನಿತ್ಯವೂ ಬೆಳಗಿನ ಜಾವದಲ್ಲಿ ಕಾವೇರಿ ತೀರದಲ್ಲಿ ಹಾಡಿಕೊಂಡಿರಲು ಒಂದು ದಿವಸ ಶ್ರೀರಂಗನಾಥನ ತೀರ್ಥಕೈಂಕರ್ಯವನ್ನು ಮಾಡಲು ಬ್ರಾಹ್ಮಣೋತ್ತಮರಾದ ಲೋಕಸಾರಂಗ ಮಹಾಮುನಿ ಎಂಬುವರು ನೀರುತರಲು ಕೈಯಲ್ಲಿ ಚಿನ್ನದ ಕೊಡವನ್ನು ಹಿಡಿದುಕೊಂಡು ಕಾವೇರಿ ತೀರಕ್ಕೆ ಬಂದರು. ಆಗ ಹತ್ತಿರದಲ್ಲಿದ್ದ ಹೀನಕುಲದ ಪ್ರಾಣರನ್ನು ನೋಡಿ ಅವರನ್ನು ದೂರಹೋಗುವಂತೆ ಅವಾಚ್ಯಶಬ್ದಗಳಿಂದ ಬೈದರು. ಆದರೆ ಭಗವದ್ವಿಷಯಪ್ರವಣರಾಗಿದ್ದ ತಿರುಪ್ಪಾಣರಿಗೆ ಆ ಮಾತುಗಳು ಕಿವಿಗೆ ಬೀಳದೆ ಅವರು ಭಗವಂತನ ಸಂಕೀರ್ತನೆಯಲ್ಲಿ ನಿರತರಾಗಿದ್ದರು. ಎಷ್ಟು ಹೇಳಿದರೂ ಆ ಜಾಗವನ್ನು ಬಿಟ್ಟು ಕದಲದೇ ಇದ್ದ ಪಾಣರನ್ನು ದೂರ ಹೋಗುವಂತೆ ಕೆಲವು ಬ್ರಾಹ್ಮಣರು ಗಟ್ಟಿಯಾಗಿ ಕೂಗಿದರು. ಆದರೆ ಇವರಿಗೆ ಅವರ ಕೂಗು ಕೇಳಿಸದೆ ಇವರು ತಮ್ಮ ಸಂಗೀತದಲ್ಲಿಯೇ ತಲ್ಲೀನರಾಗಿದ್ದರು. ಅವರಲ್ಲಿ ಕೆಲವು ಬ್ರಾಹ್ಮಣರು ಇವರು ಜ್ಞಾನಯೋಗಿಯಲ್ಲ ಗಾನಯೋಗಿ ಎಂದು ಹೇಳುತ್ತಾ ಹೊರಟುಹೋದರು. ಮೂರ್ಖಶಿಖಾಮಣಿಗಳಾದ ಮತ್ತೆ ಕೆಲವರು ಇವರು ಆ ಜಾಗವನ್ನು ಬಿಟ್ಟು ಹೋಗಲೇಬೇಕೆಂದು ಇವರ ಮೇಲೆ ಕಲ್ಲುಗಳನ್ನು ಎಸೆದರು. ಒಂದು ಕಲ್ಲೇಟು ಹಣೆಗೆ ತಾಗಿತು. ಆದರೆ ಅದರ ನೋವಿನಿಂದ ಇವರು ಸ್ವಲ್ಪವೂ ವಿಚಲಿತರಾಗದೆ ಇರಲು ಎಲ್ಲರಿಗೂ ಆಶ್ಚರ್ಯವೂ ಸ್ವಲ್ಪ ಭಯವೂ ಉಂಟಾಯಿತು.

ಆಗ ಆಳ್ವಾರ್ರಿಗೆ ಮನಸ್ಸಿನಲ್ಲಿ ಯಾವ ರೀತಿಯಾದ ಕ್ಲೇಶವು ಕಾಣದೇ ಇದ್ದರೂ ಆಶ್ರಿತವತ್ಸಲನಾದ ಶ್ರೀರಂಗನಾಥನಿಗೆ ಮನಸ್ಸು ಕರಗಿ ಅವನ ಹಣೆಯಲ್ಲಿ ರಕ್ತ ಪ್ರವಾಹವುಂಟಾಯಿತು. ಇದನ್ನು ನೋಡಿದ ಅರ್ಚಕರು ಮುಂತಾದ ದೇವಸ್ಥಾನದ ಅಧಿಕಾರಿಗಳು ಈ ಅದ್ಭುತವಾದ ಸಂಗತಿಯನ್ನು ಮಹಾರಾಜನಿಗೆ ತಿಳಿಸಿದರು. ಅವನು ತನ್ನ ಮಂತ್ರಿಗಳೊಡನೆ ಆಲೋಚಿಸಿದರೂ ಅದರ ಕಾರಣವು ಅವನಿಗೆ ಬಗೆಹರಿಯಲಿಲ್ಲ.

ಮಹಾಲಕ್ಷ್ಮಿಯು ಭಗವಂತನಿಗೆ ತಿರುಪ್ಪಾಣರನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿದಳು. ಭಗವಂತನು ಲಕ್ಷ್ಮಿಯ ಆಸೆಯನ್ನು ನೆರವೇರಿಸಲು ಇಚ್ಛಿಸಿದನು. ಭಗವತ್ಪ್ರಾಪ್ತಿಗೆ ಜಾತಿಯು ಅನುಕೂಲವೂ ಅಲ್ಲ, ಪ್ರತಿಕೂಲವೂ ಅಲ್ಲ, ಭಕ್ತಿಯೇ ಮುಖ್ಯವಾದುದು ಎಂಬುದನ್ನು ಎಲ್ಲರಿಗೂ ತೋರಿಸಬೇಕೆಂದು ಇಚ್ಛಿಸಿ ಶ್ರೀರಂಗನಾಥನು ಲೋಕಸಾರಂಗ ಮುನಿವರ್ಯರಿಗೆ ಕನಸ್ಸಿನಲ್ಲಿ ದರ್ಶನವನ್ನು ಇತ್ತು ತನ್ನ ಪರಮಭಕ್ತರಾದ ತಿರುಪ್ಪಾಣರನ್ನು ಹೀನಕುಲದವರೆಂದು ನಿಕೃಷ್ಟವಾಗಿ ಕಾಣದೆ ಅವರ ಬಳಿ ಹೋಗಿ ಅವರನ್ನು ತಮ್ಮ ಭುಜದ ಮೇಲೆ ಕುಳ್ಳಿರಿಸಿಕೊಂಡು ತನ್ನ ದೇವ ಸ್ಥಾನಕ್ಕೆ ಕರೆತರುವಂತೆ ನಿಯಮಿಸಿ ಅಂತರ್ಧಾನನಾದನು. ಬೆಳಿಗ್ಗೆ ಎದ್ದ ತಕ್ಷಣ ತಮ್ಮ ಕನಸ್ಸಿನಲ್ಲಿ ನಡೆದ ಈ ವಿಷಯವನ್ನು ಲೋಕಸಾರಂಗಮುನಿಗಳು ಎಲ್ಲರಿಗೂ ತಿಳಿಸಿ ಭಗವಂತನ ಅಣತಿಯಂತೆ ಅವರನ್ನು ಎದುರುಗೊಳ್ಳಲು ಶುಭ್ರರಾಗಿ ದ್ವಾದಶೋರ್ಧ್ವ ಪುಂಡ್ರವನ್ನು ಧರಿಸಿ ದೊಡ್ಡಗೋಷ್ಠಿಯೊಂದಿಗೆ ಹೊರಟರು. ತಿರುಪ್ಪಾಣರು ಯಾವಾಗಲೂ ನಿಲ್ಲುತ್ತಿದ್ದ ಜಾಗಕ್ಕೆ ಹೋದರು. ಅಲ್ಲಿ ತಿರುಪ್ಪಾಣರ ಪಾದಗಳಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಭಗವಂತನು ಅವರನ್ನು ತಮ್ಮ ಸನ್ನಿಧಿಗೆ ಕರೆತರುವಂತೆ ತಮಗೆ ನಿಯಮಿಸಿರುವುದನ್ನು ತಿಳಿಸಿದರು. ಅದಕ್ಕೆ ತಿರುಪ್ಪಾಣರು ಹೀನಕುಲದವರಾದ ತಾವು ಶ್ರೀರಂಗಕ್ಷೇತ್ರದ ನೆಲವನ್ನು ತುಳಿಯುವುದಿಲ್ಲವೆಂದು ನಿರಾಕರಿಸಿದರು.

ಅದನ್ನು ಕೇಳಿದ ಲೋಕಸಾರಂಗಮುನಿವರ್ಯರು ಭಗವಂತನು ಆದಿಶೇಷನ ಭುಜದ ಮೇಲೆ ಬಿಜಯ ಮಾಡುವಂತೆ ತಿರುಪ್ಪಾಣರನ್ನು ತಮ್ಮ ಭುಜದ ಮೇಲೆ ಕುಳಿತುಕೊಂಡು ಭಗವಂತನ ಸನ್ನಿಧಿಗೆ ಬರುವಂತೆ ಪ್ರಾರ್ಥಿಸಿದರು. ಆದರೆ ತಿರುಪ್ಪಾಣರು ಈ ರೀತಿ ಭಾಗವತರ ಅಪಚಾರವನ್ನು ಮಾಡುವುದಕ್ಕಿಂತ ಘೋರವಾದ ನರಕದಲ್ಲಿ ಬೀಳುವುದು ಒಳ್ಳೆಯದೆಂದು ಹೇಳಿ ನಿರಾಕರಿಸಿದರು. ಆಗ ಲೋಕಸಾರಂಗ ಮುನಿವರ್ಯರು ಭಗವಂತನ ನಿಯಮನವನ್ನು ಅವರಿಗೆ ತಿಳಿಸಿ ಶ್ರೀರಂಗನಾಥನ ಆಜ್ಞೆಯನ್ನು

ಉಲ್ಲಂಘಿಸುವುದು ತರವಲ್ಲವೆಂದು ಅವರಿಗೆ ಹೇಳಿ ನಿರ್ಬಂಧಿಸಿದರು. ತಿರುಪ್ಪಾಣ ಆಳ್ವಾರ್ರು, ಭಗವಂತನ ಈ ನಿಯಮನಕ್ಕೆ ಏನೂ ಹೇಳಲು ತೋರದವರಾಗಿ ಬದ್ಧಾಂಜಲಿಪುಟರಾಗಿ ಭಗವಂತನಿಗೆ ತಮ್ಮನ್ನು ಅರ್ಪಿಸಿ ಪರತಂತ್ರರಾಗಿ ಸುಮ್ಮನೆ ನಿಂತುಬಿಟ್ಟರು. ಅನಂತರ ಲೋಕಸಾರಂಗರು ತಿರುಪ್ಪಾಣ ಆಳ್ವಾರ್ರನ್ನು ತಮ್ಮ ಭುಜದಮೇಲೆ ಕುಳ್ಳಿರಿಸಿಕೊಂಡು ಮುಕ್ತಾತ್ಮರನ್ನು ವಾಹಕರು ತಮ್ಮ ಭುಜದಮೇಲೆ ಎತ್ತಿಕೊಂಡು ತಿರುಮಾಮಣಿ ಮಂಟಪಕ್ಕೆ ಕರೆದುಕೊಂಡು ಹೋಗುವಂತೆ ಹೋಗಿ ಶ್ರೀರಂಗನಾಥನ ಮುಂದೆ ಇಳಿಸಿದರು.

ಒಡನೆ ಮುನಿವಾಹನರಾದ ತಿರುಪ್ಪಾಣಾಳ್ವಾರ್ರು ಶ್ರೀರಂಗನಾಥನ ದಿವ್ಯಮಂಗಳ ವಿಗ್ರಹವನ್ನು ಪಾದಾದಿಕೇಶಪರ್ಯಂತ ಬಹಳ ಆನಂದದಿಂದ ದರ್ಶನ ಮಾಡಿ ಆ ಅನುಭವವು ಎಲ್ಲರಿಗೂ ತಿಳಿಯುವಂತೆ "**ಅಮಲನಾದಿ ಪಿರಾನ್**" ಎಂಬ ದಿವ್ಯಪ್ರಬಂಧದಲ್ಲಿ ವಿಶದಪಡಿಸಿ ಅನುಗ್ರಹಿಸಿದರು. ಅನಂತರ ಎಲ್ಲರೂ ನೋಡುತ್ತಿದ್ದಂತೆಯೇ ಶ್ರೀರಂಗನಾಥಸ್ವಾಮಿಯ ದಿವ್ಯಪಾದಾರವಿಂದಗಳಲ್ಲಿ ಅಂತರ್ಧಾನರಾದರು. ಇವರು 50 ವರ್ಷಗಳ ಕಾಲ ಭೂಲೋಕದಲ್ಲಿ ಜೀವಿಸಿ ಭಗವಂತನ ಪಾದಾರವಿಂದವನ್ನು ಸೇರಿದರು. ಇವರು '**ಅಮಲನಾದಿಪಿರಾನ್** ಎಂಬ 10 ಪಾಶುರಗಳುಳ್ಳ ದಿವ್ಯಪ್ರಬಂಧದಲ್ಲಿ ಶ್ರೀರಂಗನಾಥನ ಸೌಂದರ್ಯವನ್ನು ಪಾದಾದಿಕೇಶಪರ್ಯಂತ ವರ್ಣಿಸಿ ಹಾಡಿದ್ದಾರೆ. ಲೋಕಸಾರಂಗಮಹಾಮುನಿಗಳು ಇವರನ್ನು ಶ್ರೀರಂಗನಾಥಸ್ವಾಮಿಯ ಮುಂದೆ ಎತ್ತಿಕೊಂಡು ಹೋಗಿ ನಿಲ್ಲಿಸಿದಾಗ ಪರಮಾತ್ಮನು ತನ್ನ ದಿವ್ಯಮಂಗಳ ವಿಗ್ರಹದ ದರ್ಶನವನ್ನು ಇವರಿಗೆ ಅನುಗ್ರಹಿಸಿದನು. ಇವರು ಆ ದಿವ್ಯಮಂಗಳ ವಿಗ್ರಹವನ್ನು ಸಾಕ್ಷಾತ್ಕರಿಸಿ ಆನಂದಭರಿತರಾಗಿ ಪರಮಾತ್ಮನ ಪಾದಗಳಿಂದ ಪ್ರಾರಂಭಿಸಿ ಅವನ ಶಿರಸ್ಸಿನವರೆಗಿನ ಸೌಂದರ್ಯವನ್ನು ಈ ಹತ್ತು ಪಾಶುರಗಳಲ್ಲಿ ವಿವರವಾಗಿ ವರ್ಣಿಸಿದ್ದಾರೆ. ಪರಮಾತ್ಮನ ಈ ದಿವ್ಯ ಮಂಗಳ ವಿಗ್ರಹವನ್ನು ದರ್ಶಿಸಿದ

ತಮ್ಮ ಕಣ್ಣುಗಳು ಮತ್ತೆ ಬೇರೆ ಏನನ್ನೂ ಕಾಣಲಾರವು ಎಂದು ಹೇಳಿ ಪರಮಾತ್ಮನಲ್ಲಿ ಶರಣಾಗಿ ಅವನ ಅನುಗ್ರಹಕ್ಕೆ ಪಾತ್ರರಾಗಿ ಅವನಲ್ಲಿ ಐಕ್ಯರಾದರು.

ತಿರುಪ್ಪಾಣಾಳ್ವಾರ್ ತನಿಯನ್

**ಆಪಾದಚೂಡಮನುಭೂಯ ಹರಿಂ ಶಯಾನಂ**
**ಮಧ್ಯೇ ಕವೇರದುಹಿತುರ್ಮುದಿತಾನ್ತರಾತ್ಮಾ।**
**ಅದ್ರಷ್ಟತಾಂ ನಯನಯೋರ್ವಿಷಯಾನ್ತರಾಣಾಂ**
**ಯೋ ನಿಶ್ಚಿಕಾಯ ಮನವೈ ಮುನಿವಾಹನಂ ತಮ್॥**

# ತಿರುಮಂಗೈ ಆಳ್ವಾರ್

ಚೋಳಮಂಡಲದ ತಿರುವಾಲಿ ತಿರುನಗರಿಯ ತಿರುಕುರೈ ಎಂಬ ಊರಿನಲ್ಲಿ ಚೋಳದೇಶದ ರಾಜನಿಗೆ ಸೇನಾಧಿಪತಿಯಾಗಿ ಚೋಳ ಮಂಡಲದ ತಿರುವಾಲಿ ತಿರುಗರಿಯ ತಿರುಕುರೈ ಎಂಬ ಊರಿನಲ್ಲಿ ಚತುರ್ಥ ಜಾತಿಯವನೊಬ್ಬನು ವಾಸಿಸುತ್ತಿದ್ದನು. ಚೋಳದೇಶದ ರಾಜನಿಗೆ ಸೇನಾಧಿಪತಿಯಾಗಿ ಇದ್ದನು. ಇತನಿಗೆ ನಳವರುಷ ಕಾರ್ತಿಕಮಾಸದ ಕೃತ್ತಿಕಾ ನಕ್ಷತ್ರದಲ್ಲಿ ಪರಮಾತ್ಮನ ಶಾರ್ಙ್ಗವೆಂಬ ಧನುಸ್ಸಿನ ಅಂಗವಾಗಿ ತಿರುಮಂಗೈ ಆಳ್ವಾರ್‌ರವರು ಜನಿಸಿದರು. ಇವರು ಹುಟ್ಟುವಾಗಲೇ ನೀಲಿವರ್ಣ ದಲ್ಲಿದ್ದುದರಿಂದ ಇವರ ತಂದೆಯು ಇವರಿಗೆ ನೀಲನಿರತ್ತನೆಂದು ನಾಮಕರಣ ಮಾಡಿದರು. ಮುಂದೆ ಇವರಿಗೆ **ತಿರುಮಂಗೈ ಆಳ್ವಾರ್** ಎಂಬ ಮತ್ತು **ಪರಕಾಲನ್‌ಕಲಿಯನ್** ಎಂಬ ಹೆಸರುಗಳು ಉಂಟಾದವು.

ಇವರು ತಮ್ಮ ಕುಲಕಸುಬಿಗೆ ಅನುಗುಣವಾಗಿ ಚಿಕ್ಕ ವಯಸ್ಸಿನಿಂದಲೇ ಯುದ್ಧಮಾಡುವುದನ್ನು ಚೆನ್ನಾಗಿ ಕಲಿತರು. ಚೋಳರಾಜನು ಅವನ ಶತ್ರುಗಳೊಂದಿಗೆ ಯುದ್ಧಕ್ಕೆ ಹೋದಾಗ ತಾವೂ ಸೈನ್ಯಸಮೇತರಾಗಿ ಹೋಗಿ ಪರಾಕ್ರಮದಿಂದ ಎಲ್ಲರನ್ನೂ ಜಯಿಸಿ ಪರಕಾಲನೆಂದು ಪ್ರಸಿದ್ಧಿ ಪಡೆದರು. ಇವರ ಅಸಾಧಾರಣವಾದ ಪರಾಕ್ರಮವನ್ನು ನೋಡಿ ಸಂತಸಗೊಂಡ ರಾಜನು ಇವರನ್ನು ಆ ತಿರುಮಂಗೈ ದೇಶಕ್ಕೆ ಅರಸನನ್ನಾಗಿ ಮಾಡಿದನು. ಅನಂತರ ಇವರು ತಿರುಮಂಗೈ ಅರಸನೆಂದು ಪ್ರಸಿದ್ಧಿ ಪಡೆದು ತಮ್ಮ ರಾಜ್ಯವನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದರು.

ಆ ಊರಿನ ತಿರುವಳ್ಳಕುಳವೆಂಬ ಒಂದು ತಾವರೆಹೂವಿನ ತಟಾಕದಲ್ಲಿ ದೇವಲೋಕದ ಅಪ್ಸರ ಸ್ತ್ರೀಯರು ಬಂದು ಜಲಕ್ರೀಡೆಯಾಡಿ ವಾಪಸ್ಸು ಹೋದರು. ಅವರ ಜೊತೆಯಲ್ಲಿ ಬಂದ ತಿರುಮಾಮಹಳ್ ಎಂಬುವಳು ವಾಪಸ್ಸು ಹೋಗದೆ ತನ್ನ ಸ್ವಇಚ್ಛೆಯಿಂದ ಮನುಷ್ಯ ರೂಪವನ್ನು ಧರಿಸಿ

ಬಾಲೆಯಾಗಿ ಅಲ್ಲಿಯೇ ಕುಮುದ ಪುಷ್ಪಗಳನ್ನು ಕೀಳುತ್ತಾ ಇದ್ದಳು. ಆಗ ಅಲ್ಲಿಗೆ ಸ್ನಾನ ಮಾಡಲು ಬಂದಿದ್ದ ಒಬ್ಬ ವೈಷ್ಣವ ಭಾಗವತೋತ್ತಮರಾದ ವೈದ್ಯರು ಅವಳನ್ನು ಕಂಡು ಅವಳಾರೆಂದು ವಿಚಾರಿಸಲು ಅವಳು ತನ್ನನ್ನು ತನ್ನ ಸ್ನೇಹಿತರು ಬಿಟ್ಟು ವಾಪಸ್ಸು ಹೋಗಿರುವರೆಂದೂ; ತನಗೆ ಹಿಂದೆ ಕಪಿಲರು ಒಂದು ಶಾಪಕೊಟ್ಟಿರು ವುದಾಗಿಯೂ ಭಗವಂತನ ಶಾರ್ಙ್ಗಾಂಶರಾಗಿ ಅವತರಿಸಿರುವ ರಾಜ್ಯಾಧಿಪತಿಯಾಗಿರುವವನಿಗೆ ಪತ್ನಿಯಾಗಿ ಅವರನ್ನು ಭಾಗವತೋತ್ತಮ ರನ್ನಾಗಿ ಮಾಡಿದರೆ ತನ್ನ ಶಾಪವು ತೀರುವುದು ಎಂದು ಹೇಳಿದ್ದಾರೆಂದೂ ಹೇಳಿದಳು ಮತ್ತು ಒಬ್ಬಳೇ ಇರುವ ತನ್ನನ್ನು ಅವರು ಕಾಪಾಡಬೇಕೆಂದು ಕೇಳಿಕೊಂಡಳು. ಮಕ್ಕಳಿಲ್ಲದೆ ಇದ್ದ ಆ ವೈದ್ಯರು ಬಹಳ ಸಂತೋಷದಿಂದ ಅವಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ತಮ್ಮ ಪತ್ನಿಗೆ ಒಪ್ಪಿಸಿದರು. ಅವಳು ಕುಮುದ ಪುಷ್ಪವನ್ನು ಕೀಳುತ್ತಿದ್ದುದರಿಂದ ಅವಳಿಗೆ ಕುಮುದವಲ್ಲೀ ಎಂಬ ಹೆಸರಿಟ್ಟು ಬಹಳ ಪ್ರೀತಿಯಿಂದ ಬೆಳೆಸಿದರು. ಮದುವೆಯ ವಯಸ್ಸು ಬರಲು ಅವಳನ್ನು ಸಾಕುತ್ತಿದ್ದ ಆ ವೈದ್ಯರಿಗೆ ಲಾವಣ್ಯವತಿಯಾದ ಅವಳಿಗೆ ಸರಿಯಾದ ವರನನ್ನು ಎಲ್ಲಿ ಹುಡುಕುವುದೆಂಬ ಚಿಂತೆಯುಂಟಾಯಿತು.

ಕುಮುದವಲ್ಲಿಯ ರೂಪಲಾವಣ್ಯವನ್ನೂ ಸೌಂದರ್ಯವನ್ನೂ ಗುಣಾತಿಶಯಗಳನ್ನೂ ಕೇಳಿ ತಿರುಮಂಗೈ ರಾಜನು ಅವಳನ್ನು ನೋಡಲು ಬಹಳ ಆಸೆಯಿಂದ ತನ್ನ ರಾಜಕಾರ್ಯಗಳನ್ನೂ ಬಿಟ್ಟು ಆ ವೈದ್ಯರೊಂದಿಗೆ ಮಾತನಾಡಲು ಅವರ ಮನೆಗೆ ಬಂದನು. ಅಲ್ಲಿ ಆ ಕನ್ಯಾಮಣಿಯನ್ನು ಕಂಡು, ಅವಳ ವಿಷಯವನ್ನೆಲ್ಲಾ ಆ ವೈದ್ಯರನ್ನು ಕೇಳಿ ತಿಳಿದುಕೊಂಡು ಅವಳನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಅವರನ್ನು ಕೇಳಿದನು. ಅವನ ಮಾತನ್ನು ಕೇಳಿದ ಆ ವೃದ್ಧ ದಂಪತಿಗಳು ಸಂತೋಷಿಸಿ ಕನ್ಯಾದಾನವನ್ನು ಮಾಡಲು ಒಪ್ಪಿಕೊಂಡರು. ಆ ಕುಮುದವಲ್ಲಿಯು ತಾನು ಪಂಚಸಂಸ್ಕಾರವನ್ನು ಪಡೆದಿರುವ ಪರಮ ವೈಷ್ಣವನನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗುವುದಿಲ್ಲವೆಂದು ಹೇಳಿದಳು.

ಕುಮದವಲ್ಲಿಯ ಈ ಷರತ್ತುಗಳಿಗೆ ಒಪ್ಪಿದ ತಿರುಮಂಗೈರಾಜನು ತಕ್ಷಣವೇ ತಿರುನರೈಯೂರ್ ಪರಮಾತ್ಮನ ಹತ್ತಿರ ಹೋಗಿ ಪ್ರಾರ್ಥಿಸಿ ಶಂಖಚಕ್ರಾಂಕನವನ್ನೂ ಕೇಶವಾದಿ ದ್ವಾದಶೋರ್ಧ್ವಪುಂಡ್ರಗಳನ್ನೂ ಧರಿಸಿ ವಿವಾಹ ಮಾಡಿಕೊಳ್ಳಲು ಬಂದನು. ಆಗ ಕುಮುದವಲ್ಲಿಯು ಅವಳನ್ನು ಮದುವೆಯಾಗಬೇಕಾದರೆ ಅವನು ಒಂದು ವರ್ಷಕಾಲ ನಿತ್ಯವೂ 1008 ಶ್ರೀವೈಷ್ಣವರುಗಳಿಗೆ ತದಿಯಾರಾಧನೆ ನಡೆಸಿ ಅವರ ಶ್ರೀಪಾದತೀರ್ಥವನ್ನು ಸ್ವೀಕರಿಸಬೇಕೆಂಬ ಷರತ್ತನ್ನೂ ತಿಳಿಸಿದಳು. ಅವಳ ಮೇಲಿನ ಅತಿಯಾದ ಮೋಹಾವೇಶದಿಂದ ಅವನು ಅವಳ ಈ ಷರತ್ತನ್ನೂ ನಡೆಸುತ್ತೇನೆಂದು ಶಪಥ ಮಾಡಿದನು. ಅನಂತರ ಕುಮುದವಲ್ಲಿಗೂ ತಿರುಮಂಗೈ ರಾಜನಿಗೂ ವಿವಾಹವು ನಡೆಯಿತು.

ರಾಜನ ಬೊಕ್ಕಸದ ಹಣವೆಲ್ಲವೂ ತಿರುಮಂಗೈಯವರ ಸ್ವಾಧೀನದಲ್ಲಿದ್ದುವು. ಇವರು ಅವೆಲ್ಲವನ್ನೂ ಈ ಭಾಗವತ ತದಿಯಾರಾಧನೆಯ ಖರ್ಚಿಗೆ ಉಪಯೋಗಿಸಿಬಿಟ್ಟರು. ಈ ಸಮಾಚಾರವು ರಾಜನಿಗೆ ತಿಳಿಯಲು ಅವನು ಬಹಳ ಕೋಪಗೊಂಡು ಇವರಿಂದ ಹಣವನ್ನು ವಸೂಲು ಮಾಡಲು ಅವನ ಸೇವಕರನ್ನು ಕಳುಹಿಸಿದನು. ಆದರೆ ಇವರ ಹತ್ತಿರ ಆ ಹಣವು ಇಲ್ಲದೆ ಇದ್ದುದರಿಂದ ಇವರು ಸುಳ್ಳು ಹೇಳುತ್ತಾ ಕಾಲವಿಳಂಬ ಮಾಡುತ್ತಿದ್ದರು.

ಆ ಸೇವಕರು ಹಣಕ್ಕೆ ಬಹಳ ನಿರ್ಬಂಧ ಮಾಡಲು ಇವರು ಅವರುಗಳನ್ನು ಬೈದು ಕಳುಹಿಸಿಬಿಟ್ಟರು. ಇದನ್ನು ತಿಳಿದ ರಾಜನು ಬಹಳ ಕೋಪವನ್ನು ಹೊಂದಿ ತನ್ನ ಸೇನಾಧಿಪತಿಯನ್ನು ತಿರುಮಂಗೈಯವರನ್ನು ಹಿಡಿದು ತರುವಂತೆ ಕಳುಹಿಸಿದನು. ಅವನು ಸೇನೆಯೊಂದಿಗೆ ಇವರನ್ನು ಹಿಡಿಯುವುದಕ್ಕೆ ಬರಲು ಇವರು ಅವನೊಂದಿಗೆ ಯುದ್ಧ ಮಾಡಿ ಅವರನ್ನೆಲ್ಲಾ ಸೋಲಿಸಿ ಕಳುಹಿಸಿಬಿಟ್ಟರು. ಆಗ ರಾಜನು ತಾನೇ ಸೈನ್ಯದೊಂದಿಗೆ ಇವರೊಂದಿಗೆ ಯುದ್ಧ ಮಾಡಲು ಬರಲು ಇವರು ಬಹಳ ಪರಾಕ್ರಮದಿಂದ ಅವನನ್ನು ಎದುರಿಸಿದರು. ಆಗ ರಾಜನು ಇವರ ಪರಾಕ್ರಮವನ್ನು ಕೊಂಡಾಡಿ ಇವರಿಗೆ ಆದಷ್ಟು ಬೇಗ

ತನ್ನ ಬೊಕ್ಕಸದ ಹಣವನ್ನು ವಾಪಸ್ಸು ಕೊಡುವಂತೆ ಹೇಳಿ, ಇವರನ್ನು ಮಂತ್ರಿಯ ವಶಕ್ಕೆ ಒಪ್ಪಿಸಿದನು. ಮಂತ್ರಿಯು ಇವರನ್ನು ಸೆರೆಹಿಡಿದು ಒಂದು ಶೇವಾಲಯದಲ್ಲಿ ಸೆರೆ ಇಟ್ಟನು. ಇವರು ಅಲ್ಲಿ ಮೂರು ದಿವಸ ಉಪವಾಸಮಾಡಿದರು. ಶ್ರೀರಂಗದ ಶ್ರೀರಂಗನಾಥನನ್ನೂ, ತಿರುಪತಿಯ ವೆಂಕಟೇಶನನ್ನೂ, ಕಂಚಿಯ ದೇವರಾಜನನ್ನೂ ಶರಣಾಗತಿ ಮಾಡಿ ವ್ಯಾಕುಲಾಂತಃಕರಣರಾಗಿದ್ದರು. ಆಗ ಕಂಚಿಯ ಅರ್ಚಾಮೂರ್ತಿಯಾದ ದೇವ ಪೆರುಮಾಳ್‌ರವರು ಇವರ ಸ್ವಪ್ನದಲ್ಲಿ ಬಂದು ಇವರಿಗೆ ಬೇಕಾದ ಹಣವನ್ನು ಕಾಂಚೀಪುರಕ್ಕೆ ಬಂದರೆ ಕೊಡುವುದಾಗಿ ಹೇಳಿದರು. ಆಗ ಇವರು ಮಂತ್ರಿಯನ್ನು ಕರೆದುಕೊಂಡು ಕಾಂಚೀಪುರಕ್ಕೆ ಹೋಗಿ ಭಗವಂತನ ಅನುಗ್ರಹದಿಂದ ಸ್ವಪ್ನ ಮುಖೇನ ಪರಮಾತ್ಮನಿಂದ ವೇಗವತೀ ನದೀ ತೀರದಲ್ಲಿ ನಿಧಿ ಇರುವುದನ್ನು ಅರಿತು ಅದನ್ನು ಪಡೆದರು. ಅನಂತರ ಆ ಹಣದಿಂದ ರಾಜನಿಗೆ ಕೊಡಬೇಕಾದ ಹಣವನ್ನು ಕೊಟ್ಟು ಮಿಕ್ಕ ಹಣವನ್ನು ಭಾಗವತ ತದಿಯಾರಾಧನೆಗೆ ಇಟ್ಟುಕೊಂಡರು. ರಾಜನು ಮಂತ್ರಿಯಿಂದ ಇವರ ಅಪ್ರತಿಮ ವೈಭವವನ್ನೆಲ್ಲಾ ಕೇಳಿ ಆಶ್ಚರ್ಯಹೊಂದಿ ಇವರು ಸಾಮಾನ್ಯ ವೈಷ್ಣವರಲ್ಲ , ಮಹಾಭಾಗವತರೆಂದು ಅರಿತು ಇವರನ್ನು ವಿಶೇಷವಾಗಿ ಉಪಚರಿಸಿ ತನ್ನ ಅಪರಾಧಗಳನ್ನು ಕ್ಷಮಿಸುವಂತೆ ಇವರನ್ನು ಪ್ರಾರ್ಥಿಸಿದನು. ತಾನು ಇವರ ಹತ್ತಿರ ವಾಪಸ್ಸು ತೆಗೆದುಕೊಂಡ ದ್ರವ್ಯರಾಶಿಯನ್ನು ಇವರನ್ನು ಸೆರೆಹಿಡಿದು ಮಾಡಿದ ಪಾಪಕ್ಕಾಗಿ ದೇವ ಬ್ರಾಹ್ಮಣರ ಸಂತರ್ಪಣೆಗೆ ಉಪಯೋಗಿಸಿ ತನ್ನ ದೋಷವನ್ನು ಪರಿಹರಿಸಿಕೊಂಡನು.

ಇವರು ಮಿಕ್ಕ ಹಣದಲ್ಲಿ ಕೆಲವು ಕಾಲ ಭಾಗವತರ ಸಂತರ್ಪಣೆ ನಡೆಸುತ್ತಿದ್ದರು. ಇವರ ಕೈಯಲ್ಲಿದ್ದ ಹಣವು ಖರ್ಚಾಗಿ ಹೋದುದರಿಂದ ಮುಂದಕ್ಕೆ ಭಾಗವತರ ಸಂತರ್ಪಣೆಯ ಖರ್ಚಿಗೆ ಹಣವನ್ನು ಒದಗಿಸಲು ರಾತ್ರಿಯ ಕಾಲದಲ್ಲಿ ತನ್ನ ಕಡೆಯವರ ಸಹಾಯದಿಂದ ಕಳ್ಳತನ ಮಾಡುತ್ತಾ ಹಣ ಸಂಪಾದಿಸಲು ಪ್ರಾರಂಭಿಸಿದರು. ಇವರು ಹೀಗೆ ಕಳ್ಳತನ ಮಾಡಿ

ಸಂಪಾದಿಸಿದ ಹಣವನ್ನು ಶ್ರೀವೈಷ್ಣವ ಆರಾಧನೆಗೇ ಉಪಯೋಗಿಸುತ್ತಿದ್ದುದರಿಂದ ಶ್ರೀಮನ್ನಾರಾಯಣನು ಇವರನ್ನು ಕದಿಯುವ ದುಷ್ಕೃತ್ಯದಿಂದ ಪರಿವರ್ತಿಸಿ, ವಿಶೇಷವಾಗಿ ಕಟಾಕ್ಷಿಸಿ ಅಂಗೀಕರಿಸಬೇಕೆಂದು ಯೋಚಿಸಿದನು. ತನ್ನನ್ನೂ ಇವರು ದರೋಡೆ ಮಾಡಲಿ ಎಂದು ಭಗವಂತನು ಶ್ರೀಲಕ್ಷ್ಮೀ ಸಮೇತನಾಗಿ ಬ್ರಾಹ್ಮಣ ಮದುವಣಿಗರಂತೆ ವೇಷಧರಿಸಿ ಬಹಳ ಆಭರಣಗಳನ್ನು ಧರಿಸಿಕೊಂಡು ಇವರಲ್ಲಿಗೆ ಬಂದನು. ಅಲ್ಲಿಯೇ ''ತಿರುಮಣಮ್‌ಕೊಲ್ಲೈ'' ಎಂಬ ಪ್ರಸಿದ್ಧವಾದ ಜಾಗದಲ್ಲಿ ಅಶ್ವತ್ಥಮರದ ಬಳಿಯಲ್ಲಿ ಇದ್ದ ತಿರುಮಂಗೈ ಆಳ್ವಾರ್ರು ಅವರನ್ನು ನೋಡಿ ತನ್ನ ಅನುಚರರೊಂದಿಗೆ ಅವರನ್ನು ಎಲ್ಲಾ ಕಡೆಯಿಂದಲೂ ಸುತ್ತಿಕೊಂಡು ಅವರ ಬೆಲೆಬಾಳುವ ವಸ್ತ್ರಗಳನ್ನೂ ಆಭರಣಗಳನ್ನೂ ಎಲ್ಲವನ್ನೂ ಅಪಹರಿಸಿದರು. ಆದರೆ ಇವರಿಗೆ ಆ ಮದುವಣಿಗನು ಕಾಲಲ್ಲಿ ಹಾಕಿಕೊಂಡಿದ್ದ ಒಂದು ಉಂಗುರವನ್ನು ತೆಗೆಯಲು ಆಗಲಿಲ್ಲ. ಅದನ್ನು ಬಿಡಲು ಇಷ್ಟಪಡದೆ ಇವರು ತಮ್ಮ ಹಲ್ಲಿನಲ್ಲಿ ಕಚ್ಚಿ ತೆಗೆದುಕೊಂಡರು. ಇವರ ಶಕ್ತಿಯನ್ನು ನೋಡಿದ ಭಗವಂತನು ಇವರಿಗೆ ''ಕಲಿಯನ್'' ಎಂಬ ಹೆಸರನ್ನು ದಯಪಾಲಿಸಿದನು.

ಅನಂತರ ಇವರು ತಾವು ಅಪಹರಿಸಿದವುಗಳೆಲ್ಲವನ್ನೂ ಒಂದು ಮೂಟೆಯಲ್ಲಿ ಸೇರಿಸಿ ಕಟ್ಟಿದರು. ಅದನ್ನು ಎತ್ತಲು ಹೋದಾಗ ಅದು ವಿಪರೀತ ಭಾರವಾಗಿ ಸ್ವಲ್ಪ ಕದಲಿಸಲೂ ಆಗದಿರಲು ಇವರಿಗೆ ಬಹಳ ಆಶ್ಚರ್ಯವಾಯಿತು. ಆಗ ಇವರು ಆ ಬ್ರಾಹ್ಮಣನನ್ನು ನೋಡಿ ನೀನು ಏನು ಮಂತ್ರವನ್ನು ಮಾಡಿದ್ದೀಯೆ ತಿಳಿಸು'' ಎಂದು ಕೈಯಲ್ಲಿದ್ದ ಕತ್ತಿಯಿಂದ ಭಯಪಡಿಸಲು ಆ ಬ್ರಾಹ್ಮಣ ವೇಷಧರಿಸಿದ್ದ ಭಗವಂತನು ''ಆ ಮಂತ್ರವನ್ನು ತಿಳಿಸುತ್ತೇನೆ ಬನ್ನಿ'' ಎಂದು ಕರೆದು ತಿರುಮಂಗೈ ಆಳ್ವಾರ್ರವರ ಕಿವಿಯಲ್ಲಿ ಸಕಲವೇದಸಾರವಾದ ಅಷ್ಟಾಕ್ಷರ ಮಹಾಮಂತ್ರವನ್ನು ಉಪದೇಶಿಸಿ ತಕ್ಷಣ ಗರುಡಾರೂಢನಾಗಿ ಇವರ ಮುಂದೆ ಲಕ್ಷ್ಮೀಸಮೇತನಾಗಿ ದರ್ಶನವಿತ್ತನು.

ಈ ರೀತಿಯಾಗಿ ಮಂತ್ರೋಪದೇಶವನ್ನು ಪಡೆದುದರಿಂದಲೂ,

ಭಗವಂತನ ದಿವ್ಯಮಂಗಳವಿಗ್ರಹದ ದರ್ಶನ ಪಡೆದುದರಿಂದಲೂ, ಕಾಲಿನಲ್ಲಿದ್ದ ಉಂಗುರವನ್ನು ಪಡೆಯುವಾಗ ಭಗವಂತನ ಪಾದಾರವಿಂದಕ್ಕೆ ತಲೆಬಾಗಿ ನಮಸ್ಕರಿಸಿದುದರಿಂದಲೂ ತಿರುಮಂಗೈ ಆಳ್ವಾರ್ರಿಗೆ ಆವರಿಸಿ ಕೊಂಡಿದ್ದ ಅಜ್ಞಾನವು ನಾಶವಾಗಿ ತತ್ವಜ್ಞಾನದ ವಿಕಾಸವುಂಟಾಯಿತು. ಇವರು ಭಗವಂತನನ್ನು ಪರಿಪೂರ್ಣವಾಗಿ ಅನುಭವಿಸಿದರು. ಆ ಅನುಭವದಿಂದ ಉಂಟಾದ ಆನಂದ ಅತಿಶಯವನ್ನು ಕೊಂಡಾಡಲು ಉದ್ದೇಶಿಸಿ ಭಗವಂತನನ್ನು ಪಾಶುರಗಳಿಂದ ಸ್ತುತಿಸಿದರು. ಆಶುಕವಿ, ಮಧುರಕವಿ, ಚಿತ್ರಕವಿ, ವಿಸ್ತರಕವಿ ಎಂಬ ನಾಲ್ಕು ವಿಧ ಕವಿಗಳ ಪಾಂಡಿತ್ಯ ಪಡೆದವರಾದರು. ಇವರ ಪಾಶುರಗಳು ನಮ್ಮಾಳ್ವಾರ್ರವರು ಅನುಗ್ರಹಿಸಿರುವ ನಾಲ್ಕು ದಿವ್ಯಪ್ರಬಂಧಗಳ ಅಂಗಗಳಾಗಿವೆ ಎಂದು ಹೊಗಳುತ್ತಾರೆ.

1. ಪೆರಿಯ ತಿರುಮೊಳಿ
2. ತಿರುಕುರುಂದಾಂಡಹಮ್
3. ತಿರುವೆಳು ಕೂತ್ತಿರುಕ್ಕೈ
4. ಶಿರಿಯ ತಿರುಮಡಲ್
5. ಪೆರಿಯ ತಿರುಮಡಲ್
6. ತಿರುನೆಡುಂದಾಂಡಹಮ್

ಎಂಬ ಆರು ದಿವ್ಯಪ್ರಬಂಧಗಳನ್ನು ಇವರು ರಚಿಸಿದರು. ಇವರಿಗೆ ತಿರುಮಂಗೈ ಆಳ್ವಾರ್ ಎಂಬ ತಿರುನಾಮವು ಉಂಟಾಯಿತು.

ಆಳ್ವಾರ್ರವರು ತಾವು ಪರಮಾತ್ಮನಿಂದ ಪಡೆದ ತಿರು ಅಷ್ಟಾಕ್ಷರಮಂತ್ರದ ವೈಭವವನ್ನು ಮೊದಲ ತಿರುಮೊಳಿಯಲ್ಲಿ ಚೆನ್ನಾಗಿ ವಿಶದೀಕರಿಸಿದ್ದಾರೆ. ಅನಂತರ ಇವರು ದಿವ್ಯದೇಶ ಯಾತ್ರೆಗೆ ಪತ್ನೀ ಸಮೇತರಾಗಿ ಮಂತ್ರಿಗಳೊಂದಿಗೆ ಹೊರಟು ಪಿನಾಕಿನಿ, ಕೃಷ್ಣ, ಗೋದಾವರಿ ನದಿಗಳಲ್ಲಿ ಸ್ನಾನ ಮಾಡಿ ಅಲ್ಲಲ್ಲಿನ ಅರ್ಚಾಮೂರ್ತಿಗಳಿಗೆ ಮಂಗಳಾ ಶಾಸನವನ್ನು ಮಾಡಿ ಪಾಶುರಗಳನ್ನು ಹಾಡುತ್ತಾ ಬದರಿಕಾಶ್ರಮ, ಸಿಂಹಾಚಲ,

ಶ್ರೀಕೂರ್ಮ ಮುಂತಾದ ಅನೇಕ ದಿವ್ಯದೇಶಗಳನ್ನು ಸಂದರ್ಶಿಸಿ, ದೇವರ ದರ್ಶನ ಪಡೆದು ತಮ್ಮ ಊರಾದ ಚೋಳದೇಶಕ್ಕೆ ಬಂದರು. ಅಲ್ಲಿನ ಜನಗಳಿಂದ ಬಹಳವಾಗಿ ಕೊಂಡಾಡಲ್ಪಟ್ಟು ಅನೇಕ ಬಿರುದಾವಳಿಗಳನ್ನು ಪಡೆದರು.

ಆಗ ಆ ಊರಿನಲ್ಲಿದ್ದ ಜ್ಞಾನ ಸಂಬಂಧಮೂರ್ತಿ ನಾಯನಾರ್ ಎಂಬ ಶೈವಗುರುವಿನ ಶಿಷ್ಯರು ಇವರನ್ನು ಮುಂದೆ ಹೋಗಲು ಬಿಡದೆ ತಡೆಯಲು ಆಳ್ವಾರ್‍ರು ಜ್ಞಾನಸಂಬಂಧರ ಹತ್ತಿರ ಹೋಗಿ ಅವರೊಂದಿಗೆ ವಾದ ಮಾಡಲು ಆ ಶೈವಗುರುವು ಇವರ ಕವಿತಾಚಾತುರ್ಯವನ್ನು ಪರೀಕ್ಷಿಸಲು ಒಂದು ಹಾಡನ್ನು ಹಾಡುವಂತೆ ಹೇಳಿದರು. ಇವರು ದಿವ್ಯದೇಶವಾದ ಕಾಳಚ್ಚಿರಾಮವಿಣ್ಣ ನಗರದಲ್ಲಿ ವಿಜಯಮಾಡಿದ ತಾಡಾಳ ಪೆರುಮಾಳರ ವಿಷಯವಾಗಿ ಒಂದು ದಶಕವನ್ನು ಹಾಡಿದರು. ಇದನ್ನು ಕೇಳಿದ ಜ್ಞಾನಸಂಬಂಧರು ಅತಿಶಯ ಸಂತೋಷಗೊಂಡು ತಮ್ಮ ವೇಲಾಯುಧವನ್ನು ಇವರಿಗೆ ಬಹುಮಾನವಾಗಿ ಕೊಟ್ಟು ಉಪಚರಿಸಿದರು.

ಅನಂತರ ಜಯಭೇರಿಯನ್ನು ಪಡೆದ ಈ ಆಳ್ವಾರ್‍ರು ಮುಂದೆ ತಿರುವರಂಗದ ದೊಡ್ಡ ದೇವಸ್ಥಾನವನ್ನು ಸೇರಿ ಅಳಹಿಯ ಮಣವಾಳರಿಗೆ ಅನೇಕ ಪಾಶುರಗಳನ್ನು ಹಾಡಲು ಅವುಗಳನ್ನು ಕೇಳಿ ಸಂತೋಷಪಟ್ಟ ಶ್ರೀರಂಗನಾಥನು ತಮಗೆ ವಿಮಾನ ಮಂಟಪ ಗೋಪುರ ಪ್ರಾಕಾರಾದಿ ಕೈಂಕರ್ಯವನ್ನು ಮಾಡುವಂತೆ ಇವರಿಗೆ ಕಟ್ಟಳೆಯಿಟ್ಟನು. ಇವರು ಆ ಕಾರ್ಯಗಳನ್ನೆಲ್ಲಾ ಸಂಪೂರ್ಣವಾಗಿ ನಡೆಸಿದರು.

ಅನಂತರ ಇವರು ಶ್ರೀರಂಗನಾಥನ ಗುಡಿಗೋಪುರಕ್ಕಾಗಿ ನಾಗಪಟ್ಟಣದಲ್ಲಿನ ಶಿಲ್ಪಿಗಳ ಹತ್ತಿರ ಸ್ವರ್ಣವಿಗ್ರಹಗಳನ್ನು ಮಾಡಿಸಿದರು. ಆದರೆ ಅವರಿಗೆ ಕೂಲಿಕೊಡಲು ಆಗದೇ ಇದ್ದುದರಿಂದ ತಮ್ಮ ತಪೋಬಲದಿಂದ ಅವರುಗಳು ಜ್ಯೋತಿರ್ಮಯವಾದ ಶರೀರವನ್ನು ಹೊಂದಿ ಪರಮಪದವನ್ನು ಹೊಂದುವಂತೆ ಮಾಡಿದರು.

ಈರೀತಿ ಇವರು ಅನೇಕ ಅತಿಶಯಗಳನ್ನು ಮಾಡಿದರು. ತಮ್ಮ

ಭಗವತ್ಕೈಂಕರ್ಯಗಳನ್ನೆಲ್ಲಾ ಮುಗಿಸಿ, ಶ್ರೀರಂಗನಾಥನ ಅನುಮತಿ ಪಡೆದು ಮತ್ತೆ ಅನೇಕ ದಿವ್ಯದೇಶಗಳ ಯಾತ್ರೆ ಮಾಡಿದರು. ಅಲ್ಲಿಯ ದೇವರುಗಳಿಗೆಲ್ಲಾ ಮಂಗಳಾಶಾಸನಮಾಡಿ, ಇಂಪಾದ ಪಾಶುರಗಳನ್ನು ಹಾಡಿ, ಭಗವದನುಭವ ಪಡೆದರು. ಇವರು ಸಂಸಾರದ ಕಷ್ಟಗಳನ್ನು ಅರಿತವರಾಗಿ ಅದರಿಂದ ಬಿಡುಗಡೆ ಹೊಂದಲು ಭಗವಂತನಲ್ಲಿ ಶರಣಾದರು. ತಮಗೆ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ.

ಇವರು ಆರು ದಿವ್ಯ ಪ್ರಬಂಧಗಳನ್ನು ರಚಿಸಿದ್ದಾರೆ.

**1. ಪೆರಿಯತಿರುಮೊಳಿ:**-ಇದರಲ್ಲಿ 1084 ಪಾಶುರಗಳಿವೆ. ಇದರಲ್ಲಿ ಬದರೀಕ್ಷೇತ್ರದಿಂದ ತಿರುಕ್ಕುರಂಗುಡಿವರೆಗೆ ಇರುವ ಅನೇಕ ದಿವ್ಯಕ್ಷೇತ್ರಗಳ ಆರ್ಚಾಮೂರ್ತಿಗಳನ್ನು ಭಕ್ತಿಯಿಂದ ಸ್ತೋತ್ರಮಾಡಿ ಹಾಡಿದ್ದಾರೆ. ವಯಸ್ಸಾದಮೇಲೆ ಮಾನವರ ಶರೀರದ ಶಕ್ತಿ ಕಡಿಮೆಯಾಗುವುದರಿಂದ ಎಲ್ಲರನ್ನೂ ಅದಕ್ಕೆ ಮೊದಲೇ ಬದರೀಕ್ಷೇತ್ರಕ್ಕೆ ಹೋಗಿ ಪರಮಾತ್ಮನ ದರ್ಶನ ಪಡೆಯುವಂತೆ ಉಪದೇಶ ನೀಡಿದ್ದಾರೆ. ಶ್ರೀಮನ್ನಾರಾಯಣನ ದಿವ್ಯನಾಮವನ್ನು ಹಾಡುವುದರಿಂದ ಸಾಂಸಾರಿಕ ದುಃಖಗಳನ್ನೂ, ಪಾಪವನ್ನೂ ಕಳೆದುಕೊಳ್ಳಬಹುದೆಂದು ತಿಳಿಸಿದ್ದಾರೆ.

**2. ತಿರುಕ್ಕುರುಂದಾಂಡಹಂ:**-ಇದರಲ್ಲಿ 20 ಪಾಶುರಗಳಿವೆ. ಇದರಲ್ಲಿ ಭಗವಂತನ ಸ್ವರೂಪವನ್ನೂ, ಅವನನ್ನು ಹೊಂದಲು ಚೇತನರು ಅನುಸರಿಸಬೇಕಾದ ಉಪಾಯಗಳನ್ನೂ ತಿಳಿಸಿದ್ದಾರೆ.

**3. ತಿರುನೆಡುಂದಾಂಡಹಂ:**-ಇದರಲ್ಲಿ 30 ಪಾಶುರಗಳಿವೆ. ಇದರಲ್ಲಿ ಪರಮಾತ್ಮನ ಹಿರಿಮೆಯನ್ನೂ ಅವನಲ್ಲಿ ನಾವು ಮಾಡುವ ಭಕ್ತಿಯ ಅತಿಶಯವನ್ನೂ ತಿಳಿಸಿದ್ದಾರೆ.

**ತಿರುವೆಳುಕ್ಕೂತ್ತಿರುಕ್ಕೈ:**- ಈ ಒಂದು ಪಾಶುರದಲ್ಲಿ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ.

**5-6. ಶಿರಿಯ ತಿರುಮಡಲ್ ಮತ್ತು ಪೆರಿಯ ತಿರುಮಡಲ್**:-ಶಿರಿಯ ತಿರುಮಡಲ್‌ನಲ್ಲಿ 155 ಸಾಲುಗಳಿವೆ. ಪೆರಿಯ ತಿರುಮಡಲ್‌ನಲ್ಲಿ 297 ಸಾಲುಗಳಿವೆ. ಆಳ್ವಾರ್ರು ಪರಮಾತ್ಮನಲ್ಲಿ ವ್ಯಾಮೋಹಗೊಂಡು ನಾಯಕೀ ಭಾವಹೊಂದಿ ಭಕ್ತಿಯಿಂದ ಅವನ ಅನುಗ್ರಹವನ್ನು ಪ್ರಾರ್ಥಿಸಿದ್ದಾರೆ.

**ತಿರುಮಂಗೈ ಆಳ್ವಾರ್ ತನಿಯನ್:-**

**ಕಲಯಾಮಿ ಕಲಿಧ್ವಂಸಂ ಕವಿಂ ಲೋಕದಿವಾಕರಮ್।**
**ಯಸ್ಯ ಗೋಭಿಃ ಪ್ರಕಾಶಾಭಿರಾವಿದ್ಯಂ ನಿಹತಂ ತಮಃ॥**

# ನಮ್ಮಾಳ್ವಾರ್

(ಅವತಾರಗಳ ಕ್ರಮದಪ್ರಕಾರ ನಮ್ಮಾಳ್ವಾರ್ರ ತಿರುವವತಾರದ ವೈಭವವನ್ನು ತಿರುಮಳಿಶೈ ಆಳ್ವಾರ್ರವರ ಅನಂತರ ತಿಳಿಸಬೇಕು. ಆದರೆ ಇವರು ಎಲ್ಲಾ ಆಳ್ವಾರ್ರುಗಳಿಗಿಂತಲೂ ಪ್ರಧಾನರಾದವರಾಗಿ, ಅವರಿಗೆಲ್ಲಾ ಶರೀರ ಭೂತರಾಗಿಯೂ ಅವರೆಲ್ಲರೂ ಇವರಿಗೆ ಅವಯವಗಳಂತೆಯೂ ಇರುವುದರಿಂದ ಮೊದಮೊದಲು ಅವಯವಗಳ ನಿರೂಪಣೆ ಮಾಡಿ ಅನಂತರ ಅವುಗಳಿಗೆಲ್ಲಾ ಪ್ರಧಾನವಾಗಿರುವ ಶರೀರದ ನಿರೂಪಣೆ ಮಾಡಬೇಕಾಗಿದೆ. ಆಳ್ವಾರ್ರುಗಳೆಲ್ಲರ ಚರಿತ್ರೆಯನ್ನು ತಿಳಿಸಿ ಆದಮೇಲೆ ಇವರ ಚರಿತ್ರೆಯನ್ನು ಕೊನೆಯಲ್ಲಿ ತಿಳಿಸುವ ಪ್ರಯತ್ನವು ಇಲ್ಲಿ ಮಾಡಲ್ಪಟ್ಟಿದೆ.)

ಇವರು ಕಲಿಯುಗದ ಪ್ರಾರಂಭದಲ್ಲಿ ಪ್ರಮಾಧಿ ಸಂವತ್ಸರದ ವೈಶಾಖ ಮಾಸದಲ್ಲಿ ವಿಶಾಖಾನಕ್ಷತ್ರದಲ್ಲಿ ನಿತ್ಯಸೂರಿಗಳಲ್ಲಿ ಪ್ರಮುಖರಾದ ವಿಷ್ವಕ್ಸೇನ ಆಳ್ವಾರ್ರ ಅಂಶವಾಗಿ ಅವತರಿಸಿದರು. ಇವರು ಶ್ರೀಮಹಾವಿಷ್ಣುವಿನ ಅಂಶವಾಗಿಯೂ, ವಿಷ್ವಕ್ಸೇನರ ಅಂಶವಾಗಿಯೂ, ಪರಮಾತ್ಮನ ಕೌಸ್ತುಭಮಣಿ ಅಂಶವಾಗಿಯೂ ಜನಿಸಿದರೆಂಬ ಪ್ರತೀತಿ ಇದೆ. ಇವರಿಗೆ ಶಠಕೋಪರ್, ವಕುಳಾಭರಣರ್, ಪರಾಂಕುಶರ್, ಮಾರನ್ ಎಂಬ ಹೆಸರುಗಳೂ ಇವೆ.

ಪಾಂಡ್ಯದೇಶದಲ್ಲಿ ತಾಮ್ರಪರ್ಣೀ ನದಿಯ ತೀರದಲ್ಲಿ ತಿರುನಗರಿ ಎಂಬ ದಿವ್ಯದೇಶವಿದೆ. ಅದಕ್ಕೆ ತಿರುಕ್ಕುರುಹೂರ್ ಎಂಬ ಹೆಸರೂ ಉಂಟು. ಅಲ್ಲಿ ವೇಳಾಳ ಜಾತಿಯಲ್ಲಿ ವಂಶಪಾರಂಪರ್ಯವಾಗಿ ಭಗವಂತನ ಸೇವೆಯನ್ನು ಮಾಡುತ್ತಿದ್ದವರ ಮಹಾಕುಲದಲ್ಲಿ ಹುಟ್ಟಿದ ಪೊರ್ಕ್ಕಾರಿಯರ್ ಎಂಬ ಒಬ್ಬ ಮಹಾಭಾಗವತರು ಇದ್ದರು. ಅವರು ತಮ್ಮ ಮಗ ಕಾರಿಯಾರ್ ಎಂಬುವನಿಗೆ ಕೇರಳ ದೇಶದ ತಿರುವಾಳ್‌ಮಾರ್ಪರ್ ಎನ್ನುವ ಭಾಗವತೋತ್ತಮರ ಮಗಳು

ಉಡಯನಂಗೈಯಾರೊಂದಿಗೆ ಬಹಳ ವೈಭವದಿಂದ ವಿವಾಹವನ್ನು ನಡೆಸಿದರು. ಅನಂತರ ಆ ದಂಪತಿಗಳು ತಿರುನಗರಿಗೆ ಬಂದು ಗೃಹಸ್ಥಾಶ್ರಮ ಧರ್ಮವನ್ನು ನಡೆಸಿಕೊಂಡಿದ್ದರು.

ಒಂದುಸಲ ಕಾರಿಯಾರ್ರವರು ಮಾವನ ಮನೆಗೆ ಹೆಂಡತಿಯೊಂದಿಗೆ ಹೋಗಿದ್ದರು. ವಾಪಸ್ಸು ಬರುವಾಗ ತಿರುಕ್ಕುರುಂಗುಡಿ ಎನ್ನುವ ದಿವ್ಯದೇಶಕ್ಕೆ ಹೋಗಿ ಅಲ್ಲಿನ ನಂಬಿ ಎನ್ನುವ ಅರ್ಚಾವಿಗ್ರಹವನ್ನು ದರ್ಶಿಸಿ ತಮಗೆ ಪುತ್ರಸಂತಾನವನ್ನು ಕೊಡುವಂತೆ ಪ್ರಾರ್ಥಿಸಿದರು. ಕೃಪಾಳುವಾದ ಆ ಪರಮಾತ್ಮನು ತಾನೇ ಅವರಿಗೆ ಪುತ್ರನಾಗಿ ಜನಿಸುವುದಾಗಿ ಅರ್ಚಕರ ಮೂಲಕ ತಿಳಿಸಿ ಅವರಿಗೆ ತೀರ್ಥ, ತಿರುಪರಿವಟ್ಟ ಮುಂತಾದ ದಿವ್ಯಪ್ರಸಾದಗಳನ್ನು ಅನುಗ್ರಹಿಸಿದನು. ಈ ಅನುಗ್ರಹವನ್ನು ಪಡೆದು ಕಾರಿಯಾರ್ರು ಪತ್ನೀ ಸಮೇತ ತಿರುನಗರಿಗೆ ವಾಪಸ್ಸು ಬಂದರು. ಅನಂತರ ಅವರಿಗೆ ಭಗವಂತನ ಅಂಶವಾಗಿಯೂ, ಶ್ರೀಕೌಸ್ತುಭದ ಅಂಶವಾಗಿಯೂ, ಸೇನೆ ಮುದಲಿಯಾರ್ರವರ ಅಂಶವಾಗಿಯೂ ಒಬ್ಬ ಪುತ್ರನು ಬಹುಧಾನ್ಯ ಸಂವತ್ಸರದಲ್ಲಿ ಶುಕ್ಲಪಕ್ಷ ಪೌರ್ಣಮಿ ದಿನ ವೈಶಾಖಮಾಸದ ವಿಶಾಖ ನಕ್ಷತ್ರದಲ್ಲಿ ಜನಿಸಿದನು.

ಭಗವದವತಾರಗಳಿಗೆ ಮುಂಚೆಯೇ ಅವನಿಗೆ ದಾಸ್ಯವೃತ್ತಿ ಮಾಡಲು ಅವತರಿಸುವ ತಿರುವನಂದಾಳ್ವಾರ್‌ವರು ಈ ಕುಮಾರರ ಮೇಲೆ ಬಿಸಿಲು ಮಳೆ ಬೀಳದೆ ಇರುವಂತೆ ಮಾಡಬೇಕೆಂದು ಒಂದು ದೊಡ್ಡ ಹುಣಿಸೇಮರವಾಗಿ ಭೂಮಿಯಲ್ಲಿ ಮೊದಲೇ ಬಂದು ಅವತರಿಸಿದ್ದರು.

ತಿರುಕ್ಕುರುಂಗುಡಿ ನಂಬಿಯವರ ವರಪ್ರಸಾದದಿಂದ ಜನಿಸಿದ ಈ ಕುಮಾರರು ಹುಟ್ಟಿದಾಗಲೇ ಅಳುವುದು, ಹಾಲು ಕುಡಿಯುವುದು ಮುಂತಾದ ಲೋಕ ವ್ಯಾಪಾರಗಳನ್ನು ಮಾಡದೆ ಇದ್ದರು. ಆದರೆ ಅವರು ಕಂಗೆಡದೆ ಚೆನ್ನಾಗಿರುವುದನ್ನು ನೋಡಿ ಅವರ ಮಾತಾಪಿತೃಗಳು ಭಗವಂತನ ಮೇಲೆ ಭಾರವನ್ನು ಹಾಕಿ ಸ್ವಲ್ಪವೂ ವಿಚಲಿತರಾಗದೆ ಇದ್ದರು. ಅನಂತರ ಹನ್ನೆರಡನೆಯ

ದಿವಸ ತಿರುನಗರಿಯಲ್ಲಿರುವ ದೇವರ ಸನ್ನಿಧಿಗೆ ಹೋಗಿ ಆ ಮಗುವಿಗೆ ಅಲ್ಲಿಯ ಪೊಲಿಂದು ನಿನ್ರ ಪಿರಾನ್‌ರವರ ದರ್ಶನ ಮಾಡಿಸಿ ನಮಸ್ಕರಿಸಿ ಆ ದೇವರ ಮುಂದೆ ಲೋಕವ್ಯವಹಾರಕ್ಕೆ ವಿಪರೀತವಾಗಿದ್ದ ಆ ಮಗುವಿಗೆ ''ಮಾರನ್'' ಎಂದು ನಾಮಕರಣ ಮಾಡಿದರು. ಅನಂತರ ಸಮೀಪದಲ್ಲಿದ್ದ ಮರದ ಕೆಳಗೆ ತೊಟ್ಟಿಲಿನಲ್ಲಿ ಮಗುವನ್ನು ಮಲಗಿಸಿ ಬೆಳೆಸುತ್ತಾ ಬಂದರು. ಮಕ್ಕಳಿಗೆ ಹುಟ್ಟುವಾಗಲೇ ಅಜ್ಞಾನವನ್ನು ಉಂಟು ಮಾಡುವ ಶಠ ಎಂಬ ಗಾಳಿಯು ಇವರನ್ನು ಸ್ಪರ್ಶಿಸಲು ಬಂದಾಗ ಇವರು ಅದನ್ನು ಹೂಂಕಾರದಿಂದ ಓಡಿಸಿದರು. ಆದ್ದರಿಂದ ಇವರಿಗೆ 'ಶಠಕೋಪರ್' ಎಂಬ ತಿರುನಾಮವು ಉಂಟಾಯಿತು. ಇವರು ನಂಬೆರುಮಾಳ್ ಎನ್ನುವ ಶ್ರೀರಂಗನಾಥರ ಅಭಿಮಾನಕ್ಕೂ ವಿಶೇಷಕಟಾಕ್ಷಕ್ಕೂ ಪಾತ್ರರಾಗಿ ಮಿಕ್ಕ ಆಳ್ವಾರ್ರುಗಳಿಗಿಂತ ಮೇಲಾದವರಾಗಿ ''**ನಮ್ ಆಳ್ವಾರ್**'' ಎಂದು ಶ್ರೀರಂಗನಾಥನಿಂದ ಕೊಂಡಾಡಲ್ಪಟ್ಟಿದ್ದರಿಂದ ನಮ್ಮಾಳ್ವಾರ್ ಎಂದು ಪ್ರಸಿದ್ಧಿ ಪಡೆದರು.

ಈ ರೀತಿಯಾಗಿ ಆಳ್ವಾರ್ರು 16 ವರ್ಷಗಳವರೆಗೆ ತಮ್ಮಂತೆ ಭಗವದ್ಭಕ್ತರಾದವರು ಲೋಕದಲ್ಲಿ ಯಾರೂ ಕಾಣದೆ ಇದ್ದುದರಿಂದ ಯಾರನ್ನೂ ನೋಡದೆ ಯಾರೊಂದಿಗೂ ಮಾತನಾಡದೆ ಇದ್ದರು. ಅದನ್ನರಿಯಧೆ ಇವರು ಕಣ್ಣನ್ನೇ ಬಿಡದೆ ಯಾವಾಗಲೂ ಮೌನವಾಗಿದ್ದುದನ್ನು ಕಂಡು ಮಾತಾಪಿತರು ತಾವು ಏನಾದರೂ ಅಪರಾಧ ಮಾಡಿ ಅದರ ಫಲದಿಂದ ತಮ್ಮ ಮಗುವು ಈ ರೀತಿ ಹುಟ್ಟಿರಬಹುದೆಂದು ಶಂಕಿಸಿ ದುಃಖಪಟ್ಟು ಕೊಂಡಿದ್ದರು. ಪರಮಾತ್ಮನ ನಿಯಮನದಿಂದ ಸೇನೆ ಮುದಲಿಯಾರ್ ಎಂಬ ವಿಷ್ವಕ್ಸೇನರು ಏಕಾಂತವಾಗಿ ಬಂದು ಇವರಿಗೆ ಶಂಖಚಕ್ರಾಂಕನವನ್ನೂ ಮಾಡಿ, ಸಕಲ ಮಂತ್ರಾರ್ಥಗಳನ್ನೂ ದ್ರಾವಿಡ ವೇದಗಳನ್ನೂ ಉಪದೇಶಿಸಿ ದಿವ್ಯಜ್ಞಾನ ಸಂಪನ್ನರನ್ನಾಗಿ ಮಾಡಿ ಅನುಗ್ರಹಿಸಿದರು.

ಇವರಿಗೆ ವಕುಳಾಭರಣರೆಂದೂ ಹೆಸರು. ಇವರು ಎಲ್ಲಾ ಕಲೆಗಳನ್ನೂ ಅರಿತವರಾಗಿ ಹುಣಿಸೇಮರದ ನೆರಳಿನಲ್ಲಿ ಪದ್ಮಾಸನವನ್ನು ಹಾಕಿಕೊಂಡು

ಪರತತ್ತ್ವವನ್ನು ಧ್ಯಾನ ಮಾಡಿಕೊಂಡು ಜ್ಞಾನ ಮುದ್ರಾನ್ವಿತರಾಗಿದ್ದರು. ಆಗ ದಿವ್ಯದೇಶ ಯಾತ್ರೆಗಾಗಿ ಹೊರಟಿದ್ದ ಮಧುರಕವಿ ಆಳ್ವಾರ್‌ರವರು ಇವರ ವೈಭವವನ್ನು ಕೇಳಿ, ಇವರ ದಿವ್ಯವಾದ ತೇಜಸ್ಸನ್ನು ಆಕಾಶದಲ್ಲಿ ಕಂಡು, ಅದನ್ನನುಸರಿಸಿ ಅಯೋಧ್ಯೆಯಿಂದ ಹೊರಟು ಇವರ ಬಳಿಗೆ ಬಂದರು. ಇವರ ಸಮೀಪದಲ್ಲಿ ನಿಂತು ಇವರಿಗೆ ಚೈತನ್ಯವಿದೆಯೋ ಇಲ್ಲವೋ, ಕಿವಿ ಕೇಳಿಸುತ್ತದೆಯೋ ಇಲ್ಲವೋ ಎಂದು ನೋಡಲು ಇವರ ಮುಂದೆ ಒಂದು ಚಿಕ್ಕ ಕಲ್ಲನ್ನು ಎಸೆದರು. ಅದರ ಧ್ವನಿಯನ್ನು ಕೇಳಿದ ಒಡನೆ ಇವರು ತಮ್ಮ ಕಣ್ಣುಗಳನ್ನು ಬಿಟ್ಟು ನೋಡಿದರು. ಆಗ ಮಧುರಕವಿ ಆಳ್ವಾರ್‌ರವರು ಇವರಿಗೆ ಮಾತನಾಡಲು ಬರುತ್ತದೆಯೋ ಇಲ್ಲವೋ ಎಂದು ತಿಳಿಯುವುದಕ್ಕಾಗಿ ಇವರನ್ನು ''ಅಚಿತ್ತಾಗಿರುವ ಶರೀರದಲ್ಲಿ ಅಣು ಪರಿಮಾಣವಾಗಿರುವ ಆತ್ಮವು ಸಂಭವಿಸಿದರೆ ಅದು ಯಾವುದನ್ನು ಅನುಭವಿಸುತ್ತಾ ಎಲ್ಲಿ ಇರುತ್ತದೆ'' ಎಂದು ಪ್ರಶ್ನಿಸಿದರು. ಈ ಪ್ರಶ್ನೆಗೆ ಆಳ್ವಾರ್‌ರು ''ಅದು ಆ ಶರೀರಕ್ಕೆ ಸೇರಿದ ಸುಖ ದುಃಖಗಳನ್ನು ಅನುಭವಿಸುತ್ತಾ ಆ ಶರೀರವನ್ನೇ ಆಶ್ರಯಿಸಿಕೊಂಡಿರುತ್ತದೆ'' ಎಂದು ಉತ್ತರಿಸಿದರು.

ಇದನ್ನು ಕೇಳಿದ ಮಧುರಕವಿಗಳು ಬಹಳ ಆನಂದ ಹೊಂದಿ ಆಳ್ವಾರ್‌ರ ಜ್ಞಾನವನ್ನು ಕಂಡು ಇವರು ಸರ್ವಜ್ಞರೆಂದು ಅರಿತು ಈ ಮಹಾನುಭಾವರನ್ನು ಆಶ್ರಯಿಸಿ ತಾವು ಉಜ್ಜೀವಿಸಬೇಕೆಂದು ಇಚ್ಛಿಸಿ, ಇವರ ಪಾದಗಳಿಗೆ ನಮಸ್ಕರಿಸಿ ತಮಗೆ ತತ್ತ್ವ ಹಿತ ಪುರುಷಾರ್ಥಗಳನ್ನು ಉಪದೇಶಿಸಿ ಕಾಪಾಡಬೇಕೆಂದು ಪ್ರಾರ್ಥಿಸಿದರು.

ಹೀಗೆ ಇರಲು ಶ್ರೀವೈಕುಂಠನಾಥನು ಆಳ್ವಾರ್‌ರ ಜ್ಞಾನದೃಷ್ಟಿಗೆ ಗೋಚರಿಸಬೇಕೆಂದು ಇಚ್ಛಿಸಿ ಶ್ರೀಸಹಿತನಾಗಿ ಗರುಡಾರೂಢನಾಗಿ ಬಂದು ಎದುರಿಗೆ ನಿಲ್ಲಲು ಇವರು ಭಗವಂತನ ದಿವ್ಯ ಮಂಗಳ ವಿಗ್ರಹದ ಸೌಂದರ್ಯವನ್ನು ದರ್ಶಿಸಿ ರೋಮಾಂಚನವನ್ನು ಹೊಂದಿ ಆನಂದ ಸಾಗರದಲ್ಲಿ ಮುಳುಗಿದರು. ಅನಂತರ 108 ದಿವ್ಯ ದೇಶಗಳ ಅರ್ಚಾಮೂರ್ತಿಗಳೂ

ಅಲ್ಲಿಗೆ ಬಂದು ಇವರಿಗೆ ದರ್ಶನವಿತ್ತರು. ಅವರಿಗೆಲ್ಲಾ ನಮಸ್ಕರಿಸಿ, ಅವರ ದಿವ್ಯರೂಪ, ಗುಣಗಳನ್ನು ಅನುಭವಿಸಿದರು. ಆ ಅನುಭವದಿಂದ ಉಂಟಾದ ಪ್ರೀತಿಯು ಇವರ ಒಳಗೆ ನಿಲ್ಲದೆ ದಿವ್ಯ ಪ್ರಬಂಧಗಳ ರೂಪದಲ್ಲಿ ಹೊರಬಂದವು. ನಿತ್ಯಸೂರಿಗಳೂ ಆಳ್ವಾರ್ರ ಮಹಿಮೆಯನ್ನು ನೋಡಲು ಇವರ ಬಳಿಗೆ ಬಂದು ಸೇರಿದರು. ಇವರು ಅವರೆಲ್ಲರಿಗೂ ಮಂಗಳಾಶಾಸನವಾಗಿ ''ಪೊಲಿಹ ಪೊಲಿಹ ಪೊಲಿಹ''-ಎಂಬ ಪಾಶುರವನ್ನು ಹಾಡಿದರು.

ಇವರು 102 ಪಾಶುರಗಳುಳ್ಳ **ತಿರುವಿರುತ್ತಮ್** ಎಂಬ, 7 ಪಾಶುರಗಳುಳ್ಳ **ತಿರುವಾಶಿರಿಯಮ್** ಎಂಬ, 87 ಪಾಶುರಗಳುಳ್ಳ **ಪೆರಿಯ ತಿರುವಂದಾದಿ** ಎಂಬ ಮತ್ತು 1102ಪಾಶುರಗಳುಳ್ಳ **ತಿರುವಾಯ್ಮೊಳಿ** ಎಂಬ ನಾಲ್ಕು ದಿವ್ಯಪ್ರಬಂಧಗಳನ್ನು ರಚಿಸಿ ಅನುಗ್ರಹಿಸಿದ್ದಾರೆ. ಈ ನಾಲ್ಕು ದಿವ್ಯ ಪ್ರಬಂಧಗಳಲ್ಲಿ ನಾಲ್ಕು ವೇದಗಳ ಸಾರಾರ್ಥವನ್ನು ಸರ್ವರೂ ಅರಿಯುವಂತೆ ಸುಲಭವಾಗಿ ತಮಿಳು ಭಾಷೆಯಲ್ಲಿ ಹಾಡಿದ್ದಾರೆ ಮತ್ತು ಮುಕ್ತಿ ಪಡೆಯಲು ಮಾರ್ಗವಾದ ಭಕ್ತಿ, ಪ್ರಪತ್ತಿಗಳ ಸ್ವರೂಪವನ್ನು ವಿವರಿಸಿ ತಿಳಿಸಿದ್ದಾರೆ.

**ತಿರುವಾಯ್ಮೊಳಿ** ಎಂಬ ದಿವ್ಯ ಪ್ರಬಂಧವು ಬಹಳ ಮುಖ್ಯವಾದುದಾಗಿ ಪ್ರಸಿದ್ಧಿ ಪಡೆದಿದೆ. ಇದರಲ್ಲಿ ಜೀವಾತ್ಮ ಸ್ವರೂಪ, ಪರಮಾತ್ಮ ಸ್ವರೂಪ, ಉಪಾಯಸ್ವರೂಪ, ಪುರುಷಾರ್ಥ ಸ್ವರೂಪ ಮತ್ತು ವಿರೋಧಿಸ್ವರೂಪವೆಂಬ ಅರ್ಥ ಪಂಚಕವನ್ನೂ, ದ್ವಯವೆಂಬ ಮಂತ್ರರತ್ನದಲ್ಲಿ ಪ್ರತಿಪಾದಿಸಿರುವ ಶರಣಾಗತಿ ತತ್ತ್ವವನ್ನೂ, ಭಗವಂತನ ಅರ್ಚಾವತಾರಮಹಿಮೆಯನ್ನೂ, ವಿಶಿಷ್ಟಾದ್ವೈತ ಸಿದ್ಧಾಂತದ ಸಾರಾರ್ಥವನ್ನೂ ಸುಲಭವಾಗಿ ತಿಳಿಸಿದ್ದಾರೆ.

**ತಿರುವಾಯ್ಮೊಳಿ**ಯಲ್ಲಿ 1102 ಪಾಶುರಗಳಿವೆ. ಇದರ **ಒಂದನೆಯ ಶತಕ**ದಲ್ಲಿ-ಸಕಲ ಕಲ್ಯಾಣಗುಣಾತ್ಮಕನೂ, ನಿತ್ಯಸೂರಿಗಳಿಗೆಲ್ಲಾ ಅಧಿಪತಿಯೂ ಆಗಿರುವ ಪರಮಾತ್ಮನಿಗೆ ಕಾಯಾ ವಾಚಾ ಮನಸಾ ಕೈಂಕರ್ಯ ಮಾಡುವುದೇ ಪರಮಪುರುಷಾರ್ಥವೆಂದು ತಿಳಿಸಿದ್ದಾರೆ.

**2ನೆಯ ಶತಕದಲ್ಲಿ**- ಆ ಕೈಂಕರ್ಯವು ಮಮಕಾರ ರಹಿತವಾಗಿ ಭಗವಂತನ ಆನಂದಕ್ಕಾಗಿಯೇ ಮಾಡಲ್ಪಡಬೇಕೆಂದು ತಿಳಿಸಿದ್ದಾರೆ.

**3ನೆಯ ಶತಕದಲ್ಲಿ**-ಭಾಗವತಶೇಷತ್ವಪರ್ಯನ್ತವಾಗಿ ಭಗವತ್ ಕೈಂಕರ್ಯವು ಮಾಡಲ್ಪಡಬೇಕೆಂದು ತಿಳಿಸಿದ್ದಾರೆ.

**4ನೆಯ ಶತಕದಲ್ಲಿ**-ಐಶ್ವರ್ಯ ಕೈವಲ್ಯಗಳೆಲ್ಲವೂ ಅಸ್ಥಿರವೂ ಅತ್ಯಲ್ಪವೂ ಆದ ಪುರುಷಾರ್ಥವೆಂದೂ ಭಗವತ್‌ಶೇಷತ್ವವೇ ತನ್ಮೂಲಕ ಭಗವತ್‌ಕೈಂಕರ್ಯವೇ ಮೇಲಾದ ಪುರುಷಾರ್ಥವೆಂದೂ ತಿಳಿಸಿದ್ದಾರೆ.

**5ನೆಯ ಶತಕದಲ್ಲಿ**-ಭಗವದ್ಭಕ್ತಿಯನ್ನು ನಿರೂಪಿಸಿ ಭಗವಂತನ ಕಾರುಣ್ಯಪ್ರಭಾವವನ್ನು ತಿಳಿಸಿದ್ದಾರೆ. ಇಲ್ಲಿ ಭಾಗವತರಿಗೆ ಪೊಲಿಹ, ಪೊಲಿಹ ಎಂದು ಮಂಗಳಾಶಾಸನ ಮಾಡಿದ್ದಾರೆ.

**6ನೆಯ ಶತಕದಲ್ಲಿ**-ಶ್ರೀಸಹಿತನಾದ ಭಗವಂತನ ಪಾದಾರವಿಂದಗಳಲ್ಲಿ ಶರಣಾಗತಿ ಮಾಡಿದ್ದಾರೆ.

**7ನೆಯಶತಕದಲ್ಲಿ**-ಭಗವಂತನ ದರ್ಶನವನ್ನು ಮಾನಸಿಕವಾಗಿ ಪಡೆಯುತ್ತಾರೆ. ವಿರೋಧಿಸ್ವರೂಪವನ್ನೂ ತಿಳಿಸಿದ್ದಾರೆ.

**8ನೆಯಶತಕದಲ್ಲಿ**-ತಮಗೆ ಆತ್ಯಾತ್ಮೀಯ ವೈರಾಗ್ಯವು ಇಲ್ಲದಿರುವುದ ರಿಂದ ತಮಗೆ ಭಗವಂತನ ದರ್ಶನವು ಲಭಿಸಿಲ್ಲವೆಂದು ಶಂಕಿಸುತ್ತಾರೆ. ವಿರೋಧಿ ನಿವೃತ್ತಿ ಪ್ರಕಾರವನ್ನೂ ತಿಳಿಸುತ್ತಾರೆ. ಭಗವಂತನ ಸಂಕೀರ್ತನಾದಿ ವಾಚಿಕ ಕೈಂಕರ್ಯದಿಂದಲೂ, ಅವನ ಕಲ್ಯಾಣ ಗುಣಾನುಭವದಿಂದಲೂ ತಮಗೆ ಸಂಸಾರದಲ್ಲಿ ನಿರಾಸೆ ಉಂಟಾಗಿ, ವಿರೋಧಿ ನಿವೃತ್ತಿಯಾಯಿತೆಂದೂ, ದಿವ್ಯದೇಶ ಸೇವೆಯಿಂದ ಸರ್ವಾಭೀಷ್ಟಸಿದ್ಧಿ ಆಯಿತೆಂದೂ ತಿಳಿಸಿದ್ದಾರೆ.

**9ನೆಯಶತಕದಲ್ಲಿ**-ಭಗವಂತನು ಸರ್ವರಕ್ಷಕನೆಂಬುದನ್ನು ತಿಳಿಸಿ. ಅವನ ಶೀಲಗುಣವನ್ನು ಅನುಭವಿಸುತ್ತಾ ದಿವ್ಯದೇಶಗಳ ಅರ್ಚಾಮೂರ್ತಿಗಳನ್ನು ಮಾನಸಿಕವಾಗಿ ಆರಾಧಿಸುತ್ತಾರೆ.

**10ನೆಯ ಶತಕದಲ್ಲಿ**-ಪರಮಾತ್ಮನು ತಮಗೆ ಪರಮಪುರುಷಾರ್ಥವಾದ

ಪರಮಪದಪ್ರಾಪ್ತಿಯನ್ನು ಅನುಗ್ರಹಿಸಿದನೆಂಬುದನ್ನು ತಿಳಿಸುತ್ತಾರೆ. ಅರ್ಚಿರಾದಿ ಮಾರ್ಗದ ಮೂಲಕ ತಾವು ಮೋಕ್ಷಾನಂದವನ್ನು ಪಡೆದುದನ್ನು ವರ್ಣಿಸಿದ್ದಾರೆ.

ಒಟ್ಟಿನಲ್ಲಿ ಪರಮಾತ್ಮನೇ ನಾವು ಸೇವಿಸಬೇಕಾದವನೂ, ಪರಮ ಭೋಗ್ಯನೂ, ದಿವ್ಯಮಂಗಳ ವಿಗ್ರಹ ವಿಶಿಷ್ಟನೂ, ಪರಮಪುರುಷಾರ್ಥವನ್ನು ಪಡೆಯಲು ಕಾರಣನೂ,ಪ್ರಪನ್ನರಿಗೆ ಸುಲಭವಾಗಿ ಲಭಿಸುವವನೂ, ಆಶ್ರಿತರ ಅನಿಷ್ಟಗಳನ್ನು ಹೋಗಲಾಡಿಸುವವನೂ, ಅವರ ಇಷ್ಟಾರ್ಥಗಳನ್ನು ನೆರವೇರಿಸುವವನೂ ಆಗಿದ್ದಾನೆ ಎಂದೂ; ಅವನೇ ಆಶ್ರಿತ ವತ್ಸಲನೂ, ಸಕಲ ವಿಧಬಂಧುವೂ, ಸತ್ಪದವಿಯನ್ನು ಅನುಗ್ರಹಿಸುವವನೂ ಆಗಿದ್ದಾನೆ ಎಂದೂ; ಅವನನ್ನು ಹೊಂದಲು ನಮಗೆ ಅವನೇ ಉಪಾಯವು ಎಂದೂ ತಿರುವಾಯ್ಮೊಳಿಯ ಹತ್ತು ಶತಕಗಳಿಂದ ಶ್ರೀ ನಮ್ಮಾಳ್ವಾರ್ರು ವಿವರವಾಗಿ ತಿಳಿಸಿದ್ದಾರೆ. ತಿರುವಾಯ್ಮೊಳಿಯ ಕೊನೆಯಲ್ಲಿ ಆಳ್ವಾರ್ರು ತಾವು ಪರಮಾತ್ಮನ ದಿವ್ಯ ಸಾಕ್ಷಾತ್ಕಾರ ಪಡೆದದ್ದನ್ನು ತಿಳಿಸಿ ತಮ್ಮ ಉಪದೇಶವನ್ನು ಮುಕ್ತಾಯಗೊಳಿಸಿದ್ದಾರೆ. ಇವರು ಅನೇಕ ದಿವ್ಯದೇಶಗಳ ಅರ್ಚಾಮೂರ್ತಿಗಳಿಗೆ ಮಂಗಳಾಶಾಸನ ರೂಪವಾಗಿ ಅನೇಕ ಪಾಶುರಗಳನ್ನು ಹಾಡಿದ್ದಾರೆ. ಆಳ್ವಾರ್ರವರ ಮಹಿಮೆಯನ್ನು ನೋಡಲು ನಿತ್ಯಸೂರಿಗಳೂ ಇವರ ಬಳಿಗೆ ಬಂದು ಸೇರಿದರು. ಇವರು 'ಪೊಲಿಹ, ಪೊಲಿಹ'-ಎಂಬ ಪಾಶುರ ಹಾಡಿ ಅವರೆಲ್ಲರಿಗೂ ಮಂಗಳವನ್ನು ಕೋರಿದ್ದಾರೆ.

ಇವರು ಆದಿನಾಥ ದೇವರು ಪ್ರಸಾದಿಸಿದ ವಕುಳಮಾಲೆಯನ್ನು ಸರ್ವದಾ ಧರಿಸಿದ್ದುದರಿಂದ 'ವಕುಳಾಭರಣರ್' ಎಂಬ ಹೆಸರು ಪಡೆದರು.

ಯಾವಾಗಲೂ ಪರಭಕ್ತಿ ಪರಜ್ಞಾನ ಪರಮಭಕ್ತಿಯುತರಾಗಿ ಇದ್ದುಕೊಂಡು, ಲೌಕಿಕ ವ್ಯವಹಾರ ವಿಷಯಗಳಲ್ಲಿ ಸ್ವಲ್ಪವೂ ಆಸೆ ಹೊಂದದೆ ಬದುಕಿ, ಅನಂತರ ನಿತ್ಯಸೂರಿಗಳು ಎದಿರುಗೊಳ್ಳಲು, ಕಿನ್ನರ ಗಂಧರ್ವಾದಿಗಳು ಗೀತೆಗಳನ್ನು ಹಾಡುತ್ತಿರಲು, ದೇವತೆಗಳು ಸ್ತೋತ್ರ

ಮಾಡುತ್ತಿರಲು ಇವರು ವೈಕುಂಠ ಮಹಾನಗರಕ್ಕೆ ಹೋಗಿ ಅಲ್ಲಿ ತಿರುಮಾಮಣಿ ಮಂಟಪದಲ್ಲಿ ನಿತ್ಯಾನಂದಭರಿತರಾದರು.

ಹೀಗೆ ಅಪ್ರತಿಮ ವೈಭವವನ್ನು ಹೊಂದಿದ ಈ ಆಳ್ವಾರು, ಭಗವಂತನ ಶ್ರೀಪಾದಗಳಿಗೆ ಬಹಳ ಆಂತರ್ಯರಾಗಿದ್ದುದರಿಂದ 'ಶ್ರೀ ಶಠಕೋಪರು' ಅಂದರೆ ಭಗವಂತನ ಪಾದುಕೆ ಎಂಬ ತಿರುನಾಮ ಹೊಂದಿದ್ದಾರೆ. ಒಟ್ಟು ಈ ಹನ್ನೆರಡು ಆಳ್ವಾರುಗಳಲ್ಲಿ ನಮ್ಮಾಳ್ವಾರು ಮುಖ್ಯರಾದವರೆಂದು ಪರಿಗಣಿಸಲ್ಪಟ್ಟಿದ್ದಾರೆ. ಮೇಲೆ ತಿಳಿಸಿರುವಂತೆ ಇವರು ಮಾರನ್,ಶ್ರೀ ಶಠಕೋಪರ್, ನಮ್ಮಾಳ್ವಾರ್ ಎಂಬ ನಾಮಗಳನ್ನು ಹೊಂದಿ ಪ್ರಖ್ಯಾತರಾಗಿದ್ದಾರೆ.

**ಇವರ ತನಿಯನ್**

**ಮಾತಾಪಿತಾ ಯುವತಯಸ್ತನಯಾ ವಿಭೂತಿಃ**
**ಸರ್ವಂ ಯದೇವ ನಿಯಮೇನ ಮದನ್ವಯಾನಾಮ್ ।**
**ಆದ್ಯಸ್ಯ ನಃ ಕುಲಪತೇರ್ವಕುಳಾಭಿರಾಮಂ**
**ಶ್ರೀಮತ್ತದಂಘ್ರಿಯುಗಳಂ ಪ್ರಣಮಾಮಿ ಮೂರ್ಧ್ನಾ ॥**

# ಮಧುರ ಕವಿಯಾಳ್ವಾರ್

ಇವರು ಆಳ್ವಾರ್ ತಿರುನಗರಿಗೆ ಸಮೀಪದಲ್ಲಿರುವ ತಿರುಕ್ಕೋಳೂರಿನಲ್ಲಿ ಚೈತ್ರಮಾಸ ಚಿತ್ತಾ ನಕ್ಷತ್ರದಲ್ಲಿ ಶ್ರೀಕುಮುದ ನಾಮಗಣಾಧಿಪನ ಅಂಶರಾಗಿ ಶ್ರೀ ನಮ್ಮಾಳ್ವಾರ್ ಅವತರಿಸುವುದಕ್ಕೆ ಮುಂಚೆಯೇ ಅವತರಿಸಿದರು. ಬ್ರಾಹ್ಮಣ ಕುಲದಲ್ಲಿ ಜನಿಸಿದ ಇವರು ವೇದಶಾಸ್ತ್ರಗಳನ್ನೆಲ್ಲಾ ಬಾಲ್ಯದಲ್ಲಿಯೇ ಚೆನ್ನಾಗಿ ಅಭ್ಯಾಸ ಮಾಡಿ ಕವಿತೆಗಳನ್ನು ಹಾಡಬಲ್ಲವರಾಗಿದ್ದರು. ಆದ್ದರಿಂದ ಇವರಿಗೆ **ಮಧುರಕವಿ** ಎಂಬ ಹೆಸರುಂಟಾಯಿತು. ಇವರು ಮಹಾ ವಿರಕ್ತರಾಗಿದ್ದರು ಮತ್ತು ಪರಮಾತ್ಮನಲ್ಲಿ ಹೆಚ್ಚಾದ ಭಕ್ತಿಹೊಂದಿ ಯೋಗನಿಷ್ಠರಾಗಿದ್ದರು. ಇವರು ದಿವ್ಯದೇಶಗಳ ಯಾತ್ರೆ ಮಾಡಲು ಹೊರಟು ದಕ್ಷಿಣದ ಶ್ರೇಷ್ಠವಾದ ದಿವ್ಯದೇಶಗಳ ಅರ್ಚಾಮೂರ್ತಿಗಳನ್ನು ಸೇವಿಸಿ ಅಯೋಧ್ಯಾ ನಗರಕ್ಕೆ ಬಂದು ಅಲ್ಲಿ ಕೆಲವು ಕಾಲ ವಾಸಿಸುತ್ತಿದ್ದರು.

ಆಗ ಒಂದು ದಿವಸ ರಾತ್ರಿಯಲ್ಲಿ ಇವರು ತಮ್ಮ ಜನ್ಮ ಭೂಮಿಯಾದ ತಿರುಕ್ಕೋಳೂರಿನ ಭಗವಂತನಿಗೆ ಅಲ್ಲಿಂದಲೇ ನಮಸ್ಕರಿಸಬೇಕೆಂದು ಹೊರಗೆ ಬಂದು ದಕ್ಷಿಣದ ಕಡೆ ನೋಡಲು ಆ ದಿಕ್ಕಿನಲ್ಲಿ ಒಂದು ಅಪ್ರತಿಮವಾದ ದಿವ್ಯ ತೇಜಸ್ಸನ್ನು ಕಂಡರು. ಅದೇನೆಂದು ತಿಳಿಯದೆ ಕಾಡುಗಿಚ್ಚು ಇರಬಹುದು ಎಂದು ಸಂದೇಹಿಸಿದರು. ಆದರೆ ಎರಡು ಮೂರು ದಿವಸಗಳಾದರೂ ಆ ದಿವ್ಯ ತೇಜಸ್ಸು ಸೂರ್ಯಚಂದ್ರ, ಅಗ್ನಿ ಇವುಗಳ ತೇಜಸ್ಸಿಗಿಂತಲೂ ಬಹಳ ಹೆಚ್ಚಾಗಿ ಕಾಣಿಸಲು ಬಹಳ ಆಶ್ಚರ್ಯವನ್ನು ಹೊಂದಿದರು. ಅದನ್ನು ಸಮೀಪದಲ್ಲಿ ಹೋಗಿ ನೋಡಿ ತಿಳಿದುಕೊಳ್ಳಬೇಕೆಂಬ ಆತುರವುಳ್ಳವರಾಗಿ ಆ ತೇಜಸ್ಸನ್ನೇ ತಮ್ಮ ಗುರಿಯಾಗಿ ಇಟ್ಟುಕೊಂಡು ವೇಗವಾಗಿ ನಡೆದು ಆಳ್ವಾರ್

ತಿರುನಗರಿಗೆ ಬಂದು ಸೇರಿದರು. ಅಲ್ಲಿ ನಮ್ಮಾಳ್ವಾರ್ರ ಶರೀರದಲ್ಲಿ ಈ ರೀತಿಯ ತೇಜಸ್ಸು ಹೊಳೆಯುತ್ತಿರುವುದನ್ನು ನೋಡಿ ಆಶ್ಚರ್ಯಭರಿತರಾದರು. ನಮ್ಮಾಳ್ವಾರ್ರವರು ಅಪ್ರಾಕೃತರಾಗಿ ದೈವಿಕರಾಗಿರುವ ವಿಷಯವನ್ನು ಇವರು ಹಿಂದೆಯೇ ಕೇಳಿದ್ದುದರಿಂದ ಅವರಿಗೆ ಕಿವಿಯು ಕೇಳಿಸುತ್ತದೆಯೋ ಇಲ್ಲವೋ ಮಾತನಾಡುತ್ತಾರೆಯೋ ಇಲ್ಲವೋ ಎಂಬುದನ್ನು ತಿಳಿಯಲು ಒಂದು ಚಿಕ್ಕ ಕಲ್ಲನ್ನು ಎಸೆದು ಪ್ರಯತ್ನಿಸಿದರು. ಆಗ ಆ ಶಬ್ದವನ್ನು ಕೇಳಿ ನಮ್ಮಾಳ್ವಾರ್ರವರು ಕಣ್ಣು ತೆರೆದು ಇವರನ್ನು ಕಟಾಕ್ಷಿಸಿದರು. ಅನಂತರ ಇವರು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರಗಳನ್ನು ತಿಳಿಸಿದರೆಂಬುದು ನಮ್ಮಾಳ್ವಾರ್ರವರ ಚರಿತ್ರದಲ್ಲೇ ವಿವರಿಸಿ ತಿಳಿಸಲ್ಪಟ್ಟಿದೆ. ಅವರ ಮಾತನ್ನು ಕೇಳಿದ ಮಧುರಕವಿಗಳು ಅವರ ಜ್ಞಾನ ವೈಭವವನ್ನು ನೋಡಿ ಅವರಲ್ಲಿ ಅತ್ಯಂತ ಗೌರವವನ್ನೂ ಭಕ್ತಿಯನ್ನೂ ಹೊಂದಿ ಅವರನ್ನು ತಮ್ಮ ಆಚಾರ್ಯರೆಂದು ಪರಿಗ್ರಹಿಸಿ ಅವರಿಗೆ ಶರಣಾದರು.

ಆಗ ನಮ್ಮಾಳ್ವಾರ್ರು ಇವರಿಗೆ ಪಂಚಸಂಸ್ಕಾರವನ್ನು ಕರುಣಿಸಿ ಇವರ ಸಹಾಯದಿಂದ ಅರ್ಚಾವತಾರದ ವೇದಗಳಾದ ದ್ರಾವಿಡ ಪ್ರಬಂಧಗಳನ್ನು ಅನುಗ್ರಹಿಸಲು ಪ್ರಾರಂಭಿಸಿ ಚತುರ್ವೇದ ಸಾರವಾದ ನಾಲ್ಕು ದಿವ್ಯಪ್ರಬಂಧಗಳನ್ನು ರಚಿಸಿ ಅವುಗಳನ್ನು ಮಧುರಕವಿಗಳಿಗೆ ಉಪದೇಶಿಸಿದರು.

ಮಧುರಕವಿಗಳು ತಾವು ಉಪದೇಶವಾಗಿ ಹೊಂದಿದ ದಿವ್ಯಪ್ರಬಂಧಗಳನ್ನು ಒಳ್ಳೆಯ ರಾಗದಲ್ಲಿ ತಾಳದೊಂದಿಗೆ ಯಾವಾಗಲೂ ಪಾರಾಯಣ ಮಾಡುತ್ತಾ ಆಳ್ವಾರ್ರಿಗೆ ಪ್ರಧಾನ ಶಿಷ್ಯರಾದರು. ಹಿಂದೆ ಭರತಾಳ್ವಾನ್‌ನಿಗೆ ಶಿಷ್ಯರಾಗಿದ್ದ ಶತ್ರುಘ್ನನಂತೆ ಭಗವದ್ಭಕ್ತಿಗಿಂತ ಭಾಗವತ ಭಕ್ತಿಯನ್ನು ಪರಮ ಅನುಷ್ಠಾನವಾಗಿ ಪರಿಗಣಿಸಿದರು. ಇವರು ನಮ್ಮಾಳ್ವಾರ್ರ ವಿಷಯವಾಗಿ ''ಕಣ್ಣಿನುಣ್ ಶಿರುತ್ತಾಂಬು'' ಎಂಬ ದಿವ್ಯಪ್ರಬಂಧವನ್ನು ಹಾಡಿ ಮುಮುಕ್ಷುಗಳಿಗೆ ಉಪಕರಿಸಿದ್ದಾರೆ.

ಇವರು ಜೀವಿಸಿರುವಾಗಲೇ ನಮ್ಮಾಳ್ವಾರವರು ದೇವರ ಪಾದಾರವಿಂದವನ್ನು ಸೇರಿದರು. ಆಚಾರ್ಯರ ನಿಧನದಿಂದ ಬಹಳ ದುಃಖ ಹೊಂದಿದ ಮಧುರಕವಿಗಳು ಕಾಲಕ್ರಮದಲ್ಲಿ ಚೇತರಿಸಿಕೊಂಡು ಆಚಾರ್ಯರ ವಿಗ್ರಹವನ್ನು ಆಳ್ವಾರ್ ತಿರುನಗರಿ ಎಂಬಲ್ಲಿ ಪ್ರತಿಷ್ಠಿಸಿ ಅವರಿಗೆ ನಿತ್ಯ ನೈಮಿತ್ತಿಕಾದಿ ಉತ್ಸವಗಳನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದರು. ಅನೇಕ ಉತ್ಸವಗಳಲ್ಲಿ ಎಲ್ಲರೂ ಬೀದಿಯಲ್ಲಿ ''ವೇದಂ ತಮಿಳ್ ಶೈದಮಾರನ್ ಬಂದರು, ತಿರುವಾಯ್ಮೊಳಿ ಪೆರುಮಾಳ್ ಬಂದರು, ತಿರುನಗರಿ ಪೆರುಮಾಳ್ ಬಂದರು, ತಿರುವಳದಿ ವಳನಾಡರ್ ಬಂದರು, ತಿರುಕ್ಕುರುಹೂರ್‌ನಹರ್ ನಂಬಿ ಬಂದರು, ಕಾರಿಮಾರರ್ ಬಂದರು, ಶಠಕೋಪರ್ ಬಂದರು, ಪರಾಂಕುಶದಾಸರು ಬಂದರು''- ಎಂದೆಲ್ಲಾ ಹೇಳುತ್ತಾ ನಮ್ಮಾಳ್ವಾರನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು.

ಆಗ ಮಧುರೈಯ ತಮಿಳು ಸಂಘದ ಕೆಲವು ಪ್ರಮುಖರು ಅಸೂಯೆ ಹೊಂದಿ ನಮ್ಮಾಳ್ವಾರ್ರವರ ಬಿರುದುಗಳನ್ನು ಹೇಳಕೂಡದೆಂದು ತಡೆ ಮಾಡಿದರು. ನಮ್ಮಾಳ್ವಾರ್ರವರ ಪಾಶುರವನ್ನು ಬರೆದು ಸಂಘದ ಒಂದು ಹಲಗೆಯ ಮೇಲೆ ಇಟ್ಟು ಅದನ್ನು ನೀರಿನಲ್ಲಿ ಬಿಟ್ಟು ಅದು ಮೇಲೆ ತೇಲಿ ಬರುವಂತೆ ಮಾಡಿ ಜಯಿಸಿದರೆ ಆಗ ನಮ್ಮಾಳ್ವಾರ್ರ ಈ ಬಿರುದುಗಳನ್ನೆಲ್ಲಾ ಹೇಳಿ ಕೊಂಡಾಡಬಹುದು ಎಂದು ಹೇಳಿದರು.

ಇದನ್ನು ಕೇಳಿ ಮಧುರ ಕವಿ ಆಳ್ವಾರ್ರು ಬಹಳವಾಗಿ ಮನನೊಂದರು. ಅವರಿಗೆ ಗರ್ವಭಂಗ ಮಾಡುವಂತೆ ಶ್ರೀ ನಮ್ಮಾಳ್ವಾರ್ರನ್ನು ಪ್ರಾರ್ಥಿಸಿದರು. ಅನಂತರ ''ಕಣ್ಣನ್ ಕಳಲಿನ್ನೈ'' ಎಂಬ ತಿರುವಾಯ್ಮೊಳಿ ಪಾಶುರವನ್ನು ಒಂದು ಚಿಕ್ಕ ಹಲಗೆಯ ಮೇಲೆ ಬರೆದು ಅದನ್ನು ಸಂಘದ ಹಲಗೆಯಲ್ಲಿ ಇಟ್ಟು ನೀರಿನಲ್ಲಿ ಬಿಡುವಂತೆ ಹೇಳಿ ಸಂಘದವರಿಗೆ ಕೊಟ್ಟರು. ಅದರಂತೆ ಅವರು ಮಾಡಲು ಆ ಸಂಘದ ಹಲಗೆಯು ನಮ್ಮಾಳ್ವಾರ್ರ ಪಾಶುರವನ್ನು ಬರೆದುಕೊಟ್ಟಿದ್ದ ಚಿಕ್ಕ ಹಲಗೆಯನ್ನು ಮೇಲೆ ಧರಿಸಿಕೊಂಡು ಬಂದಿತು ಮತ್ತು ಅದರಲ್ಲಿ ಕುಳಿತಿದ್ದ

300 ಜನ ಸಂಘದವರನ್ನೂ ನೀರಿನಲ್ಲಿ ತಳ್ಳಿಬಿಟ್ಟಿತು. ಆಗ ನೀರಿನಲ್ಲಿ ಬಿದ್ದ ಅವರು ಕಷ್ಟದಿಂದ ಈಜಿಕೊಂಡು ಬಂದು ದಡ ಸೇರಿದರು. ತಮಿಳು ಸಂಘದ ಮುಖಂಡರು ಸಕಲ ವೇದಶಾಸ್ತ್ರಪಾರಂಗತರೂ ಭಗವದಂಶಭೂತರೂ ಆದ ನಮ್ಮಾಳ್ವಾರ್ರವರ ದೈವಿಕಶಕ್ತಿಯನ್ನೂ ಪಾಂಡಿತ್ಯವನ್ನೂ ಅರಿತುಕೊಂಡರು. ಗರ್ವಭಂಗ ಹೊಂದಿದವರಾಗಿ ತಾವು ಅಪಚಾರವೆಸಗಿದುದಕ್ಕೆ ಅನುತಾಪಹೊಂದಿ, ತಮ್ಮನ್ನು ಕ್ಷಮಿಸುವಂತೆ ಮಧುರಕವಿ ಆಳ್ವಾರ್ರನ್ನು ಪ್ರಾರ್ಥಿಸಿದರು ಮತ್ತು ಆಳ್ವಾರ್ರ ಮಹಿಮೆಯನ್ನು ಕುರಿತು ಅನೇಕ ಸ್ತೋತ್ರಗಳನ್ನು ಹಾಡಿದರು. ಇದರಿಂದ ಆಳ್ವಾರ್ರವರ ಮಹಿಮೆಯು ಮೊದಲಿಗಿಂತ ಹತ್ತರಷ್ಟು ಹೆಚ್ಚಾಯಿತು.

ಹೀಗೆ ಮಧುರಕವಿ ಆಳ್ವಾರ್ರು ತಮ್ಮ ಆಚಾರ್ಯರಾದ ನಮ್ಮಾಳ್ವಾರ್ರವರ ಹಿರಿಮೆಯನ್ನು ಊರೂ ನಾಡೂ ಜಗತ್ತೂ ಅರಿಯುವಂತೆ ಪ್ರಕಾಶಪಡಿಸುತ್ತಾ ತಿರುನಗರಿಯಲ್ಲಿಯೇ ಕೆಲವು ಕಾಲ ವಾಸಿಸುತ್ತಿದ್ದು ಅನಂತರ ದೇವರ ಪಾದಾರವಿಂದವನ್ನು ಸೇರಿದರು. ಇವರು ರಚಿಸಿರುವ ''ಕಣ್ಣಿನುಣ್ ಶಿರತ್ತಾಂಬು'' ಎಂಬ ಹತ್ತು ಪಾಶುರಗಳು ಬಹಳ ಪ್ರಸಿದ್ಧಿ ಪಡೆದಿವೆ. ಇದರಲ್ಲಿ ಶ್ರೀ ನಮ್ಮಾಳ್ವಾರ್ರವರ ಮಹಿಮೆಯನ್ನು ಬಹಳವಾಗಿ ಕೊಂಡಾಡಿದ್ದಾರೆ. ಶ್ರೀನಾಥಮುನಿಗಳು ಈ ಚಿಕ್ಕ ಪ್ರಬಂಧವನ್ನು ಶ್ರೀನಮ್ಮಾಳ್ವಾರನ್ನು ಧ್ಯಾನಿಸುತ್ತಾ 12 ಸಾವಿರ ಸಲ ಹಾಡಿ, ಅದರ ಫಲವಾಗಿ ಶ್ರೀನಮ್ಮಾಳ್ವಾರ್ರ ದರ್ಶನ ಪಡೆದು ಅವರ ಅನುಗ್ರಹದಿಂದ ದಿವ್ಯಜ್ಞಾನಭರಿತರಾದರೆಂದು ತಿಳಿಸಲ್ಪಟ್ಟಿದೆ.

**ಇವರ ತನಿಯನ್**

**ಹಸ್ತಸ್ಥತಾಳ ದ್ವಿತಯಂ ಪ್ರಪದ್ಯೇ**
**ಶಠಾರಿವಾಗ್ವ್ಯಾಸ ಮುದಾರಕೀರ್ತಿಮ್।**
**ಮಾಧುರ್ಯಸಂಶ್ಲಿಷ್ಟ ಕವಿತ್ವಯುಕ್ತಂ**
**ಮಹತ್ತ್ವಸಂಭಾವಿತ ಬುದ್ಧಿ ತತ್ತ್ವಮ್॥**

# ಉಪಸಂಹಾರ

ಆಳ್ವಾರ್ರುಗಳು ಅನುಗ್ರಹಿಸಿರುವ ದಿವ್ಯಪ್ರಬಂಧಗಳಿಗೆ ದ್ರಾವಿಡ ವೇದವೆಂದು ಹೆಸರು. ಅದರಲ್ಲಿ ಆಳ್ವಾರ್ರುಗಳು ಭಗವಂತನ ಸ್ವರೂಪ ರೂಪ ಗುಣಾದಿಗಳನ್ನೂ, ಅವನ ಮಹಿಮೆಯನ್ನೂ ವರ್ಣಿಸಿದ್ದಾರೆ. ಜೀವಾತ್ಮನ ಸ್ವರೂಪವನ್ನೂ, ಅವನು ಆಚರಿಸಬೇಕಾದ ಭಗವದ್ಭಕ್ತಿಯಿಂದ ಕೂಡಿದ ಶರಣಾಗತಿ ಉಪಾಯವನ್ನೂ, ಅದರ ಫಲವಾಗಿ ಅವನು ಪಡೆಯುವ ಭಗವದನುಭವರೂಪವಾದ ಮೋಕ್ಷಾನಂದವನ್ನೂ, ಇವೆಲ್ಲವನ್ನೂ ವಿವರವಾಗಿಯೂ, ವಿಸ್ತಾರವಾಗಿಯೂ ತಿಳಿಸಿದ್ದಾರೆ. ಅಲ್ಪವೂ ಅಸ್ಥಿರವೂ ಆದ ಪ್ರಾಪಂಚಿಕ ವಿಷಯಸುಖಗಳನ್ನು ತ್ಯಜಿಸಿ ಭಗವಂತನಲ್ಲಿ ಶರಣಾಗಿ ಭಗವದನುಭವ ಪಡೆಯುವಂತೆ ಜಗತ್ತಿನ ಮಾನವರಿಗೆಲ್ಲಾ ಉಪದೇಶ ನೀಡಿದ್ದಾರೆ. ಆದ್ದರಿಂದ ಆಳ್ವಾರುಗಳ ಪಾಶುರಗಳಲ್ಲಿ ಕೆಲವು, ಪರಮಾತ್ಮನ ಅನಂತ ಕಲ್ಯಾಣಗುಣಗಳನ್ನೂ, ಅವನ ದಯಾಗುಣವನ್ನೂ ವಿವರಿಸುವ ಪಾಶುರಗಳಾಗಿಯೂ; ಕೆಲವು, ಅವನ ಪರ, ವ್ಯೂಹ, ವಿಭವ, ಅಂತರ್ಯಾಮಿ ಅರ್ಚಾ ರೂಪಗಳನ್ನು ವಿವರಿಸುವ ಪಾಶುರಗಳಾಗಿಯೂ; ಮತ್ತೆ ಕೆಲವು, ಪರಮಾತ್ಮನಲ್ಲಿ ಪ್ರಾರ್ಥನೆ ಸಲ್ಲಿಸಿ ಅವನಲ್ಲಿ ಶರಣಾಗುವ ಪಾಶುರ ಗಳಾಗಿಯೂ; ಮತ್ತೆ ಕೆಲವು, ಲೋಕದ ಜನರಿಗೆ ಉಪದೇಶ ನೀಡುವ ಪಾಶುರಗಳಾಗಿಯೂ ಇವೆ. ಹೀಗೆ ಆಳ್ವಾರ್ರುಗಳು ಲೋಕದಲ್ಲಿ ಅವತರಿಸಿ, ತಮ್ಮ ದಿವ್ಯಪ್ರಬಂಧಗಳ ಮೂಲಕ ಲೋಕದ ಜನರಿಗೆ ತಾವು ಅನುಭವಿಸಿದ ಪರಮಾತ್ಮನ ಸ್ವರೂಪ ಗುಣ ವಿಭೂತಿಗಳನ್ನೂ, ಅವನ ಮಹಿಮೆಯನ್ನೂ ವಿವರಿಸಿ ತಿಳಿಸಿದ್ದಾರೆ. ಪರಮಾತ್ಮನ ಸಾಕ್ಷಾತ್ಕಾರ ಪಡೆಯುವುದೇ ಪರಮಪುರುಷಾರ್ಥವೆಂದೂ, ಅದಕ್ಕೆ ಅವನಲ್ಲಿ ಭಕ್ತಿ ಹೊಂದಿ ಶರಣಾಗತಿ ಮಾಡಿ ಅವನ ಅನುಗ್ರಹ ಪಡೆಯುವುದೇ ಉಪಾಯವೆಂದೂ ಉಪದೇಶ ನೀಡಿದ್ದಾರೆ.

ಇಲ್ಲಿಯವರೆಗೂ ಆಳ್ವಾರ್ರುಗಳ ವೈಭವವನ್ನು ತಿಳಿಸಿ ಆಯಿತು. ಆಳ್ವಾರ್ರುಗಳ ಕಾಲವಾದಮೇಲೆ ಜನರಿಗೆ ದಿವ್ಯಪ್ರಬಂಧಗಳೆಲ್ಲವೂ ಲಭಿಸದೆ ಮರೆಯಾಗಿ ಹೋಗಿದ್ದುವು. ಅವುಗಳನ್ನು ಮತ್ತೆ ಎಲ್ಲರಿಗೂ ಲಭಿಸುವಂತೆ ಮಾಡಬೇಕೆಂಬ ಉದ್ದೇಶದಿಂದ ಪರಮಾತ್ಮನು ಅನೇಕ ಆಚಾರ್ಯರುಗಳನ್ನು ಸೃಷ್ಟಿಸಿದ್ದಾನೆ. ಅವರುಗಳು ಭಗವಂತನ ಕೃಪೆಯಿಂದ ಆಳ್ವಾರ್ರುಗಳ ದಿವ್ಯಪ್ರಬಂಧವನ್ನೂ ಪರಮಾತ್ಮನ ಸ್ವರೂಪ ರೂಪಾದಿಗಳನ್ನೂ, ಜಗತ್ತಿನ ತತ್ತ್ವಹಿತ ಪುರುಷಾರ್ಥಗಳನ್ನೂ ಅರಿತವರಾಗಿ ಅವುಗಳನ್ನು ತಮ್ಮ ಉಪದೇಶದಿಂದಲೂ ಸ್ವಾನುಷ್ಠಾನದಿಂದಲೂ ಜನರಿಗೆ ತಿಳಿಯಪಡಿಸಿರುತ್ತಾರೆ. ಇವರುಗಳು ಆಳ್ವಾರ್ರುಗಳ ದಿವ್ಯಸೂಕ್ತಿಗಳನ್ನೂ, ವೈಷ್ಣವ ದರ್ಶನಗಳನ್ನೂ ಪ್ರಚಾರಪಡಿಸಬೇಕೆಂಬ ಅಭಿಪ್ರಾಯದಿಂದ ಅವುಗಳನ್ನೂ ಅವುಗಳಲ್ಲಿ ಉಪದೇಶಿಸಿರುವ ತತ್ತ್ವಹಿತ ಪುರುಷಾರ್ಥಗಳೆಲ್ಲವನ್ನೂ, ಅಂಗೈಯಿನ ನೆಲ್ಲಿ ಕಾಯಿಯಂತೆ ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಉತ್ತಮವಾದ ಗ್ರಂಥಗಳನ್ನು ರಚಿಸಿದ್ದಾರೆ ಮತ್ತು ಆಳ್ವಾರ್ರುಗಳ ದಿವ್ಯಪ್ರಬಂಧಗಳಿಗೆಲ್ಲಾ ವ್ಯಾಖ್ಯಾನಗಳನ್ನು ರಚಿಸಿ ಅನುಗ್ರಹಿಸಿದ್ದಾರೆ.

ಪೂರ್ವಾಚಾರ್ಯ ಪರಂಪರೆಯಲ್ಲಿ ಶ್ರೀಮನ್ನಾಥಮುನಿಗಳು ಮೊದಲನೆಯವರು. ಇವರ ಕಾಲದ ವೇಳೆಗೆ ಜನರಿಗೆ ದಿವ್ಯಪ್ರಬಂಧಗಳು ಬಳಕೆಯಲ್ಲಿರದೆ ಮರೆತುಹೋಗಿದ್ದವು. ಇವರು ಆಳ್ವಾರ್ ತಿರುನಗರಿಗೆ ಹೋಗಿ ಅಲ್ಲಿ ಪರಾಂಕುಶದಾಸರಿಂದ ನಮ್ಮಾಳ್ವಾರ್ರವರ ಪ್ರಧಾನ ಶಿಷ್ಯರಾದ ಮಧುರ ಕವಿಯಾಳ್ವಾರ್ರರು ರಚಿಸಿರುವ ''ಕಣ್ಣಿನುಣ್ ಶಿರತ್ತಾಂಬು'' ಎಂಬ ದಿವ್ಯಪ್ರಬಂಧದ ಉಪದೇಶ ಪಡೆದರು. ಅವರ ನಿಯಮನದಂತೆ ಆ ದಿವ್ಯಪ್ರಬಂಧವನ್ನು ನಮ್ಮಾಳ್ವಾರ್ರವರ ಶ್ರೀಪಾದವನ್ನು ಧ್ಯಾನ ಮಾಡುತ್ತಾ ನಾಥಮುನಿಗಳು 12 ಸಾವಿರಸಲ ಅನುಸಂಧಾನಮಾಡಿದರು. ಇದರಿಂದ ಸುಪ್ರೀತರಾದ ನಮ್ಮಾಳ್ವಾರ್ರವರು ನಾಥಮುನಿಗಳಿಗೆ ದಿವ್ಯಚಕ್ಷುಸ್ಸನ್ನು ಕೊಟ್ಟು ಅಶರೀರವಾಣಿಯ ಮೂಲಕ ರಹಸ್ಯತ್ರಯಗಳನ್ನೂ, ನಾಲಾಯಿರ

ದಿವ್ಯಪ್ರಬಂಧಗಳನ್ನೂ ಅನುಗ್ರಹಿಸಿದರು. ಅನಂತರ ಇಷ್ಟುದಿನವೂ ಮರೆತುಹೋಗಿದ್ದ ದಿವ್ಯ ಪ್ರಬಂಧಗಳೆಲ್ಲವೂ ನಾಥಮುನಿಗಳ ಮೂಲಕ ಜಗತ್ತಿನಲ್ಲಿ ಪ್ರಚಾರಕ್ಕೆ ಬಂದವು. ಆದರಿಂದ ಇಂದಿಗೂ ಲೋಕದ ಜನರೆಲ್ಲರೂ ಅವುಗಳನ್ನು ಅರಿತು ಅನುಸಂಧಾನ ಮಾಡಿ ಸದ್ಗತಿಯನ್ನು ಪಡೆಯಲು ಸಾಧ್ಯವಾಗಿದೆ.

ಶ್ರೀನಾಥಮುನಿಗಳ ನಂತರ ಆಚಾರ್ಯ ಪೀಠವನ್ನು ಅಲಂಕರಿಸಿದ ಅವರ ಪೌತ್ರರಾದ ಶ್ರೀ ಯಾಮುನಾಚಾರ್ಯರೂ, ಅವರ ನಂತರ ವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪಕರೂ, ಪ್ರಧಾನ ಆಚಾರ್ಯರೂ ಆದ ಶ್ರೀರಾಮಾನುಜಾಚಾರ್ಯರೂ ಆಳ್ವಾರ್ರುಗಳ ದಿವ್ಯಪ್ರಬಂಧಗಳಿಗೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಅವುಗಳನ್ನು ಇಂದಿಗೂ ಶ್ರೀವೈಷ್ಣವ ದೇವಾಲಯಗಳಲ್ಲಿ ಪ್ರತಿದಿನವೂ ಪಾರಾಯಣ ಮಾಡಬೇಕೆಂಬ ನಿಯಮವನ್ನು ಶ್ರೀರಾಮಾನುಜಾಚಾರ್ಯರು ಜಾರಿಗೆ ತಂದಿದ್ದಾರೆ. ಅವರ ನಂತರ ಆಚಾರ್ಯಪೀಠವನ್ನು ಅಲಂಕರಿಸಿದ ಪೂರ್ವಾಚಾರ್ಯರುಗಳೂ, ಅವರ ಶಿಷ್ಯರುಗಳೂ, ಪ್ರಧಾನ ಆಚಾರ್ಯರುಗಳಾದ ಶ್ರೀ ಮಣವಾಳ ಮಾಮುನಿಗಳೂ ಮತ್ತು ಶ್ರೀ ವೇದಾಂತದೇಶಿಕರೂ ದಿವ್ಯಪ್ರಬಂಧ ವ್ಯಾಖ್ಯಾನಗಳನ್ನು ರಚಿಸಿ ಸಾರಾರ್ಥವನ್ನು ವಿವರಿಸಿ ಆಳ್ವಾರ್ರುಗಳ ವೈಭವವನ್ನೂ, ಉಪದೇಶಗಳನ್ನೂ ಇಂದಿಗೂ ಎಲ್ಲರೂ ಅರಿಯುವಂತೆ ಉಪಕಾರ ಮಾಡಿದ್ದಾರೆ.

*ಆಳ್ವಾರ್ ಆಚಾರ್ಯರ್ ಎಂಬೆರುಮಾನಾರ್ ಜೀಯರ್ ತಿರುವಡಿಹಳೇ ಶರಣಂ*

*ಶ್ರೀ ಕೃಷ್ಣಾರ್ಪಣಮಸ್ತು*

# ಗ್ರಂಥಸೂಚೀ

1. ಪಿನ್ಬಳಹಿಯ ಪೆರುಮಾಳ್ ಜೀಯರ್ ಅವರು ರಚಿಸಿದ-
''ಆರಾಯಿರಪ್ಪಡಿ ಗುರುಪರಂಪರಾಪ್ರಭಾವಂ''
(ತಮಿಳು ಗ್ರಂಥ)

2. ''ಆಳ್ವಾರ್‌ಹಳ್ ವೈಭವಂ'' (ತಮಿಳು)
ಲೇಖಕರು : ಪ್ರತಿವಾದಿಭಯಂಕರಂ ಅಣ್ಣಂಗರಾಚಾರ್ಯ ಸ್ವಾಮಿಗಳು
(ಗೀತಾಚಾರ್ಯ ಪ್ರೆಸ್ - ಮದರಾಸ್-1941)

3. ''ಶ್ರೀವೈಷ್ಣವಸುಧಾನಿಧಿ'' ಕನ್ನಡ
ಲೇಖಕರು : ಶ್ರೀ ಮುಡುಂಬೈ ರಾಮಾನುಜ ಐಯ್ಯಂಗಾರ್
(ಶ್ರೀ ಕಂಚೀ ವಾದಿಕೇಸರೀ
ಅಳಹಿಯ ಮಣವಾಳ ಜೀಯರ್ ಮಹಾಸ್ವಾಮಿಗಳು - 1961)

4. ''ಶ್ರೀ ಕಲ್ಕಿಸಿಂಹ ಭಗವತ್ಪ್ರಬನ್ಧಮಾಲಾ'' (ಕನ್ನಡ)
(ವಿ. ಬಿ. ಸುಬ್ಬಯ್ಯಶೆಟ್ಟಿ ಅಂಡ್ ಸನ್ಸ್, ಬೆಂಗಳೂರು, 1931)

5. ''ಆಳ್ವಾರ್‍ರುಗಳ ಚರಿತ್ರೆ''
ಲೇಖಕರು- ಶ್ರೀ ಎಂ.ಓ.ಎಸ್. ಐಯ್ಯಂಗಾರ್
(ಜನವರಿ 1970 ರಿಂದ ಆಗಸ್ಟ್ 1971ವರೆಗಿನ 'ಸಪ್ತಗಿರಿ'
ತಿರುಪತಿ ಮಾಸಪತ್ರಿಕೆಯ ಲೇಖನಗಳು)